# ಸಮಗ್ರ ಕನ್ನಡ ಜನಪದ ಮತ್ತು ಯಕ್ಷಗಾನ ಸಾಹಿತ್ಯಮಾಲೆ - ೧೬

## ಶುಭ ಸಂದೇಶ

**ಬಿ.ಎಸ್. ಯಡಿಯೂರಪ್ಪ**
ಮುಖ್ಯಮಂತ್ರಿ

ವಿಧಾನ ಸೌಧ
ಬೆಂಗಳೂರು – ೫೬೦ ೦೦೧

ದಿನಾಂಕ : ೧೬-೦೯-೨೦೦೯

**ಶುಭ ಸಂದೇಶ**

ಸಾವಿರಾರು ವರ್ಷಗಳ ಇತಿಹಾಸವಿರುವ, ಎಲ್ಲ ವಿದ್ಯೆಗಳ ತೊಟ್ಟಿಲಾಗಿರುವ, ಕನ್ನಡ ಸಂಸ್ಕೃತಿಯ ಖಜಾನೆಯಾಗಿರುವ ಜಾನಪದ ಸಾಹಿತ್ಯ ಹಾಗೂ ಕಲಾ ಪ್ರಕಾರಗಳ ಎಲ್ಲಾ ಆಯಾಮಗಳನ್ನು ಪ್ರತಿಬಿಂಬಿಸುವ **''ಸಮಗ್ರ ಕನ್ನಡ ಜಾನಪದ ಮತ್ತು ಯಕ್ಷಗಾನ ಸಾಹಿತ್ಯ ಸಂಪುಟ''**ಗಳನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕರ್ನಾಟಕ ಜಾನಪದ ಅಕಾಡೆಮಿಯವರು ಹೊರತರುತ್ತಿರುವುದು ಸಂತಸದ ಸಂಗತಿ.

**''ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್''** ಎಂಬ ವ್ಯಾಖ್ಯಾನ ನಮ್ಮ ಜಾನಪದ ಸಾಹಿತ್ಯದ ಸಾರವಾಗಿದೆ. ಕನ್ನಡ ನೆಲ-ಜಲ-ಸಂಸ್ಕೃತಿಯ ವಿರಾಟ್ ದರ್ಶನವನ್ನು ನೀಡುವ ಈ ಸಂಪುಟಗಳು, ನಿಜಕ್ಕೂ ನಾಡಿನ ಸಾಹಿತ್ಯಕ ಹಾಗೂ ಜಾನಪದ ಲೋಕಕ್ಕೆ ಒಂದು ಕೊಡುಗೆಯಾಗಲಿವೆ.

ಈ ಯೋಜನೆಗೆ ಶ್ರಮಿಸಿರುವ ಎಲ್ಲರಿಗೂ ಅಭಿನಂದನೆಗಳು. ''ಸಮಗ್ರ ಕನ್ನಡ ಜಾನಪದ ಮತ್ತು ಯಕ್ಷಗಾನ ಸಾಹಿತ್ಯ ಸಂಪುಟ'' ಯೋಜನೆಗೆ ಶುಭ ಹಾರೈಕೆಗಳು.

**(ಬಿ.ಎಸ್. ಯಡಿಯೂರಪ್ಪ)**

## ಪ್ರಕಾಶಕರ ನುಡಿ

ಮನುಷ್ಯನ ಮೂಲ ಸಂಸ್ಕೃತಿಯ ಭಂಡಾರವಾದ ಜಾನಪದವು ಬದುಕಿನ ವಿವಿಧ ಮುಖಗಳನ್ನು ಅದರ ಸಹಜ ಸ್ವರೂಪದಲ್ಲಿ ದರ್ಶನ ಮಾಡಿಸುವ ವ್ಯಾಪಕ ಕ್ಷೇತ್ರ. ಆಧುನಕ ಸಂದರ್ಭದಲ್ಲಿ ಆವಿಷ್ಕಾರಗೊಂಡಿರುವ ಎಲ್ಲಾ ವೈಜ್ಞಾನಿಕ ಸೃಷ್ಟಿಗಳ, ವಿವಿಧ ದೃಷ್ಟಿಕೋನದ ವಿಚಾರಗಳ ಮೂಲ ಹೊಳಹು ಜಾನಪದದಿಂದಲೇ ಬಂದದ್ದು. ಮನುಷ್ಯನ ಹುಟ್ಟಿನಿಂದ ಮೊದಲುಗೊಂಡು ಸಾವಿನವರೆಗೂ ತಬ್ಬಿ ಹಿಡಿದಿರುವ ಜನಪೊದ ಸಾಹಿತ್ಯವು ಅತ್ಯಂತ ಶ್ರೀಮಂತವಾದುದು ಮತ್ತು ವ್ಯಾಪಕವಾದುದು. ಕರ್ನಾಟಕವು ಇಂತಹ ಅಮೂಲ್ಯವಾದ ಜಾನಪದ ಸಂಪತ್ತಿನ ಆಗರವಾಗಿದೆ.

ಜಾಗತೀಕರಣದ ಪರಿಣಾಮಗಳು ಎಂದಿಗಿಂತಲೂ ತ್ವರಿತವಾಗಿ ಇಂದು ಮೂಲ ಸಂಸ್ಕೃತಿಯ ಮೇಲೆ ದಾಳಿ ಮಾಡುತ್ತಿದ್ದು, ಗ್ರಾಮೀಣ ಸಾಹಿತ್ಯ, ಸಂಸ್ಕೃತಿ, ಕಲೆಗಳಂತಹ ಸೃಜನಶೀಲತೆಗೆ ಧಕ್ಕೆ ಉಂಟಾಗುತ್ತಿದೆ. ಈ ಸಂದಿಗ್ಧ ಕಾಲಘಟ್ಟದಲ್ಲಿ ಸಮುದಾಯಕ್ಕೆ ಸ್ಥಳೀಯ ಜ್ಞಾನ ಸಂಪತ್ತಿನ ಮಹತ್ವವನ್ನು ಮನವರಿಕೆ ಮಾಡಿಕೊಡಲು ಜಾನಪದ ಅಧ್ಯಯನ ಅಗತ್ಯವಾಗಿದೆ.

ಸಮೃದ್ಧ-ಸಮಗ್ರ ಜಾನಪದ ಸಾಹಿತ್ಯವನ್ನು ಕ್ರೂಢೀಕರಿಸಿ ಒಂದೆಡೆ ಲಭ್ಯವಾಗುವಂತೆ ಮಾಡುವ ಉದ್ದೇಶದಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಜಾನಪದ ವಿದ್ವಾಂಸರಾದ ಪ್ರೊ. ಹಿ.ಶಿ. ರಾಮಚಂದ್ರೇಗೌಡರವರ ಅಧ್ಯಕ್ಷತೆಯಲ್ಲಿ ಡಾ. ಸೋಮಶೇಖರ ಇಮ್ರಾಪುರ, ಡಾ. ಎಚ್.ಜೆ. ಲಕ್ಕಪ್ಪಗೌಡ, ಡಾ. ಬಿ.ವಿ. ವಿವೇಕ ರೈ, ಡಾ. ತೀ.ನಂ. ಶಂಕರನಾರಾಯಣ, ಡಾ|| ಸಿದ್ಧಲಿಂಗಯ್ಯ, ಡಾ. ಕೆ. ಚಿನ್ನಪ್ಪಗೌಡ, ಶ್ರೀಮತಿ ಶಾಂತಿನಾಯಕ, ಕರ್ನಾಟಕ ಜಾನಪದ ಪರಿಷತ್ತಿನ ಅಧ್ಯಕ್ಷರು ಮತ್ತು ಡಾ. ಎಂ.ಎಸ್. ಲಠ್ಠೆ (ದಿವಂಗತ) ಹಾಗೂ ಶ್ರೀ ಕೆರೆಮನೆ ಶಂಭು ಹೆಗಡೆ (ದಿವಂಗತ) ಅವರನ್ನೊಳಗೊಂಡ ಸಂಪಾದಕ ಸಮಿತಿಯನ್ನು ರಚಿಸಲಾಗಿರುತ್ತದೆ. ಈ ಸಮಿತಿಯ ನೇತೃತ್ವದಲ್ಲಿ ಕರ್ನಾಟಕ ಜಾನಪದ ಅಕಾಡೆಮಿಯ ಸಹಯೋಗದೊಂದಿಗೆ **'ಸಮಗ್ರ ಕನ್ನಡ ಜಾನಪದ ಮತ್ತು ಯಕ್ಷಗಾನ ಸಾಹಿತ್ಯ'** ಪ್ರಕಟಣಾ ಯೋಜನೆಯನ್ನು ಹಂತ ಹಂತವಾಗಿ ಕಾರ್ಯರೂಪಕ್ಕೆ ತರಲಾಗುತ್ತಿದೆ.

ಈ ಯೋಜನೆಯ ಕಾರ್ಯನಿರ್ವಹಣೆಯ ಮೇಲ್ವಿಚಾರಣೆಗಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಕರ್ನಾಟಕ ಜಾನಪದ ಅಕಾಡೆಮಿಯ ಅಧ್ಯಕ್ಷರು ಹಾಗೂ ಇಲಾಖೆಯ ಅಧಿಕಾರಿಗಳನ್ನೊಳಗೊಂಡಂತೆ ಸಮಿತಿಯನ್ನು ರಚಿಸಲಾಗಿತ್ತು. ಇವರೆಲ್ಲರ ಶ್ರಮ ಮತ್ತು ಸಹಕಾರ ಹೆಚ್ಚಿನದು, ಇವರೆಲ್ಲರಿಗೂ ನನ್ನ ಕೃತಜ್ಞತೆಗಳು.

ಈ ಯೋಜನೆಯ ಮುದ್ರಣಕ್ಕೆ ಸಹಕರಿಸಿದ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆಯ ಕಾರ್ಯದರ್ಶಿಗಳೂ ಈ ಯೋಜನೆಯ ಮೇಲ್ವಿಚಾರಣಾ ಸಮಿತಿ ಅಧ್ಯಕ್ಷರೂ ಆದ ಶ್ರೀ ಬಿ.ಆರ್. ಜಯರಾಮರಾಜೇ ಅರಸ್ ಅವರಿಗೆ, ಆಯಾ ಸಂಪುಟಗಳ ಸಂಪಾದಕರು, ಪರಿಶೀಲಕರು ಮತ್ತು ಸಂಪುಟಗಳನ್ನು ಮುದ್ರಣಕ್ಕೆ ಸಿದ್ಧಪಡಿಸಿದ ಯೋಜನೆಯ ಸಂಯೋಜಕರಾದ ಡಾ. ಚಕ್ಕರೆ ಶಿವಶಂಕರ್ ಹಾಗೂ ಡಾ. ಜಿ.ಎಸ್. ಭಟ್ ಅವರ ಸಲಹೆ-ಸಹಕಾರ ಅಮೂಲ್ಯವಾದುವುದು. ಹಾಗೆಯೇ ಈ

ಸಂಪುಟಗಳು ಹೊರಬರಲು ನೆರವಾದ ಕರ್ನಾಟಕ ಜಾನಪದ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಗೊ.ರು. ಚನ್ನಬಸಪ್ಪ ಮತ್ತು ರಿಜಿಸ್ಟ್ರಾರ್ ಡಾ. ಎಸ್. ಪ್ರಸಾದಸ್ವಾಮಿ ಹಾಗೂ ಸಿಬ್ಬಂದಿಗೆ ಮತ್ತು ಮುಖಪುಟ ವಿನ್ಯಾಸ ರೂಪಿಸಿಕೊಟ್ಟ ಕಲಾವಿದರಾದ ಶ್ರೀ ಪ.ಸ. ಕುಮಾರ್ ಅವರಿಗೆ ನನ್ನ ನೆನಕೆಗಳು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕರ್ನಾಟಕ ಜಾನಪದ ಅಕಾಡೆಮಿಯ ಸಹಕಾರದೊಂದಿಗೆ ಹೊರತರುತ್ತಿರುವ **'ಸಮಗ್ರ ಕನ್ನಡ ಜಾನಪದ ಮತ್ತು ಯಕ್ಷಗಾನ ಸಾಹಿತ್ಯ'** ಸಂಪುಟಗಳನ್ನು ಕನ್ನಡ ಜನತೆ ಪ್ರೀತಿಯಿಂದ ಸ್ವೀಕರಿಸುತ್ತಾರೆಂದು ನಾನು ನಂಬಿದ್ದೇನೆ.

**(ಮನು ಬಳಿಗಾರ್)**
ನಿರ್ದೇಶಕರು

## ಅಕಾಡೆಮಿ ಅಧ್ಯಕ್ಷರ ನುಡಿ

ಜಾನಪದ ಅಧ್ಯಯನವೆಂದರೆ ನಮ್ಮ ಸಂಸ್ಕೃತಿಯ ವಿಶ್ಲೇಷಣೆಯೇ ಆಗಿದೆ. ಜನವಾಣಿಯ ಬಹುಮುಖತೆಯ ದಾಖಲು ಕ್ರಮ ಎಷ್ಟು ಮಹತ್ವದ್ದೋ, ಅಷ್ಟೇ ಶ್ರಮದ್ದು ಕೂಡ. ಶಿಷ್ಟ ಸಾಹಿತ್ಯದ ಏಕತಾನತೆಗೆ ದನಿ ಮತ್ತು ಸಂವೇದನೆ ಜೋಡಿಸಿದ್ದು ಜಾನಪದ ಸಾಹಿತ್ಯ. ಹಾಗಾಗಿಯೇ **'ಜನವಾಣಿ ಬೇರು; ಕವಿವಾಣಿ ಹೂ'** ಎಂಬ ಮಾತಿದೆ.

ಇಷ್ಟು ಮಹತ್ವವುಳ್ಳ ಈ ಸಾಹಿತ್ಯದ ಸಂಗ್ರಹ, ದಾಖಲು, ಪ್ರಕಟಣೆಗೆ ಅಗತ್ಯವಾದ ಜನರ ಸಹಕಾರದಂತೆಯೇ ಪ್ರಭುತ್ವದ ಆಸರೆ ಬೇಕು. ಆ ದಿಸೆಯಲ್ಲಿ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ **'ಸಮಗ್ರ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಮಾಲೆ'** ಸಂಪುಟದ ಪ್ರಕಟಣೆಯಂತಹ ಮಹತ್ವದ ಕಾರ್ಯ ಕೈಗೊಂಡಿದೆ. ಈ ಯೋಜನೆ ಅಡಿಯಲ್ಲಿ ೬೦ ಸಂಪುಟ ಹೊರತರಲು ತೀರ್ಮಾನಿಸಲಾಗಿದೆ.

ಕರ್ನಾಟಕ ಜಾನಪದ ಅಕಾಡೆಮಿಯು ಈ ಗುರುತರ ಜವಾಬ್ದಾರಿಯ ಮುಖ್ಯ ಪಾಲನ್ನು ಹೊತ್ತು ಈ ಕಾರ್ಯವನ್ನು ನಿರ್ವಹಿಸಿದೆ. ಸಮೃದ್ಧ ಜಾನಪದ ಸಾಹಿತ್ಯದ ಪರಂಪರೆ-ಇತಿಹಾಸವನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಸಂಪುಟಗಳು ರೂಪುಗೊಳ್ಳುವಂತೆ ನೋಡಿಕೊಳ್ಳಲಾಗಿದೆ.

ನಾಡಿನ ಉದ್ದಾಮ ಜಾನಪದ ತಜ್ಞರು ಈ ಸಂಪುಟಗಳನ್ನು ಸಿದ್ಧಗೊಳಿಸಿದ್ದಾರೆ. ಸಂಪಾದಕರು ಅತ್ಯಂತ ಶ್ರಮವಹಿಸಿ ಈ ಸಂಪುಟಗಳನ್ನು ರೂಪುಗೊಳಿಸಿರುತ್ತಾರೆ. ಹೀಗೆ ಈ ಬೃಹತ್ ಯೋಜನೆಗೆ ಸಹಕರಿಸಿದ, ಕೈ ಜೋಡಿಸಿದ ಎಲ್ಲ ಮಹನೀಯರನ್ನೂ ನೆನೆಯುವುದು ಸಂತಸದ ಸಂಗತಿಯಾಗಿದೆ.

ಈ ಕಾರ್ಯದಲ್ಲಿ ತೊಡಗಿಕೊಂಡ ಸಂಪಾದಕ ಸಮಿತಿ ಅಧ್ಯಕ್ಷರಾದ ಡಾ. ಹಿ.ಶಿ. ರಾಮಚಂದ್ರೇಗೌಡ ಮತ್ತು ಸಂಪಾದಕ ಮಂಡಳಿ ಸದಸ್ಯರಿಗೆ ವಿಶೇಷ ವಂದನೆಗಳು.

ತಮ್ಮ ವಿದ್ವತ್ ನುಡಿಗಳೊಂದಿಗೆ ಕೃತಿಯ ಮೌಲ್ಯ ಹೆಚ್ಚಿಸಿದ ಮಾನ್ಯ ಮುಖ್ಯಮಂತ್ರಿಗಳಿಗೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿಗಳಾದ ಶ್ರೀ ಬಿ.ಆರ್. ಜಯರಾಮರಾಜೇ ಅರಸು, ನಿರ್ದೇಶಕರಾದ ಶ್ರೀ ಮನು ಬಳಿಗಾರ್, ಸಂಚಾಲಕರಾದ ಶ್ರೀ ಕಾ.ತ. ಚಿಕ್ಕಣ್ಣ, ಶ್ರೀ ಎಚ್. ಶಂಕರಪ್ಪನವರು ಈ ಯೋಜನೆಯ ನಿರ್ವಹಣೆಯಲ್ಲಿ ಅಪಾರ ಸಹಕಾರ ತೋರಿದ್ದಾರೆ, ಅವರಿಗೆ ಹಾಗೂ ಈ ಮಹತ್ವದ ಯೋಜನೆಯನ್ನು ತಮ್ಮದೆಂದು ಭಾವಿಸಿ, ನಿರ್ವಹಿಸಿದ ಕರ್ನಾಟಕ ಜಾನಪದ ಅಕಾಡೆಮಿಯ ಸಿಬ್ಬಂದಿಗೆ ವಂದನೆಗಳು.

**(ಗೊ.ರು. ಚನ್ನಬಸಪ್ಪ)**
ಅಧ್ಯಕ್ಷ
ಕರ್ನಾಟಕ ಜಾನಪದ ಅಕಾಡೆಮಿ
ಬೆಂಗಳೂರು

## ಅಧ್ಯಕ್ಷರ ಮಾತು

**ಪೂರ್ವಾಪರ**

ಹದಿನೆಂಟನೆಯ ಶತಮಾನದ ಆಧುನಿಕ ವಿಜ್ಞಾನ ನಮ್ಮ ದೇಶಕ್ಕೆ ಒಂದು ಮಹಾಪಲ್ಲಟವಾಗಿ ಪ್ರವೇಶಿಸಿತು. ಅದು ವಸಾಹತುಶಾಹಿಯ ಒಂದು ಪ್ರಭುತ್ವವೂ, ಹೊಸಜ್ಞಾನ ಮತ್ತು ಹೊಸ ವಸ್ತು ವಿನ್ಯಾಸದ ಒಂದು ಆವಿಷ್ಕಾರವೂ ಆಗಿತ್ತು. ನಮ್ಮೊಳಗೆ ನಾವು, ಕಟ್ಟಿಹಾಕಿಕೊಂಡಿದ್ದ ನಮಗೆ ಈ ಕಂಪನ ಕೆಲವರಲ್ಲಿ ಭಾರಿ ತಲ್ಲಣವನ್ನೂ, ಹಲವರಲ್ಲಿ ಬಿಡುಗಡೆಯ ತರಂಗಗಳನ್ನೂ ತಂದಿತು. ಅದನ್ನು ಮಿಸುಕುವ, ಮೀರುವ ಅಥವಾ ಸುಧಾರಿಸಿ ಸ್ವೀಕರಿಸುವ ಯಾವ ಶಕ್ತಿಯೂ ಆಗಿನ ಭಾರತೀಯ ಸಂದರ್ಭಕ್ಕೆ ಇರಲಿಲ್ಲ. 'ಒಪ್ಪಿಕೊ ಇಲ್ಲವೆ ಹಿಂದೆಸರಿ' ಎಂಬ ಕೊನೆಯ ಆದೇಶವದು. ಇದು ಕಾರಣವಾಗಿ ಪ್ರಭುತ್ವವನ್ನು ಮೀರಿದರೆ ಹೊಸಜ್ಞಾನ ತಪ್ಪಿಹೋಗುವ, ಹೊಸಜ್ಞಾನವನ್ನೇ ವಿರೋಧಿಸಿದರೆ ಜೀವನ ಹಿಂದೆ ಸರಿಯುವ ಅಪಾಯದ ಇಕ್ಕಟ್ಟಿನಲ್ಲಿ ಭಾರತದ ಶ್ರೀಮಂತ ಮತ್ತು ಬಡವ ಇಬ್ಬರೂ ಸಿಕ್ಕಿಕೊಂಡರು. ಅಂಥ ವಿಜ್ಞಾನ ನಮ್ಮ ಹತ್ತಿರ ಬಂತು.

ಆ ವಿಜ್ಞಾನ ಕೇವಲ ಜ್ಞಾನವಾಗಿ ಬಂದಿದ್ದರೆ ಭಾರತೀಯ ಪಂಡಿತರು ಅದರೊಂದಿಗೆ ತರ್ಕಕ್ಕೆ ಬಿದ್ದು ಅದನ್ನು ಹೇಗೋ ಸೋಲಿಸಿ ಓಡಿಸಿಬಿಡುತ್ತಿದ್ದರು. ಅದು ಆಯುಧವಾಗಿಯೂ, ಆಸೆಯಾಗಿಯೂ ಮೂಡಿಬಂದಿತ್ತು. ಬ್ರಿಟಿಷರನ್ನು ಸೋಲಿಸಬಹುದಿತ್ತು. ಬಡತನವನ್ನು

ಸೋಲಿಸುಬಹುದಿತ್ತೆ ! ನಮ್ಮ ಆ ಕಾಲದ, ದೇಶದ ಬಡತನ ಅಂಥ ವಸ್ತುಜ್ಞಾನದ ಆದೇಶಕ್ಕೆ ತಲೆಬಾಗಿತು. ಜೊತೆಯಲ್ಲಿಯೇ ಸಂಸ್ಕೃತಿಯ ಬಡತನವನ್ನೂ ಘೋಷಿಸಿಕೊಂಡಿತಲ್ಲ ! ಅಲ್ಲಿ ನಮ್ಮ ಪತನದ ಹಾದಿ ತೆರೆಯಿತು. ಈ ಸೋಲೇ ಮತ್ತೊಂದು ಕಡೆಯಿಂದ ರಾಷ್ಟ್ರೀಯ ಚಳವಳಿಗೆ ಸ್ವರಸಂಯೋಜನೆ ಮಾಡಿತು. 'ಸಾಮಗ್ರಿ ಆಧುನಿಕತೆ'ಯನ್ನು ಎತ್ತಕಡೆಯಿಂದ ಬೇಕಾದರೂ ತರಬಹುದು 'ಸಂಸ್ಕೃತಿ ಆಧುನಿಕತೆ' ಎಂಬುದು ಹಾಗೆ ಬೇರೆ ಬೇರೆ ಕಡೆಯಿಂದ ತುಂಬಿಕೊಳ್ಳುವಂಥದಲ್ಲ. ಅದನ್ನು ನೆಲದೊಡಲ ಫಲವತ್ತತೆಯಿಂದಲೇ ಪುನರ್‌ನಿರ್ಮಿಸಿ ಕೊಳ್ಳುತ್ತ, ಅನ್ಯಸಂಸ್ಕೃತಿಗಳೊಂದಿಗೆ ಅನುಸಂಧಾನ ನಡೆಸತಕ್ಕದ್ದು ಎಂಬುದನ್ನು ರಾಷ್ಟ್ರೀಯವಾದಿಗಳೂ, ಕನ್ನಡ ಸಾಹಿತ್ಯ, ಸಂಸ್ಕೃತಿ ಪುನರ್ ನಿರ್ಮಾತೃಗಳೂ ಆದ ಕನ್ನಡ ಕವಿ ಚಿಂತಕರು ಕಂಡುಕೊಂಡರು. ಅಲ್ಲಿ ಹುಟ್ಟಿತು ನೋಡಿ ನಮ್ಮ ಜನಪದ ಸಾಹಿತ್ಯದ ಕಾಂಕ್ಷೆ.

ಈ ಮೊದಲೆ ಬ್ರಿಟಿಷರು ಜನಪದ ಸಾಹಿತ್ಯ, ಸಂಸ್ಕೃತಿ ಸಂಗ್ರಹದಲ್ಲಿ ತೊಡಗಿದ್ದರು. ಅದು ಅವರ ಸಾಮ್ರಾಜ್ಯ ವಿಸ್ತರಣೆಯ ಎರಡನೆ ಚಲನೆಯ ಹುನ್ನಾರು. ಮತ್ತೊಂದು ಬಗೆಯಲ್ಲಿ ಭಾರತದ ಜಾನಪದ ಕಚ್ಚಾಸಂಪತ್ತನ್ನು ಕೊಂಡೊಯ್ಯುವ ವಿಕ್ರಮದ ಮುಂದುವರಿದ ಕಥಾನಕ. ಈ ನಮ್ಮ ಸಂಸ್ಕೃತಿ, ಅವರು ನಮಗೆ ತಂದುಕೊಟ್ಟ ವಿಜ್ಞಾನದಂಥ ಶ್ರೇಷ್ಠತೆ ಎಂದು ಅವರು ತಿಳಿದಿರಲಿಲ್ಲ, ಮಂತ್ರ ಮಾಯಾ ಲೋಕದ ಭಾರತೀಯ ಪುರಾತನರು ಹೇಗಿರಬಹುದು ಎಂಬ ಕುತೂಹಲ ಹಾಗೂ ಅದನ್ನು ಕಂಡು ಅನುಭವಿಸುವ ಪ್ರಭುವಿನ ಖುಷಿ ಅವರದಾಗಿತ್ತು. ತಪ್ಪೇನಿಲ್ಲ; ಪ್ರಭುಗಳೆ ಹಾಗೆ ! ಆಳಿಸಿಕೊಳ್ಳುವವನ ಸಂಪತ್ತು, ಸಂಸ್ಕೃತಿ, ಸಾಹಿತ್ಯ – ಇವೆಲ್ಲ ಅಕಾಲಿಕ ಮತ್ತು ಹಳೆಯವು ಎಂದು ಅವರು ಹೇಳಲೇಬೇಕಿತ್ತು. ಅದು ಅವರ ಅಭಿವೃದ್ಧಿ ತತ್ವದ ಮುಂದುವರಿಕೆ ಮತ್ತು ಆಳಿಸಿಕೊಳ್ಳುವವನ ಅನಭಿವೃದ್ಧಿ ಮನೋಧರ್ಮದ ಸಮರ್ಥನೆ. ಅದು ಆಗಿನ ಭಾರತದಲ್ಲೂ ಕರ್ನಾಟಕದಲ್ಲೂ ಚನ್ನಾಗಿಯೇ ನಡೆಯಿತು.

ಆ ಕಾಲದ ಪರಿಸ್ಥಿತಿ ಹೊರಗಿನಿಂದ ಬಂದ ಜ್ಞಾನ 'ಆಧುನಿಕ', ನಮ್ಮದೆಂಬುದು 'ಪುರಾತನ' ಎಂದು ಮನಸೋತು ಒಪ್ಪಿಕೊಂಡುಬಿಟ್ಟಿತ್ತು. ಭಾರತೀಯ ಉತ್ಪಾದನೆಯಲ್ಲಿ ಹೊಸತು ಮತ್ತು ಹಳತು ಎಂಬ ವಿಭಜಿತ ಧೋರಣೆ ಎಲ್ಲರ ಮನದೊಳಗೆ ದಾಖಲಾಗಿತ್ತು. ಆ ಕಾರಣದ ಮೇಲಿಂದ ನಮ್ಮ ಸಂಸ್ಕೃತಿ ಮತ್ತು ಜನಪದ ಸಾಹಿತ್ಯ ನಮ್ಮ ಹಳ್ಳಿಗಳಂತೆ ಹಳೆಯದು ಎಂದು ಹೇಳುವುದನ್ನು ಮರೆಯುತ್ತಿರಲಿಲ್ಲ. ಅದೇ ಸಂದರ್ಭದಲ್ಲಿ ಈ ಎಲ್ಲವೂ ನಮ್ಮ ಹೃದಯಕ್ಕೆ ಸಂಬಂಧಪಟ್ಟ ಅತ್ಯಂತ ಆಪ್ತವಾದ ಸ್ಪಂದನ ಎಂಬುದನ್ನು ನಿರಾಕರಿಸುವಂತಿರಲಿಲ್ಲ. ಇಂತಹ ಒಂದು ಸಮಕಾಲೀನ ಸಂಘರ್ಷವನ್ನು ಎದುರು ಹಾಕಿಕೊಂಡ ಸಂದರ್ಭದಲ್ಲಿ ನಮ್ಮ ಹಿರಿಯ ಸಾಹಿತಿಗಳು ಜನಪದ ಸಾಹಿತ್ಯವನ್ನು ಕಂಡು ಕಾಣಿಸಿ ವಿವರಿಸಿದರು. ಅಂತಹ ಜನಪದ ಸಾಹಿತ್ಯದ ಆಪ್ತತೆಗಾಗಿ ಅದರ ಕಡೆಗೆ ಕೈ ಚಾಚಿದರು, ಅದಕ್ಕಾಗಿ ಹಂಬಲಿಸಿ ಆಸೆಪಟ್ಟರು, ಅದನ್ನು ಕೊಡುವ ಜನತೆಯ ಮುಂದೆ ಬೇಡಿದರು, ಅವರ ಸೃಷ್ಟಿಸಂಸ್ಕೃತಿಗೆ ಉಪಕಾರ ಸ್ಮರಣೆ ಸಲ್ಲಿಸಿದರು. ಶಿಷ್ಟತೆಯ ಸ್ಥಾನ – ಮಾನ, ಅಹಂಕಾರವನ್ನು ತೊರೆದು ಜನಪದರೊಂದಿಗೆ ಒಂದಾಗುವ, ಒಡನಾಡುವ ತಾಯ್ತನವನ್ನು ಮೆರೆದರು.

ಜನಪದ ಸಾಹಿತ್ಯ ಮತ್ತು ಅದರ ಸಂಗ್ರಹದ ಪ್ರಶ್ನೆ ಕೇವಲ ಒಂದು ಸಾಹಿತ್ಯ ಪ್ರಕಾರದ ಬಗೆಗಿನ ವ್ಯಾಮೋಹ ಆಗಿರಲಿಲ್ಲ. ಅದು ಪ್ರಸ್ತುತದಲ್ಲಿದ್ದ 'ಆಧುನಿಕ'ವೆಂಬ ಜಾಗತಿಕ ಸಂಸ್ಕೃತಿಯ ಸಂದರ್ಭದಲ್ಲಿ ಸ್ಥಳೀಯ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಸಂಘಟಿಸುವ ಜವಾಬ್ದಾರಿಯೂ ಆಗಿತ್ತು. ಇದರೊಳಗೆ ಗ್ರಾಮೀಣ ಸಮುದಾಯಗಳನ್ನು ಚೇತರಿಸುವ ಮೂಲಕ ಅಖಂಡ ಭಾರತವನ್ನು ಪುನರ್‌ಸಂಘಟಿಸುವ ಪರೋಕ್ಷ ಪ್ರಯತ್ನವೂ ಇತ್ತು. ಹೀಗೆ ಒಂದು 'ಸಮಗ್ರ ಸಾಹಿತ್ಯ ಕರ್ನಾಟಕ' ಮತ್ತು 'ಸಂಸ್ಕೃತಿ ಭಾರತ'ವನ್ನು ನಿರ್ಮಿಸುವ ಹೊಣೆಗಾರಿಕೆಯನ್ನು ನಮ್ಮ ಹಿರಿಯರು ಹೊತ್ತರು. ಇದನ್ನು ಸಾಹಿತಿಗಳ ಮೂಲಕ ನಡೆದ ರಾಷ್ಟ್ರೀಯ ಚಳವಳಿ ಎನ್ನಬಹುದು. ಇವರಿಗೆ ಜನಪದಸಾಹಿತ್ಯ ಮುಖ್ಯ ಸಂಪನ್ಮೂಲವೂ, ಸ್ಫೂರ್ತಿಯೂ, ಸಾಂಸ್ಕೃತಿಕ ಅಸ್ತ್ರವೂ ಆಯಿತು. ಶಿಷ್ಟ ಸಾಹಿತ್ಯ, ಕವಿ ಮುದ್ದಣನ ಸಂದರ್ಭದಲ್ಲಿ ನಿಲುಗಡೆಗೆ ತಲುಪಿದ್ದು, ನವೋದಯ ಸಾಹಿತ್ಯ ಚಳವಳಿ ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಕಟ್ಟುವ ಹೊಸ ನಾಯಕತ್ವವನ್ನು ವಹಿಸಿತ್ತು. ಹದಿನೆಂಟು ಮತ್ತು ಹತ್ತೊಂಬತ್ತನೆಯ ಶತಮಾನದ ಕೆಲವು ಪಾಶ್ಚಾತ್ಯ ದೇಶಗಳು ಜನಪದ ಸಾಹಿತ್ಯದ ಮೂಲಕ ತಮ್ಮ ದೇಶವನ್ನು ಪುನರ್‌ಸಂಘಟಿಸುವ ಮಾರ್ಗದರ್ಶನವನ್ನು ನೀಡಿದ್ದವು. ಅದು ನಮ್ಮ ಸಾಹಿತಿ-ಚಿಂತಕರಿಗೆ ಒಂದು ಹೆದ್ದಾರಿಯಾಯಿತು.

ಇಂಗ್ಲೆಂಡ್ ಕೈಗಾರಿಕೀಕರಣದಿಂದ ಕಳೆದುಕೊಳ್ಳುತ್ತಿರುವ ತಾಯ್ತನವನ್ನು ಮತ್ತೆ ಪಡೆಯಲು ಜನಪದ ಸಾಹಿತ್ಯ ಮತ್ತು ಸಂಸ್ಕೃತಿಯ ಕಡೆಗೆ ಧಾವಿಸಿತು. ಫಿನ್ಲೆಂಡ್ ತನ್ನ ಪಕ್ಕದ ಸಾಮ್ರಾಜ್ಯಶಾಹಿಯನ್ನು ಎದುರಿಸಲು ಮತ್ತು ಸ್ವದೇಶವೆಂಬ ಸಂಸ್ಕೃತಿ ರಾಷ್ಟ್ರವನ್ನು ಸ್ಥಾಪಿಸಲು ಜನಪದ ಮಹಾಕಾವ್ಯ ಮತ್ತು ನಾಯಕರನ್ನು ಸಾಂಸ್ಕೃತಿಕ ವೀರರನ್ನಾಗಿ ಸ್ಥಾಪನೆಮಾಡಿತು. ಜರ್ಮನಿ ತಮ್ಮ ಮೂಲವನ್ನು ಪರೀಕ್ಷೆ ಮಾಡಿಕೊಳ್ಳಲು ಹಾಗೂ ಭದ್ರಮಾಡಿಕೊಳ್ಳಲು ಜನಪದ ಸಾಹಿತ್ಯ, ಭಾಷೆ ಮತ್ತು ಸಂಸ್ಕೃತಿಗಳ ಮೇಲೆ ಭಾರಿ ಹೊರೆಯನ್ನು ಹೊರಿಸಿತು. ರಷ್ಯಾ ಕಾರ್ಮಿಕ ರಾಜ್ಯ ಸ್ಥಾಪನೆಯ ಘೋಷಣೆಯ ಮೂಲಕ, ದುಡಿಯುವ ಜನರ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಪ್ರೋತ್ಸಾಹಿಸುವ ಮೂಲಕ ಜನರ ದನಿಗೆ ಮಾನ್ಯತೆ ನೀಡಿತು. ಭಾರತದಲ್ಲಿ ಇಂಥದೊಂದು ಚಟುವಟಿಕೆ ಗಾಂಧೀಜಿ ಅವರ ಸ್ವದೇಶಿ ಮತ್ತು ಗ್ರಾಮ ಸ್ವರಾಜ್ಯ ಚಿಂತನೆಯಿಂದ ಆರಂಭವಾಯಿತು.

ನಮ್ಮ ನವೋದಯ ಹಿರಿಯ ಸಾಹಿತಿಗಳು ಪಾಶ್ಚಾತ್ಯವನ್ನು ಪೌರ್ವಾತ್ಯದಿಂದ ಸರಿಗಟ್ಟಲು ಪ್ರಯತ್ನಶೀಲರಾದರೂ ಪಾಶ್ಚಾತ್ಯವೆಂಬುದು ಅವರಿಗೆ ನಿರಾಕರಣೆಯ ಜ್ಞಾನವಾಗಿರಲಿಲ್ಲ. ಈ ಎರಡರಲ್ಲಿಯ ಒಳ್ಳೆಯದರ ಆಯ್ಕೆ ಅವರ ಆದ್ಯತೆಯಾಗಿತ್ತು. ಪಾಶ್ಚಾತ್ಯ ಸಾಹಿತ್ಯದಲ್ಲಿಯ ಒಳ್ಳೆಯದನ್ನು ಹೆಸರಿಸುತ್ತಲೇ ಆ ಮಟ್ಟಿನ ಸಾಮರ್ಥ್ಯ ಪಡೆಯಲು ಜನಪದ ಸಾಹಿತ್ಯವೇ ಸರಿಯಾದ ಸಂಪನ್ಮೂಲ ಎಂಬುದನ್ನು ಮನಗಂಡರು. ಆ ಮೂಲಕ ಜನಪದ ಸಾಹಿತ್ಯ ಒಂದು ಸಾಹಿತ್ಯಕ ಅನನ್ಯತೆ ಮತ್ತು ಸ್ವೋಪಜ್ಞತೆ ಎಂದು ಗುರುತಿಸಿದರು. ಜನಪದ ಸಾಹಿತ್ಯವೆಂಬುದು: 'ಗೊರವರ ಡುಂಡುಚಿ ಬೀದಿವರೆಯ ಬೀರನಕತೆ' ಎಂಬ ಹಿಂದಿನ ಅವಹೇಳನಕಾರಿ ಧೋರಣೆಯನ್ನು ತಿರಸ್ಕರಿಸಿದರು. ೧೯೧೦ರ ಸುಮಾರಿನಿಂದಲೆ ನಮ್ಮ ಕನ್ನಡ ಸಾಹಿತಿಗಳು ಜನಪದಗೀತ ಸಂಗ್ರಹಗಳನ್ನು ಪ್ರಕಟಿಸತೊಡಗಿದರು, ನಮ್ಮ ಅಸ್ತಿತ್ವಕ್ಕಾಗಿ ಪಡಿ ನುಡಿದರು. ಹಾಗೆ ನೋಡಿದರೆ ಈ ಬದ್ಧತೆ ಅವರು ಸಮಕಾಲೀನವಾಗಿ ತಮ್ಮನ್ನು ಸೂಕ್ತ ಮಾಡಿಕೊಳ್ಳುವ ಸಂಗತಿಯೂ ಹೌದು. ಇಂಥ ಮುಕ್ತ ಮನಸ್ಸು ಮತ್ತು ವ್ಯಕ್ತ ವ್ಯಕ್ತಿತ್ವದ ಮೂಲಕ ಜನಪದ ಸಾಹಿತ್ಯ ಸಂಗ್ರಹಕ್ಕೆ ರಾಜಮಾರ್ಗವನ್ನು ಸೃಷ್ಟಿಸಿದರು. ಈಗ ಅವರ ಮಾರ್ಗದರ್ಶಕ ಮಾತುಗಳನ್ನು ಅನುಸರಿಸಿಯೇ ನಾವು ಮುಂದೆ ಹೋಗಬೇಕಿದೆ.

**– ೧ –**

**ಮಾತಿನ ಸರಣಿ : ಮುತ್ತಿನ ಬೆಲೆ**

**ಬಿ. ಎಂ. ಶ್ರೀಕಂಠಯ್ಯ**

'ಕನ್ನಡದಲ್ಲಿ ಇಂತಹ ಕಾಲ ಒದಗಿರುವಾಗ, ಕನ್ನಡ ಕವಿತೆ ತನ್ನ ಅಳತೆಯನ್ನೆ ಅಲ್ಲ, ಆಳವನ್ನೂ ಕೂಡಾ ಕಂಡುಕೊಳ್ಳುತ್ತಿರುವಾಗ, ಸಂಸ್ಕೃತ-ಇಂಗ್ಲಿಷ್ ಸಾಹಿತ್ಯಗಳ, ಇತರ ಸಾಹಿತ್ಯಗಳ, ಸರಿಯಾದ ಸಂಸ್ಕಾರದ ಜೊತೆಗೆ ಕನ್ನಡದ ಪ್ರೌಢಸಾಹಿತ್ಯದ ವ್ಯಾಸಂಗದ ಜೊತೆಗೆ, ಕನ್ನಡದ ಮತ್ತು ಇತರ ಸಾಹಿತ್ಯದ ಜನಪದ ಸಾಹಿತ್ಯವನ್ನೂ ಪರಾಮರ್ಶಿಸುವುದು ಅತ್ಯಾವಶ್ಯಕವಾದ ಕರ್ತವ್ಯ. ನವನಾಗರಿಕತೆಯ ಹೊಡೆತದಲ್ಲಿ, ಪ್ರೌಢಸಾಹಿತ್ಯದ ತಿರಸ್ಕಾರದಲ್ಲಿ ಈ ಜನಪದ ಸಾಹಿತ್ಯ ಉಳಿಯುವುದೇ ಕಷ್ಟವಾಗಿದೆ. ನಾಶವಾಗುವುದಕ್ಕೆ ಮೊದಲೇ ಇದನ್ನು ಕಾಪಾಡಿಕೊಳ್ಳುವುದು ಕನ್ನಡಿಗರ ಕರ್ತವ್ಯ. ಸಾಹಿತ್ಯಾಭಿಮಾನಿಗಳೂ, ದೇಶವತ್ಸಲರೂ ಶ್ರದ್ಧೆಯಿಂದ ಮೂಲೆ ಮೂಲೆಗಳಿಂದಲೂ ತಮ್ಮ ತಮ್ಮ ಕಡೆಯಲ್ಲಿರುವ ಹಾಡುಗಳನ್ನು ಸಂಗ್ರಹಿಸುತ್ತಾ ಬಂದರೆ ಶೀಘ್ರದಲ್ಲಿಯೇ ಕನ್ನಡ ನಾಡಿನ ಹಾಡುಗಳೆಲ್ಲಾ ಒಂದುಗೂಡಿ ಒಂದು ದೊಡ್ಡ ಜನಪದ ಸಾಹಿತ್ಯಕೋಶವಾಗುವುದು'. **(ಗರತಿಯ ಹಾಡು ೧೯೩೧)**

**ದ. ರಾ. ಬೇಂದ್ರೆ**

'.........ತಾಯಿ, ಅಕ್ಕಗಳಿರಾ ! ಈ ಹಳ್ಳಿಯ ಹಾಡುಗಳ, ಹಳೆಯ ಹಾಡುಗಳ ಹೊಳೆಯನ್ನು ಇಂಗಗೊಡಬೇಡಿ. ಮತ್ತೆ ಹನಿಹನಿಯಾಗಿ ಹಳ್ಳವಾಗಲಿ, ಹಳ್ಳ ಹಳ್ಳ ಕೂಡಿ ಹೊಳೆಯಾಗಲಿ. ಈ ಅಪೇಕ್ಷೆಯನ್ನು ಕನ್ನಡತಿಯರು ಕೈಗೂಡಿಸಿಕೊಡರೆ?

'ಕರ್ನಾಟಕದೊಳಗಿನ ಬೇರೆ ಬೇರೆ ಭಾಗದವರು ಹೀಗೆ ಪದ್ಯಗಳನ್ನು ಸಂಗ್ರಹಿಸಿ ಚೆನ್ನಾಗಿ ಬರೆದು ಕಳುಹಿಸಿದರೆ ಕನ್ನಡದ ಅಭ್ಯಾಸಕ್ಕೆ ದೊಡ್ಡದೊಂದು ಉಪಕಾರ ಮಾಡಿದಂತಾಗುವುದು. ಇದನ್ನು ಎಷ್ಟು ಒತ್ತಿಹೇಳಿದರೂ ಸಾಲದು !. **(ಗರತಿಯ ಹಾಡು ೧೯೩೧)**

**ಮಾಸ್ತಿ ವೆಂಕಟೇಶ ಅಯ್ಯಂಗಾರ್**

'ಜನದ ಕ್ಷೇಮವನ್ನು ಬಯಸುವವರೆಲ್ಲ ಈ ಕವಿತೆಯನ್ನು ದೃಷ್ಟಿಯಿಟ್ಟು ನೋಡಬೇಕು, ಮನಸ್ಸು ಕೊಟ್ಟು ತಿಳಿಯಬೇಕು. ಇನ್ನು ಯಾವ ರೀತಿಯಿಂದಲಾದರೂ ತಿಳಿಯಲಾಗದ ಕೆಲವು ವಿಷಯಗಳು ನಮಗೆ ಈ ಕವಿತೆಯಿಂದ ತಿಳಿಯುತ್ತವೆ'. **(ಕರ್ನಾಟಕ ಜನಪದ ಸಾಹಿತ್ಯ ೧೯೫೭)**

**ಬೆಟಗೇರಿ ಕೃಷ್ಣಶರ್ಮ**

'ಹೊಸಕಾಲದ ಕ್ರಾಂತಿಯಲ್ಲಿ ಮಾನವನ ಮನಸ್ಸು ಬುದ್ಧಿ ಹೃದಯಗಳು ಮಾಯವಾಗಿ ಹೋಗುವವೇನು?.. ಇದ್ದೇ ಇರುವವು. ಇವು ಇದ್ದೇ ಇರುವುದಾದರೆ ನಮ್ಮ ಹಳೆಯ ಜನಪದ ಸಾಹಿತ್ಯ ಉಳಿಯಲೇಬೇಕು, ಉಳಿದೇ ಉಳಿಯುವುದು. ನಾವೀಗ ಅದನ್ನು ಅಳಿಯದಂತೆ ಉಳಿಸಿ, ಹೊಸ ಕಾಲಕ್ಕೆ ನಮ್ಮ ಕಾಣಿಕೆ ಸಲ್ಲಿಸಲೇಬೇಕಾಗಿದೆ'. **(ಅಧ್ಯಕ್ಷ ಭಾಷಣ. ಮೂರನೆಯ ಕರ್ನಾಟಕ ಜಾನಪದ ಸಮ್ಮೇಳನ ೧೯೭೧)**

**ಬಿ. ಎಸ್. ಗದ್ದಿಗೀಮಠ**

'ಕರ್ನಾಟಕದ ಒಂದೊಂದು ಭಾಗದ ಜನಪದ ಸಾಹಿತ್ಯವನ್ನು ಕಲೆಹಾಕಿ ಬೆಳಕಿಗೆ ತಂದರೆ ಕನ್ನಡ ಜನತೆಯ ನಿಜವಾದ ಸಂಸ್ಕೃತಿಯ ಒಂದು ಅಮೂಲ್ಯವಾದ 'ವಿಶ್ವಕೋಶ'ವೇ ಆಗಬಹುದೆಂದು ಹೇಳಬಹುದು'. **(ಕನ್ನಡ ಜನಪದ ಗೀತೆಗಳು ೧೯೬೩)**

**ದೇ. ಜವರೇಗೌಡ**

'ಈ ತನಕ ವೈಯಕ್ತಿಕ ಮಟ್ಟದಲ್ಲಿ ತಕ್ಕಮಟ್ಟಿಗೆ ಸಂಗ್ರಹಕಾರ್ಯ ನಡೆದಿದೆ; ಆದರೆ ಆಗಬೇಕಾದ ಕಾರ್ಯ ಬೆಟ್ಟದಷ್ಟಿದೆ. ಅದನ್ನೆಲ್ಲ ಒಬ್ಬಿಬ್ಬರು ವ್ಯಕ್ತಿಗಳಿಂದ ನಿರೀಕ್ಷಿಸುವುದು ಕಷ್ಟ. ಸರ್ಕಾರವೊ, ಸರ್ಕಾರದ ನೆರವು ಪಡೆದ ಸಂಸ್ಥೆಗಳೊ ಈ ಕಾರ್ಯವನ್ನು ಕೈಗೆತ್ತಿಕೊಳ್ಳಬೇಕಾಗಿದೆ'. **(ಜನಪದ ಸಾಹಿತ್ಯ ಸಮೀಕ್ಷೆ – ಜೀಶಂಪ ೧೯೬೭).**

**ಎಚ್. ಎಲ್. ನಾಗೇಗೌಡ**

‘ಹಣಕೊಟ್ಟರೆ ಮುಂದೆ ಏನಾದರೂ ಸಿಕ್ಕಬಹುದು. ಆದರೆ ಜನಪದ ಸಾಹಿತ್ಯ ಸಿಕ್ಕುವುದಿಲ್ಲ. ಶರಾವತಿಯನ್ನು  ಈಗ ಉಪಯೋಗಿಸಿಕೊಳ್ಳದಿದ್ದರೆ ಮುಂದೆ ಉಪಯೋಗಿಸಿಕೊಳ್ಳಬಹುದು. ಆದರೆ ಜನಪದ ಸಾಹಿತ್ಯ ಶರಾವತಿ ಒಮ್ಮೆ ಬತ್ತಿದರೆ ಮತ್ತೊಮ್ಮೆ ಹರಿಯಲಾರಳು’. **(ಹೊನ್ನ ಬಿತ್ತೇವು ಹೊಲಕೆಲ್ಲ ೧೯೬೩)**

**ಜೀ.ಶಂ.ಪರಮಶಿವಯ್ಯ**

‘ಸಮೃದ್ಧವಾದ ಜನಪದ ಸಾಹಿತ್ಯ ದೇಶದ ಸೌಭಾಗ್ಯಗಳಲ್ಲೊಂದು, ಅದನ್ನು ಪ್ರಮುಖವಾದ ರಾಷ್ಟ್ರೀಯ ಸಂಪತ್ತು ಎಂಬಂತೆ ಕಾಪಾಡಿಕೊಳ್ಳಬೇಕು’. **(ಜನಪದ ಸಾಹಿತ್ಯ ಸಮೀಕ್ಷೆ ೧೯೬೭)**

**– ೩ –**

**ಕಟ್ಟುವ ಕನಸು ; ನೆಟ್ಟ ಸಸಿ**

ಜನಪದ ಸಾಹಿತ್ಯದ ಸಂಗ್ರಹದ ಮಾತು ಆ ಸಾಹಿತ್ಯ ಸಂಗ್ರಹಕ್ಕೆ ಮಾತ್ರ ಮುಗಿಯದು. ಆ ಸಂಗ್ರಹದ ಮೂಲ ಉದ್ದೇಶ ಜನಪದ ಸಂಸ್ಕೃತಿಯ ಕಾಂಕೆ. ಎಂದರೆ ಜೀವನ ಸಂಸ್ಕೃತಿಯ ಹುಡುಕಾಟ, ಬದುಕುವ ಸಂಸತಿಯ ಬಯಕೆ. ಸಹಜ ಸಂಸ್ಕೃತಿ ಮತ್ತು  ಭೋಗ ಸಂಸ್ಕೃತಿಯ ನಡುವಿನ ಈ ಸಂಘರ್ಷ ಬ್ರಿಟಿಷ್ ವಸಾಹತುಶಾಹಿ

ಆಗಮನ ಕಾಲದಿಂದ ಮಾತ್ರವಲ್ಲ ; ಶಿಷ್ಟ  ಜನಪದವೆಂಬ ಸಹಜ ಸಂಸ್ಕೃತಿಗಳ ನಿರಂತರ ಅನುಸಂಧಾನದ ಪ್ರಕ್ರಿಯೆ. ಅದು ಕಾರಣವಾಗಿ ಜನಪದ ಸಾಹಿತ್ಯ ಸಂಗ್ರಹದ ಕಾರ್ಯ ಮತ್ತು ಅಧ್ಯಯನ ಯಾವ ಕಾಲಕ್ಕೂ ಮುಗಿಯುವುದಿಲ್ಲ. ಹಾಗೆ ಮುಗಿದರೆ ಸಂಸ್ಕೃತಿಗಳೆಲ್ಲವೂ ಸತ್ತಿರುತ್ತವೆ. ಕರ್ನಾಟಕದ ಸಂದರ್ಭದಲ್ಲಿ ಶಿಷ್ಟ – ಜನಪದ – ವಸಾಹತು ಸಂಸ್ಕೃತಿಗಳ ಸಂಘರ್ಷ ಮತ್ತು ಅನುಸಂಧಾನ ಬೇರೆ ಬೇರೆ ದಾರಿಗಳಲ್ಲಿ ನಡೆಯುತ್ತಲೇ ಇದೆ. ಅಂತಹ ನಾಲ್ಕು ದಾರಿಗಳು ನಮಗೆ ಕಂಡಿವೆ :

೧  ಕನ್ನಡ ಭಾಷಾ ಅಭಿವೃದ್ಧಿಗಾಗಿ

೨  ಜನತಾ ಸಂಸ್ಕೃತಿಯ ಶೋಧಕ್ಕಾಗಿ

೩  ಜಾನಪದ ಅಧ್ಯಯನಕ್ಕಾಗಿ

೪  ಪರ್ಯಾಯ ಜ್ಞಾನ ಚಿಂತನೆಯಾಗಿ

ಕನ್ನಡ ಭಾಷಾಭಿವೃದ್ಧಿಗಾಗಿ ಜನಪದ ಸಾಹಿತ್ಯವನ್ನು ಯಾಕೆ ಮತ್ತು ಹೇಗೆ ಬಳಸಿಕೊಳ್ಳಬೇಕು ಎಂಬುದನ್ನು ನಮ್ಮ ಹಿರಿಯ ಸಾಹಿತಿಗಳು ಹೇಳಿರುವುದನ್ನು ಈ ಮೊದಲು ಕಂಡಿದ್ದೇವೆ. ಜನತಾ ಸಂಸ್ಕೃತಿಯ ಪುನರುತ್ಥಾನದ ವಿಷಯದಲ್ಲಿ ಕೂಡ ಇದೇ ಹಿರಿಯರು ಅತ್ಯಂತ ಸಂವೇದನಾಶೀಲ ನಡೆಯನ್ನು ದಾಖಲಿಸಿದ್ದಾರೆ. ದೇವುಡು ಅವರ ಈ ಮಾತುಗಳನ್ನು ಗಮನಿಸಿ: ‘ಈ ಸಂಸ್ಕೃತಿ ವಿಮರ್ಶೆಯ ದೃಷ್ಟಿಯಿಂದ ನಮಗೆ ನಮ್ಮ ನಾಡಿನ ಕುಲಕುಲಗಳೆಲ್ಲವೂ ಒಂದೇ ಸಮನಾಗಿ ಮಾನ್ಯವಾದುವು: ಹಾರುವರೆಂದು ಹೆಚ್ಚಲ್ಲ, ಹೊಲೆಯರೆಂದು ಕಡೆಯಿಲ್ಲ; ಕನ್ನಡ ನಾಡಿನಲ್ಲಿ ನೆಲಸಿ, ಕನ್ನಡಿಗರು ನಾವು ಎಂದು ಅಭಿಮಾನಪಡುವ ಪ್ರತಿಯೊಂದು ಕುಲವೂ ನಮಗೆ ಮಾನ್ಯವು. ಈ ಕನ್ನಡ ಕುಲಕುಲಗಳ ವ್ಯಷ್ಟಿಸಮಷ್ಟಿ ವ್ಯವಹಾರ ಪ್ರಪಂಚವನ್ನು ಸಂಸ್ಕೃತಿಯ ದೃಷ್ಟಿಯಿಂದ ಹುಡುಕಾಡುವುದು ಈ ಲೇಖನಗಳಲ್ಲಿ ಮಾಡುವ ಕೆಲಸ (ಕರ್ನಾಟಕ ಸಂಸ್ಕೃತಿ ೧೯೩೫). ಸಿಂಪಿ ಲಿಂಗಣ್ಣ  ಅವರೂ ಇದೇ ಮಾರ್ಗದಲ್ಲಿ  ಮುನ್ನಡೆದಿದ್ದಾರೆ:

“ಇದು ದಲಿತರು ಉದ್ಧಾರವಾಗುವ ಕಾಲ; ದುಡಿಮೆಗಾರರು ರಾಜ್ಯ ಶಾಸಕರಾಗುವ ಕಾಲ; ಒಕ್ಕಲಿಗನು ನೇಗಿಲಯೋಗಿಯೆನಿಸುವ ಕಾಲ, ನಿರಕ್ಷರರು ಸಾಕ್ಷರರಾಗುವ ಕಾಲ; ಸಾಮಾನ್ಯ ಜನರೂ ಸುಖ ಬಯಸುವ ಕಾಲ; (ಜನಾಂಗದ ಜೀವಾಳ ೧೯೩೪).

ಕರ್ನಾಟಕದ ಹೆಚ್ಚಿನ ಜಾನಪದ ಅಧ್ಯಯನ ಎಂಬುದು ಜನಪದ ಸಾಹಿತ್ಯದ ಅಧ್ಯಯನವೆ ಆಗಿದೆ. ಕರ್ನಾಟಕದಲ್ಲಿ ‘ಜಾನಪದವನ್ನು ಹುಟ್ಟಿಸಿ ಬೆಳಸಿದವರೆ ಸಾಹಿತಿಗಳು. ಜನಪದ ಸಾಹಿತ್ಯ ಸಂಗ್ರಹ ಬ್ರಿಟಿಷ್ ವಿದ್ವಾಂಸ ಜಾನ್ ಲೇಡನ್ (೧೮೦೩) ಕಾಲದಿಂದ ನಡೆಯುತ್ತ ಬಂದಿದೆ. ಅದರ ಸಾಹಿತ್ಯ ಅಧ್ಯಯನ ಕೂಡ ತುಂಬ ಹಿಂದಿನದು. ಜನಪದ ಸಾಹಿತ್ಯ ಸೇರಿದಂತೆ ಜನಪದರ ಏನೆಲ್ಲ ಹುಟ್ಟುವಳಿಗಳನ್ನು ಜಾನಪದವೆಂಬ ಸಮಗ್ರ ವಿಷಯದೊಳಗೆ ತಂದು ಅಧ್ಯಯನ ಮಾಡಿದ್ದು ೧೯೬೬ ರಿಂದ ಈಚೆಗೆ. ಕರ್ನಾಟಕ ಜಾನಪದ ಅಧ್ಯಯನದ ಪ್ರೇರಕರೆಂದರೆ ದೇ. ಜವರೇಗೌಡ. ಇವರನ್ನು ಅನುಸರಿಸಿದವರೆಂದರೆ, ಹಾ. ಮಾ. ನಾಯಕ ಮತ್ತು ಜೀ.ಶಂ. ಪರಮಶಿವಯ್ಯ. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಮೊದಲಾಗಿ ಕನ್ನಡ ಎಂ.ಎ ತರಗತಿಗೆ ಐಚ್ಛಿಕವಾಗಿ ಎರಡು ಜಾನಪದ ಸಂಬಂಧಿ ಪತ್ರಿಕೆಗಳನ್ನು ಅಧ್ಯಯನಕ್ಕಾಗಿ ಅಳವಡಿಸಲಾಯಿತು (೧೯೬೬). ಆನಂತರ ೧೯೭೪ರಲ್ಲಿ ಪೂರ್ಣಪ್ರಮಾಣದಲ್ಲಿ ಜಾನಪದ ಎಂ.ಎ ತರಗತಿಗಳನ್ನು ಆರಂಭಿಸಲಾಯಿತು. ಈ ವಿಭಾಗಕ್ಕೆ ಕರ್ನಾಟಕದ, ಏಕೆ ಭಾರತದಲ್ಲಿಯೇ ಮೊದಲಾಗಿ ಜಾನಪದ ಪ್ರಾಧ್ಯಾಪಕರಾಗಿ ಜೀ.ಶಂ.ಪರಮಶಿವಯ್ಯ ನೇಮಕಗೊಂಡರು. ಇದೇ ಸಂದರ್ಭದಲ್ಲಿ ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿದ್ದ ಹಾ. ಮಾ. ನಾಯಕ ಅವರು ‘ಜಾನಪದ ಸ್ವರೂಪ’ (೧೯೬೬) ಕುರಿತು ಒಂದು ಸಮಗ್ರ ದೃಷ್ಟಿಯ ಲೇಖನವನ್ನು ಬರೆದು ಜಾನಪದ ಅಧ್ಯಯನಕ್ಕೆ ರಾಜಮಾರ್ಗವನ್ನು ತೋರಿಸಿದರು. ಇಷ್ಟೆಲ್ಲದರ ಪ್ರೇರಣಾಶಕ್ತಿಯಾದ ದೇ.ಜವರೇಗೌಡರ ನುಡಿ ಇದು: ‘ಜಾನಪದ ಸಂಪ್ರದಾಯ ಒಂದು ಜನಸಮುದಾಯದ ಸಮಷ್ಟಿ ಸೃಷ್ಟಿ, ಸಾಮಾಜಿಕ ಜೀವನದ ಸಂಕೇತ, ರಾಷ್ಟ್ರೀಯ ಸಂಸ್ಕೃತಿಯ ತಾಯಿ ಬೇರು; ಅದು ಜನಸಾಮಾನ್ಯರ ಶ್ರುತಿಯೂ ಅಹುದು, ಸ್ಮೃತಿಯೂ ಅಹುದು…. ಭಾರತೀಯತ್ವದ ಅಥವಾ ದೇಶೀಯತೆಯ ರಕ್ಷಣೆಗಾಗಿ ಜಾನಪದ ಸಂಪ್ರದಾಯದ ಜೀರ್ಣೋದ್ಧಾರ ಕಾರ್ಯ ನಡೆಯಬೇಕಾಗಿದೆ…..ಜಾನಪದ ಸಂಪ್ರದಾಯದ ಪುನಶ್ಚೇತನದಿಂದ ದಾಸ್ಯ ಮನೋಭಾವ ತೊಲಗಿ ಜನಜೀವನದಲ್ಲಿ ಹುರುಪು ಹುಮ್ಮಸ್ಸುಗಳು ಚಿಗುರಿ, ಆತ್ಮಪ್ರಜ್ಞೆ ಕೊನರಿ, ಕೆಚ್ಚುನೆಚ್ಚುಗಳು ಮೂಡಿ, ಹೊಸ ಚೇತನ ಮುಕ್ಕಳಿಸುತ್ತದೆ (ಜನಪದ ಸಾಹಿತ್ಯ ಸಮೀಕ್ಷೆ – ಜೀಶಂಪ; ಮನ್ನುಡಿಯಲ್ಲಿ ೧೯೬೭).

ಮೈಸೂರು ವಿಶ್ವವಿದ್ಯಾನಿಲಯ ಆರಂಭಿಸಿದ ಈ ಜಾನಪದ ಪ್ರಸ್ಥಾನ, ಇದೊಂದು ರಾಷ್ಟ್ರೀಯ ಅವಶ್ಯಕತೆ ಎನ್ನುವಂತೆ ಬಹುಬೇಗನೆ ಕರ್ನಾಟಕದ ಎಲ್ಲ ವಿಶ್ವವಿದ್ಯಾಲಯಗಳಿಗೆ ವ್ಯಾಪಿಸಿತು. ದೇಜಗೌ, ಹಾಮಾನಾ, ಜೀಶಂಪ ಅವರು ಈ ಪ್ರಸ್ಥಾನದ ಮಾರ್ಗದರ್ಶಿ ಮಾದರಿಗಳಾದರು. ಈ ಹಿಂದೆ ಜನಪದ ಸಾಹಿತ್ಯ ಸಂಗ್ರಹಕ್ಕೆ ಅಗ್ರಮಾನ್ಯತೆ ಇತ್ತು. ಈಗದು ಅಧ್ಯಯನದ ನೆರವನ್ನು ಪಡೆಯಬೇಕಾಗಿ ಬಂತು. ಜನಪದ ಸಾಹಿತ್ಯವನ್ನು ಕೇಳುವ – ಓದುವ ಪ್ರಕ್ರಿಯೆ ಅದನ್ನು ಸಾಂಸ್ಕೃತಿಕವಾಗಿ ಅರ್ಥೈಸುವತ್ತ ಮುನ್ನಡೆಯಿತು. ಅದು ಕಾರಣವಾಗಿ ಹಲವರು ಜನಪದ ಸಾಹಿತ್ಯವನ್ನು ಸಂಗ್ರಹಿಸುತ್ತಲೂ, ಅದರ ವಿಚಾರವನ್ನು ಹೇಳುತ್ತಲೂ ಹೋದರು. ಈ ನಿಟ್ಟಿನಲ್ಲಿ ಕರ್ನಾಟಕದ ವಿಶ್ವವಿದ್ಯಾನಿಲಯಗಳು ಮಾರ್ಗದರ್ಶಕನ ಸ್ಥಾನದಲ್ಲಿ ನಿಂತರೆ, ಹೊರಗಿನಿಂದ ಅನೇಕರು ಈ ಮಾರ್ಗವನ್ನು ದೃಢೀಕರಿಸಿದ್ದಾರೆ.

ವಿಶ್ವವಿದ್ಯಾಲಯಗಳಿಗೆ ಜನಪದ ಸಾಹಿತ್ಯವೊಂದು ಅಧ್ಯಯನ ವಿಷಯವಾಗಬಲ್ಲದು ಎಂಬ ಸೂಚನೆಯನ್ನೂ ವಾತಾವರಣವನ್ನೂ ಸೃಷ್ಟಿಸಿಕೊಟ್ಟವರು ರಾಷ್ಟ್ರೀಯವಾದಿಗಳಾದ ಹಿರಿಯ ಕನ್ನಡ ಸಾಹಿತಿಗಳು. ಜನಪದ ಸಾಹಿತ್ಯ – ಜಾನಪದವನ್ನು ಅಧ್ಯಯನ ಶಿಸ್ತನ್ನಾಗಿ ಮಾಡಿಯೆ ತೀರುವ ಹಠವನ್ನು ಹೊತ್ತವರು ದೇ.ಜವರೇಗೌಡರು. ಜಾನಪದ ಡಿಪ್ಲೊಮಾ, ಜಾನಪದ ಎಂ.ಎ ತೆರೆಯುವುದರ ಜೊತೆಗೆ ಜನಪದ ಸಾಹಿತ್ಯವನ್ನು ಸಂಗ್ರಹಿಸಲು ಒಂದು ವಿಭಾಗವನ್ನೇ ಆರಂಭಿಸಿದರು. ಕರ್ನಾಟಕದಾದ್ಯಂತ ಜನಪದ ಸಾಹಿತ್ಯವನ್ನು ಸಂಗ್ರಹಿಸಿ ತರಲು ಕ್ಯಾತನಹಳ್ಳಿ ರಾಮಣ್ಣ, ಟಿ.ಎಸ್.ರಾಜಪ್ಪ, ಅಂಬಳಿಕೆ ಹಿರಿಯಣ್ಣ ನೇಮಕಗೊಂಡರು. ಇವರ ನಂತರ ಮೈಲಹಳ್ಳಿ ರೇವಣ್ಣ ಮತ್ತು ಜಯಲಕ್ಷ್ಮಿ ಸೀತಾಪುರ ಜನಪದ ಸಾಹಿತ್ಯ ಸಂಗ್ರಹದಲ್ಲಿ ತೊಡಗಿದರು. ಇದೇ ಸಂದರ್ಭದಲ್ಲಿ ಜಾನಪದ ವಸ್ತುಸಂಗ್ರಹಾಲಯವನ್ನೂ ದೇ.ಜ.ಗೌ. ಶುರುಮಾಡಿದರು. ಅವರ ಈ ಸಾಹಸ ಕರ್ನಾಟಕದ ಬೇರೆ ಬೇರೆ ವಿಶ್ವವಿದ್ಯಾನಿಲಯಗಳನ್ನು ಪ್ರೇರೇಪಿಸಿತು. ಈ ಮೂರು ಹಂತದ; ಜಾನಪದ ಅಧ್ಯಯನ, ಸಂಗ್ರಹ ಹಾಗೂ ವಸ್ತುಸಂಗ್ರಹಾಲಯ ಸ್ಥಾಪನೆ ಕಾರ್ಯಯೋಜನೆಯನ್ನು ಕರ್ನಾಟಕದ ಬೇರೆ ಬೇರೆ ವಿಶ್ವವಿದ್ಯಾಲಯಗಳು ಕೈಗೆತ್ತಿಕೊಂಡವು.

ಮೈಸೂರು ವಿಶ್ವವಿದ್ಯಾಲಯ ವಲಯವು ಈಗಾಗಲೇ ಎಸ್. ಕೆ. ಕರೀಂಖಾನ್, ಕೆ. ಆರ್. ಲಿಂಗಪ್ಪ ಹಾಗೂ ಮತ್ತಿತರರ ಜನಪದ ಸಾಹಿತ್ಯ ಹಾಡುಗಾರಿಕೆ ಪ್ರಚಾರದಿಂದ, ಮತಿಘಟ್ಟ ಕೃಷ್ಣಮೂರ್ತಿಯವರ ಸಮೃದ್ಧ ಜನಪದ ಸಾಹಿತ್ಯ ಸಂಗ್ರಹದ ದಾಖಲೆ ಮತ್ತು ತರೀಕೆರೆಯ ಅಖಿಲ ಕರ್ನಾಟಕ ಜನಪದ ಸಾಹಿತ್ಯ ಸಮ್ಮೇಳನದಿಂದ ಮೈನೆರೆದು ನಿಂತಿತ್ತು. ಈ ಸಂದರ್ಭವನ್ನು ಬಳಸಿಕೊಂಡು ಈ ವಲಯದಿಂದ ಕೆಳಗಿನ ಜಾನಪದ ವಿದ್ವಾಂಸರು ಸಂಗ್ರಹ, ಅಧ್ಯಯನ ಮತ್ತು ಪ್ರಸರಣಕಾರ್ಯವನ್ನು ಮುಂದುವರಿಸಿದರು. ಅವರೆಂದರೆ: ಮತಿಘಟ್ಟ ಕೃಷ್ಣಮೂರ್ತಿ, ಪಿ.ಆರ್. ತಿಪ್ಪೇಸ್ವಾಮಿ, ಸಿ. ಪಿ. ಕೆ., ರಾಗೌ, ಸುಧಾಕರ, ನಂ.ತಪಸ್ವೀ ಕುಮಾರ್, ಹ. ಕ. ರಾಜೇಗೌಡ, ಡಿ.ಕೆ.ರಾಜೇಂದ್ರ ಹಿ.ಶಿ. ರಾಮಚಂದ್ರೇಗೌಡ, ಜಿ. ವಿ. ದಾಸೇಗೌಡ, ವೈ.ಸಿ. ಭಾನುಮತಿ, ನಲ್ಲೂರು ಪ್ರಸಾದ್, ಮೇಟಿಕೆರೆ ಹಿರಿಯಣ್ಣ, ಚಂದ್ರು ಕಾಳೇನಹಳ್ಳಿ, ವಿ. ಎನ್. ಶಿವರಾಮು ಮುಂತಾದವರು.

ತಾವು ಬೇರೆಯಾಗುವುದಕ್ಕೆ ಮೊದಲು ಕುವೆಂಪು ಹಾಗೂ ಮಂಗಳೂರು ವಿಶ್ವವಿದ್ಯಾಲಯಗಳು ಮೈಸೂರು ವಿಶ್ವವಿದ್ಯಾಲಯದ ವಿಸ್ತರಿತ ಕೇಂದ್ರಸ್ಥಾನಗಳಾಗಿದ್ದವು. ಜನಪದ ಸಾಹಿತ್ಯ ಕಾರ್ಯಯೋಜನೆಯಲ್ಲಿ ಅವು ಮೈಸೂರು ವಿಶ್ವವಿದ್ಯಾಲಯವನ್ನು ಅನುಸರಿಸಿದವು. ಪ್ರತ್ಯೇಕ ವಿಶ್ವವಿದ್ಯಾಲಯಗಳಾದ ಮೇಲೂ ಅಲ್ಲಿನ ಕನ್ನಡ ಸಾಹಿತಿ-ಅಧ್ಯಾಪಕರು ಜನಪದ ಸಾಹಿತ್ಯದ ಮೇಲೆ ತೋರಿದ ಆಸಕ್ತಿ ಅನನ್ಯವಾಗಿದೆ. ಪ್ರತಿಯೊಬ್ಬರೂ ತಮ್ಮ ನೆಲೆಯಲ್ಲಿ ಗಣನೀಯವಾದ ಕೆಲಸ ಮಾಡಿದ್ದಾರೆ. ಕುವೆಂಪು ವಿಶ್ವವಿದ್ಯಾಲಯದ ಕಡೆಯಿಂದ ಎಚ್.ಜೆ.ಲಕ್ಕಪ್ಪಗೌಡ, ತೀ.ನಂ. ಶಂಕರನಾರಾಯಣ, ಶ್ರೀಕಂಠ ಕೂಡಿಗೆ, ಬಸವರಾಜ ನೆಲ್ಲೀಸರ, ಎಂ. ಜಿ. ಈಶ್ವರಪ್ಪ, ಮೀರಾಸಾಬಿಹಳ್ಳಿ ಶಿವಣ್ಣ, ಮುಂತಾದವರು ಹಾಗೂ ಮಂಗಳೂರು ವಿಶ್ವವಿದ್ಯಾಲಯ ವಲಯದಿಂದ ಗುಂಡ್ಮಿ ಚಂದ್ರಶೇಖರ ಐತಾಳ, ಅಮೃತ ಸೋಮೇಶ್ವರ, ಬಿ.ಎ.ವಿವೇಕ ರೈ, ಕೆ. ಚಿನ್ನಪ್ಪಗೌಡ, ಶಿವರಾಮಶೆಟ್ಟಿ, ಅಭಯಕುಮಾರ್, ಎಸ್.ಎ. ಕೃಷ್ಣಯ್ಯ, ಅರವಿಂದ ಮಾಲಗತ್ತಿ, ಪ್ರಭಾಕರ ಜೋಷಿ, ಪಾಲ್ತಾಡಿ ರಾಮಕೃಷ್ಣ ಆಚಾರ್, ರಾಘವ ನಂಬಿಯಾರ್ ಈ ಮಂತಾದವರು ಜನಪದ ಸಾಹಿತ್ಯವಲ್ಲದೆ ಯಕ್ಷಗಾನ ಸಾಹಿತ್ಯದಲ್ಲೂ ಪ್ರಬುದ್ಧ ಸೇವೆ ಸಲ್ಲಿಸಿದ್ದಾರೆ.

ಕರ್ನಾಟಕ ವಿಶ್ವವಿದ್ಯಾಲಯದ ಅಂದಿನ ಕುಲಪತಿಗಳಾಗಿದ್ದ ಆರ್. ಸಿ. ಹಿರೇಮಠರು,

ದೇ. ಜವರೇಗೌಡರು ತಮ್ಮ ವಿಶ್ವವಿದ್ಯಾಲಯದಲ್ಲಿ ಸೃಷ್ಟಿಸಿದ್ದ ಮೂರು ಹಂತದ ಜನಪದ ಸಾಹಿತ್ಯ- ಜಾನಪದ ಕ್ರಿಯಾಯೋಜನೆಯನ್ನು ಅನುಸರಿಸಿದರು. ಇವರ ನಾಯಕತ್ವದ ಮುಂದುವರಿಕೆಯಾಗಿ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಬಹುದೊಡ್ಡ ಮೊತ್ತದ ಜನಪದ ಸಾಹಿತ್ಯ ಹಾಗೂ ಜಾನಪದ ಅಧ್ಯಯನದ ಫಲಶ್ರುತಿಯಾಗಿ ಅನೇಕ "ಜಾನಪದ ಸಾಹಿತ್ಯದರ್ಶನ" ಸಂಪುಟಗಳು ಹೊರಬಂದವು. ಕರ್ನಾಟಕ ವಿಶ್ವವಿದ್ಯಾಲಯ ವಲಯದಲ್ಲಿ ಎಂ.ಎಸ್. ಸುಂಕಾಪುರ, ಎಂ ಟಿ. ಧೂಪದ, ಸೋಮಶೇಖರ ಇಮ್ರಾಪುರ, ಎಂ. ಎಸ್. ವೃಷಭೇಂದ್ರಸ್ವಾಮಿ, ಎಂ. ಎಂ. ಕಲಬುರ್ಗಿ, ದೇವೇಂದ್ರಕುಮಾರ ಹಕಾರಿ, ಎಂ. ಬಿ. ನೇಗಿನಹಾಳ, ಎಂ. ಬಿ. ಕೊಟ್ರಶೆಟ್ಟಿ, ಸಿ. ಸಿ. ಎ. ಪೈ, ಎಲ್. ಆರ್. ಹೆಗಡೆ, ಎನ್. ಆರ್. ನಾಯಕ, ಶ್ರೀಮತಿ ಶಾಂತಿನಾಯಕ, ಎಂ.ಎಂ.ಪಡಶೆಟ್ಟಿ, ಜ್ಯೋತಿ ಹೊಸೂರ, ನಿಂಗಣ್ಣ ಸಣ್ಣಕ್ಕಿ, ಶ್ರೀರಾಮ ಇಟ್ಟಣ್ಣನವರ, ವಿಲಿಯಂಮಾಡ್ತ, ಎಂ. ಎನ್. ವಾಲಿ, ಬಿ. ವಿ. ಮಲ್ಲಾಪುರ, ಎಚ್. ಎಂ. ಮಹೇಶ್ವರಯ್ಯ, ಕೆ. ಆರ್. ದುರ್ಗಾದಾಸ್, ಸೈಯದ್ ಜಮೀರುಲ್ಲಾ ಷರೀಫ್, ಶಾಲಿನಿ ರಘುನಾಥ, ಸಿ. ಕೆ. ನಾವಲಗಿ ಮುಂತಾದವರು ಕೆಲಸ ಮಾಡುತ್ತಾ ಬರುತ್ತಿದ್ದಾರೆ. ಇವರೆಲ್ಲರ ಹಿಂದೆ ಹಿರಿಯ ಶಕ್ತಿಯಾದ ಬಿ. ಎಸ್. ಗದ್ದಗೀಮಠರು ಜನಪದ ಸಾಹಿತ್ಯದಲ್ಲಿ ಮಾಡಿದ ಅಪಾರ ಸೇವೆ ಬೆಂಬಲವಾಗಿ ನಿಂತಿದೆ. ಬಹುದೊಡ್ಡ ವಿಶ್ವವಿದ್ಯಾನಿಲಯಗಳಲ್ಲಿ ಒಂದಾದ ಗುಲಬರ್ಗಾ ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಹಿರಿಯ – ಕಿರಿಯ ಅನೇಕ ಸಾಹಿತಿಗಳು ಜನಪದ ಸಾಹಿತ್ಯ ಸಂಗ್ರಹ ಮತ್ತು ಅಧ್ಯಯನದಲ್ಲಿ ತಮ್ಮ ಪ್ರಾದೇಶಿಕ ವೈಶಿಷ್ಟ್ಯವನ್ನು ಸರಿಯಾಗಿಯೆ ದಾಖಲಿಸಿದ್ದಾರೆ. ಅವರುಗಳಲ್ಲಿ ಬಿ. ಬಿ. ಹೆಂಡಿ, ಎಂ. ಎಸ್. ಲಠ್ಠೆ, ಮ. ಗು. ಬಿರಾದಾರ, ವೀರಣ್ಣ ದಂಡೆ, ಪಿ.ಕೆ. ಖಂಡೋಬಾ, ಡಿ. ಬಿ. ನಾಯಕ ಮುಖ್ಯರು.

ಕನ್ನಡ ವಿಶ್ವವಿದ್ಯಾಲಯ ತನ್ನ ಕಡಿಮೆ ವಯಸ್ಸಿನಲ್ಲೆ ಗಣನೀಯ ಜನಪದ ಸಾಹಿತ್ಯವನ್ನು ಸಂಗ್ರಹಿಸಿ ಪ್ರಕಟಿಸಿದೆ. ಈ ನೆಲೆಯಲ್ಲಿ ಹಿ. ಚಿ. ಬೋರಲಿಂಗಯ್ಯ, ಎ. ವಿ. ನಾವಡ, ಗಾಯತ್ರಿ ನಾವಡ ದಾಖಲೆಯ ಕೆಲಸ ಮಾಡಿದ್ದಾರೆ. ಮಂಜುನಾಥ ಬೇವಿನಕಟ್ಟಿ, ಎಸ್. ಸಿ. ರಮೇಶ, ಮೊಗಳ್ಳಿ ಗಣೇಶ, ವೆಂಕಟೇಶ ಇಂದುವಾಡಿ, ವೀರೇಶ ಬಡಿಗೇರ ಇವರು ಗಮನ ಸೆಳೆಯುವ ಕೆಲಸ ಮಾಡಿದ್ದಾರೆ..

ಹೊಸಪೇಟೆಯಲ್ಲಿದ್ದು ಬಸವರಾಜ ಮಲಶೆಟ್ಟರು ಜನಪದ ಸಾಹಿತ್ಯ – ಬಯಲಾಟ ಕ್ಷೇತ್ರದಲ್ಲಿ ಅಪೂರ್ವವಾದ ಸಾಧನೆ ಮಾಡಿದ್ದಾರೆ. ಪುರುಷೋತ್ತಮ ಬಿಳಿಮಲೆಯವರು ಬಹುದೊಡ್ಡ ಪ್ರೇರಣೆಯಾಗಿ ಕನ್ನಡ ವಿಶ್ವವಿದ್ಯಾಲಯದ ಜಾನಪದ ವಿಭಾಗವನ್ನು ಕಟ್ಟಿದವರು.

ರಾಜಧಾನಿ ವಿಶ್ವವಿದ್ಯಾಲಯವಾದ ಬೆಂಗಳೂರು ವಲಯದಲ್ಲಿ ಚಂದ್ರಶೇಖರ ಕಂಬಾರ, ಕಾಳೇಗೌಡ ನಾಗವಾರ, ಸಿದ್ಧಗಂಗಯ್ಯ ಕಂಬಾಳು, ಡಿ.ಲಿಂಗಯ್ಯ, ಜಿ.ಆರ್.ತಿಪ್ಪೇಸ್ವಾಮಿ, ರಂಗಾರೆಡ್ಡಿ ಕೋಡಿರಾಂಪುರ, ಕೆ. ಆರ್. ಸಂಧ್ಯಾರೆಡ್ಡಿ , ಧವಳಶ್ರೀ, ಸಿ.ವೀರಣ್ಣ, ಬಿಎಸ್.ಸ್ವಾಮಿ, ಎಸ್.ಪಿ. ಪದ್ಮಪ್ರಸಾದ್, ಟಿ.ಗೋವಿಂದರಾಜು, ರಾಜೇಗೌಡ ಹೊಸಹಳ್ಳಿ, ಎಂ.ಬೈರೇಗೌಡ, ಚಕ್ಕೆರೆ ಶಿವಶಂಕರ್, ಬೈರಮಂಗಲ ರಾಮೇಗೌಡ, ಕೃಷ್ಣಮೂರ್ತಿ ಹನೂರು, ಟಿ.ಎಸ್.ಸತ್ಯನಾಥ್, ಅಂದನೂರು ಶೋಭ, ಕುರುವ ಬಸವರಾಜ ಅವರಂಥ ಅನೇಕ ಜನಪದ ಸಾಹಿತ್ಯ ಕ್ಷೇತ್ರದ ಸಾಧಕರಿದ್ದಾರೆ. ಈ ವಲಯದ ಮಹಾ ಪ್ರೇರಣೆಗಳೆಂದರೆ ಚಂದ್ರಶೇಖರ ಕಂಬಾರ ಮತ್ತು ಎಚ್.ಎಲ್.ನಾಗೇಗೌಡರು. ನಾಗೇಗೌಡರಲ್ಲಿ ಅಪಾರವಾದ ಜನಪದ ಸಾಹಿತ್ಯ ಸಂಗ್ರಹವಿದೆ.

ಜನಪದ ಸಾಹಿತ್ಯ ಸಂಗ್ರಹ, ಸಂಪಾದನೆ, ಪ್ರಕಟಣೆ, ಪ್ರಚಾರ, ಪ್ರಸಾರ, ವಿವರಣೆ, ವಿಶ್ಲೇಷಣೆ, ಸಮರ್ಥನೆ ಮತ್ತು ತಮ್ಮನ್ನು ತಾವೇ ಜನಪದ ಸಾಹಿತ್ಯಕ್ಕೆ ಸಮರ್ಪಿಸಿಕೊಳ್ಳುವ ಚಟುವಟಿಕೆ ಎಲ್ಲಿಗೆ ತಲುಪಿತು ಎಂದರೆ ಜನಪದ ಸಾಹಿತ್ಯವನ್ನು ಶಿಷ್ಟಸಾಹಿತ್ಯ ಚಟುವಟಿಕೆಗೆ ಸರಿಸಮವಾಗಿಸುವ ಪರ್ಯಾಯ ಚಿಂತನೆ ಹುಟ್ಟಿಕೊಂಡಿತು. ಇನ್ನೊಂದು ರೀತಿಯಲ್ಲಿ ಈ ಚಟುವಟಿಕೆ ಶಿಷ್ಟಸಾಹಿತ್ಯಕ್ಕೆ ತೋರಿದ ಸೃಜನಾತ್ಮಕ ಪ್ರತಿಭಟನೆಯಂತೆಯೂ ಕಾಣುತ್ತದೆ. ಆರಂಭಕಾಲದಲ್ಲಿ ಶಿಷ್ಟಸಾಹಿತ್ಯಕ್ಕೆ ಸೌಷ್ಟವವನ್ನು ಭರ್ತಿ ಮಾಡಿಕೊಳ್ಳಲು ಹುಟ್ಟಿದ ಜನಪದ ಸಾಹಿತ್ಯ ಸಂಗ್ರಹಪ್ರೇಮ ಇಪ್ಪತ್ತನೆಯ ಶತಮಾನದ ಏಳನೆಯ ದಶಕದ ಹೊತ್ತಿಗೆ ಶಿಷ್ಟಸಾಹಿತ್ಯಕ್ಕೆ ಸಮಸಾಹಿತ್ಯವೆಂಬಂತೆ ಎದ್ದುನಿಂತಿತು. ಇದಕ್ಕೆ ಸಮರ್ಥನೆ ಎನ್ನುವಂತೆ ೧೯೭೭ರಲ್ಲಿ ತರೀಕೆರೆಯಲ್ಲಿ, ೧೯೭೯ರಲ್ಲಿ ಮಂಗಳೂರಿನಲ್ಲಿ ಹಾಗೂ ೧೯೮೧ ರಲ್ಲಿ ನಾಗಮಂಗಲದಲ್ಲಿ ನಡೆದ ಅಖಿಲ ಕರ್ನಾಟಕ ಜನಪದ ಸಾಹಿತ್ಯ ಸಮ್ಮೇಳನಗಳೆ ಸಾಕ್ಷಿ. ಮೊದಲ ಸಮ್ಮೇಳನದ ಜವಾಬ್ದಾರಿಯನ್ನು ಜನಪದ ಸಾಹಿತ್ಯ ಕ್ಷೇತ್ರದ ನವಕೋಗಿಲೆ ಎಂದು ಹೆಸರು ಪಡೆದಿದ್ದ ಕೆ.ಆರ್.ಲಿಂಗಪ್ಪನವರು ವಹಿಸಿದ್ದರು. ಉಳಿದೆರಡು ಸಮ್ಮೇಳನಗಳ ಜವಾಬ್ದಾರಿಯನ್ನು ಐ.ಎ.ಎಸ್. ಅಧಿಕಾರಿಯೂ ಜಾನಪದ ಲೋಕದ ಸೃಷ್ಟಿಕರ್ತರೂ ಆದ ಎಚ್.ಎಲ್.ನಾಗೇಗೌಡರು ನಿರ್ವಹಿಸಿದರು. ದೊಡ್ಡಪ್ರಮಾಣದ ಇಂತಹ ಜನಪದ ಸಾಹಿತ್ಯ ಸಮ್ಮೇಳನಗಳನ್ನು ಅನುಸರಿಸಿ  ಕರ್ನಾಟಕದ ಜಿಲ್ಲೆ ಜಿಲ್ಲೆಗಳಲ್ಲಿ ಅನೇಕ ಜನಪದ ಸಾಹಿತ್ಯ ಸಮ್ಮೇಳನಗಳು ನಡೆದವು.

ಇಂತಹ ಜನಪದ ಸಾಹಿತ್ಯ ಸಮ್ಮೇಳನಗಳ ಹಿಂದೆ ನಾಡಿನ ಹೆಸರಾಂತ ಸಾಹಿತ್ಯ ವಿಮರ್ಶಕರು ನಿಂತು ತಮ್ಮ ತಮ್ಮ ನೆಲೆಯಲ್ಲಿ ಜನಪದ ಸಾಹಿತ್ಯದ ಮಹತ್ವವನ್ನು  ಶೈಕ್ಷಣಿಕವಾಗಿ ಎತ್ತಿ ಹಿಡಿಯುವ ಪ್ರಯತ್ನ ನಡೆಸಿದ್ದರು. ತೀ. ನಂ. ಶ್ರೀಕಂಠಯ್ಯನವರಂಥ ಹಿರಿಯ ಕಾವ್ಯಮೀಮಾಂಸಕರು ತಮ್ಮ ಭಾರತೀಯ ಕಾವ್ಯಮೀಮಾಂಸೆಯಲ್ಲಿ ಕಾವ್ಯಲಕ್ಷಣಕ್ಕೆ ಜನಪದ ಸಾಹಿತ್ಯದಿಂದ  ಉದಾಹರಣೆಗಳನ್ನು ಎತ್ತಿಕೊಂಡು ಅದರ ಘನತೆಯನ್ನು ಹೆಚ್ಚಿಸಿದರು. ಈ ನಿಟ್ಟಿನಲ್ಲಿ ಹಿರಿಯ ಕವಿ ಕಾವ್ಯಮೀಮಾಂಸಕರಾದ ಜಿ. ಎಸ್. ಶಿವರುದ್ರಪ್ಪ ಮತ್ತು ಸಿ. ಪಿ. ಕೃಷ್ಣಕುಮಾರ್ ಅವರ ಕೊಡುಗೆ ಸ್ಮರಣೀಯವಾದುದು. ಸಿ. ಪಿ. ಕೆ. ಯವರು ಜನಪದ ಸಾಹಿತ್ಯದ ಸಾಮರ್ಥ್ಯವನ್ನು ಯಾಹೊತ್ತೂ ಶಿಷ್ಟಸಾಹಿತ್ಯಕ್ಕೆ ಕಡಿಮೆ ಇಲ್ಲವೆಂಬಂತೆ ಹಟಹಿಡಿದು ಬರೆದಿದ್ದಾರೆ. ಜನಪದ ಸಾಹಿತ್ಯವನ್ನೂ ಶಿಷ್ಟಸಾಹಿತ್ಯದ ಕ್ರಮದಂತೆ ಕಾವ್ಯಮೀಮಾಂಸಾ ಪರಿಧಿಗೆ ತರಬಹುದು ಎಂಬುದನ್ನು ಶ್ರಮವಹಿಸಿ ವೀರಣ್ಣ ದಂಡೆಯವರು ಸಾಧಿಸಿ ತೋರಿಸಿದ್ದಾರೆ.

ಜನಪದ ಸಾಹಿತ್ಯದ ಮೌಲ್ಯಮಾಪನ ದೃಷ್ಟಿಯಿಂದ ಗಿರಡ್ಡಿ ಗೋವಿಂದರಾಜು ಅವರ 'ಜನಪದ ಗೀತೆ' ಕೃತಿ ಜನಪದ ಸಾಹಿತ್ಯ ಪ್ರೇಮಿಗಳಲ್ಲಿ ಸಾಕಷ್ಟು ಪ್ರತಿಕ್ರಿಯೆಯನ್ನು ಸೃಷ್ಟಿಮಾಡಿತು. ಈ ಬರಹಕ್ಕೆ ಸಿಪಿಕೆಯವರು ತೀವ್ರವಾಗಿ ಪ್ರತಿನುಡಿದಿದ್ದಾರೆ. ಜನಪದ ಸಾಹಿತ್ಯದ ಸಾಹಿತ್ಯಕ ಮೌಲ್ಯಮಾಪನದ ದೃಷ್ಟಿಯಿಂದ ಚಂದ್ರಶೇಖರ ಕಂಬಾರ, ರಾಗೌ ಮತ್ತು ಹಿ. ಶಿ. ರಾಮಚಂದ್ರೇಗೌಡ ಅವರ ನಿಲುವು 'ಪ್ರಕಾರನ್ಯಾಯ'ದ ನೆಲೆಯಿಂದ ವ್ಯಕ್ತವಾಗಿದೆ. ಜನಪದ ಸಾಹಿತ್ಯ ಅಖಂಡ ಜಾನಪದದ 'ಉಪ ಉತ್ಪನ್ನ' ಎಂದು ಕಂಬಾರರು ಹೇಳಿದರೆ; ಜನಪದ ಸಾಹಿತ್ಯದ ಅನನ್ಯತೆಯೆ ಬೇರೆ ಎಂದು ರಾಗೌ ಪ್ರತಿಪಾದಿಸಿರುತ್ತಾರೆ. ಈ ವಿಷಯ ಕುರಿತು ಹಿ. ಶಿ. ರಾಮಚಂದ್ರೇಗೌಡ ಅವರ 'ಪ್ರಕಾರನ್ಯಾಯ' ಮತ್ತು 'ಪ್ರಕಾರ ಅಸ್ತಿತ್ವ' ದೃಷ್ಟಿಯಿಂದ ಜನಪದ ಸಾಹಿತ್ಯವನ್ನು ಒಂದು ವಿಶಿಷ್ಟ ಸಾಹಿತ್ಯ

ಪ್ರಕಾರ ಮತ್ತು ಅಸ್ತಿತ್ವ ಎಂಬುದನ್ನು ಸ್ಪಷ್ಟಪಡಿಸಿದ್ದಾರೆ. ಜನಪದ ಸಾಹಿತ್ಯವನ್ನು ಬೇರೆ ಬೇರೆ ಮಗ್ಗಲುಗಳಲ್ಲಿ ವಿವರಿಸುವ ಮತ್ತು ವಿಮರ್ಶಿಸುವ ಪ್ರಯತ್ನಗಳನ್ನು ಕರ್ನಾಟಕದ ಅನೇಕ ಸಾಹಿತ್ಯ ಚಿಂತಕರು ಮಾಡಿದ್ದಾರೆ.

**ಪರ್ಯಾಯದ ಬೆಲೆ : ಗೊತ್ತಿಲ್ಲದ ನೆಲೆ**

ಈಗ ಜಗತ್ತಿನಾದ್ಯಂತ ಪರ್ಯಾಯ ಜ್ಞಾನದ ಹುಡುಕಾಟ ತುಂಬ ತುರ್ತಿನ ಕೆಲಸವೆಂಬಂತೆ ನಡೆಯುತ್ತಿದೆ. ಅಭಿವೃದ್ಧಿಶೀಲ ದೇಶಗಳು ಇರುವ ಸೌಕರ್ಯಗಳನ್ನು ಇನ್ನೂ ಹೆಚ್ಚಿಸಿಕೊಳ್ಳುವ ಕಾರಣಕ್ಕೆ ಪರ್ಯಾಯ ಜ್ಞಾನದ ಹುಡುಕಾಟದಲ್ಲಿ ತೊಡಗಿವೆ.
ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು 'ಪ್ರಭುರಾಷ್ಟ್ರಗಳ ಪ್ರಭುತ್ವ ವಿಜ್ಞಾನ'ಕ್ಕೆ ಪರ್ಯಾಯವಾಗಿ ತಮ್ಮ ತಮ್ಮ ದೇಶದ 'ಪಾರಂಪರಿಕ ಜ್ಞಾನ ಮಾದರಿ'ಗಳನ್ನು ಸಮಕಾಲೀನಗೊಳಿಸಿಕೊಳ್ಳುವ ಹವಣಿಕೆಯಲ್ಲಿವೆ. ಕರ್ನಾಟಕದಲ್ಲಿ ಜನಪದ ಸಾಹಿತ್ಯವನ್ನು ದೇಸಿಸಾಹಿತ್ಯವೆಂದೂ, ಜಾನಪದವನ್ನು ದೇಶಿಜ್ಞಾನವೆಂದೂ ಹೆಸರಿಸಿ ಅವುಗಳ ಪ್ರತ್ಯೇಕತೆ ಮತ್ತು ವಿಶಿಷ್ಟತೆಯನ್ನು ಬಹಳ ಕಾಲದಿಂದಲೂ ಗುರುತಿಸಲಾಗಿದೆ. ಇತ್ತೀಚಿನ ದಿನಗಳಲ್ಲಿ ಹೊಸ ತಲೆಮಾರಿನ ಜಾನಪದ ಚಿಂತಕರು ಜಾನಪದವನ್ನು ಸಮಕಾಲೀನ ಜ್ಞಾನ – ವಿಜ್ಞಾನವನ್ನಾಗಿ ನಿರ್ವಚಿಸಿ ಮಂಡಿಸುತ್ತಿದ್ದಾರೆ. ಉದಾಹರಣೆಗಾಗಿ ಹಿ. ಶಿ. ರಾಮಚಂದ್ರೇಗೌಡರ ಕೆಳಗಿನ ನುಡಿಗಳನ್ನು ಗಮನಿಸಿ;

'ಪುರದಪುಣ್ಯಂ ಪುರುಷರೂಪಿಂದೆ ಪೋಗುತಿದೆ
ಪರಿಜನದ ಭಾಗ್ಯವಡವಿಗೆ ನಡೆಯುತಿದೆ.'
**– ರಾಘವಾಂಕ**

"ವಿಜ್ಞಾನವೆಂಬ ಯಜಮಾನನಿಗೆ ಜನತೆಯ ಜ್ಞಾನ ಸೊರಗಿ ಸೋತುಹೋಯಿತು. ಇಲ್ಲಿಂದಲೆ ಬಡವರ ಸೋಲು ಆರಂಭವಾಯಿತು. ಎಲ್ಲ ಸ್ಥಳೀಯ ಕುಶಲಕರ್ಮಿಗಳು ಕೈಚೆಲ್ಲಿದರು. ಆ ಮೂಲಕ ಬಹುಜನರ ಸೃಜನಶೀಲತೆ ತಟಸ್ಥವಾಯಿತು. ಅನೇಕ ಶತಮಾನಗಳ ಜ್ಞಾನ ಅವನತಿಯ ಹಾದಿಹಿಡಿಯಿತು. ಇದೆ ಜಾನಪದ ; ಜನರ ಜ್ಞಾನ-ವಿಜ್ಞಾನ. ಒಂದು ದೇಶ ಸಮಗ್ರವಾಗಿ ಅಭಿವೃದ್ಧಿ ಹೊಂದಬೇಕಾದರೆ, ಬಹುಜನರು ಕ್ರಿಯಾಶೀಲರಾಗಬೇಕಾದರೆ, ಯುಗಶೀಲವಾದ ಜಾನಪದ ಮರುಹುಟ್ಟು ಪಡೆಯಬೇಕು ಮತ್ತು ಸಮಕಾಲೀನವಾಗಬೇಕು. ಧುತ್ತನೆ ಎದ್ದು ನಿಂತು ಬಡವರ ಹಾಗೂ ಬಹುಜನರ ಮನಸ್ಸು ಮತ್ತು ಶ್ರಮವನ್ನು ನಿಷ್ಕ್ರಿಯಗೊಳಿಸಿದ ಆಧುನಿಕತೆ ನಿಶ್ಶಸ್ತ್ರೀಕರಣಗೊಳ್ಳಬೇಕು. ಇಲ್ಲದಿದ್ದಲ್ಲಿ ನಮ್ಮನ್ನು ಅಮೆರಿಕ ಕಾಡಿದಂತೆ, ಅಮೆರಿಕವನ್ನು ಬಿನ್ ಲಾಡೆನ್ ಕಾಡಿದಂತೆ ನವ ಆಧುನಿಕತೆ ನಮ್ಮನ್ನೆಲ್ಲ ನಿರಂತರ ಭಯದಲ್ಲಿ ಇಟ್ಟಿರುತ್ತದೆ" (ಪುರದ ಪುಣ್ಯ ೬೧.೧೯೦೪).

ನಮ್ಮ ಜನಪದ ಸಾಹಿತ್ಯದ ಸಂಗ್ರಹ, ಅಧ್ಯಯನ ತಲುಪಬೇಕಾದ ಗುರಿ ಇದು. ಇಲ್ಲದಿದ್ದಲ್ಲಿ ಎಂದಿನಂತೆ ಜನಪದ ಸಾಹಿತ್ಯ ನಶಿಸಿಹೋಗುತ್ತಿದೆ, ನಾವು ಕಳೆದು ಹೋಗುತ್ತಿದ್ದೇವೆ ಎಂದು ಪರಿತಪಿಸುತ್ತಲೇ ಇರಬೇಕಾಗುತ್ತದೆ. ಈ ಪರ್ಯಾಯದ ಪ್ರಶ್ನೆ ಸರಳವಾದುದಲ್ಲ. ಅದು ನಮ್ಮ ಜೀವನ ಭದ್ರತೆಯ ಹುಡುಕಾಟ. ಜಾಗತೀಕರಣವೆಂಬ ವಸ್ತುರಾಕ್ಷಸನಿಂದ ಇಡೀ ಭಾರತೀಯ ಸಂಸ್ಕೃತಿ ವಸ್ತುಸಂಸ್ಕೃತಿಯಾಗಿ ಪರಿವರ್ತಿತವಾಗುತ್ತಿದೆ. ತಮ್ಮಲ್ಲೆ ವಸ್ತುವನ್ನು ಸೃಷ್ಟಿ ಮಾಡುವ ಜೀವನ ಸಂಸ್ಕೃತಿಯ ಆಶಯಗಳಾದ ಭೂಮಿ, ನೀರು, ಗಾಳಿ, ಆಹಾರ ಕಲುಷಿತಗೊಳ್ಳುತ್ತಿವೆ. ಜೀವನ ಸಂಸ್ಕೃತಿಯ ಅಭಿವ್ಯಕ್ತಿಗಳಾದ ಹೆಣ್ಣು, ಕಲಾವಿದರು, ಮಕ್ಕಳು ಮತ್ತು ಸಮುದಾಯಗಳು ಶಕ್ತಿಗುಂದುತ್ತಿವೆ. ಜೀವನ ಸಮತೋಲನಕ್ಕೆ ಒಡನಾಡಬೇಕಾದ ಅಂಚಿಗೆ ಸರಿದವರು, ರಾಜಕೀಯವನ್ನು ಎಟುಕಿಸಿಕೊಳ್ಳಲಾಗದ ಕಿರುಸಮುದಾಯಗಳು, ತಳ – ಕೆಳವರ್ಗದವರು ಸಾಂಸ್ಕೃತಿಕ ಅನನ್ಯತೆಯನ್ನು ಪಡೆಯದೆ ಹೋಗುತ್ತಾರೆ. ಅವರಿಗೊಂದು ಇತಿಹಾಸ ಮತ್ತೂ ದಕ್ಕದೆ ಹೋಗುತ್ತದೆ. ಇದರ ಅರ್ಥ ಭಾರತವನ್ನು ಇರುವ ಹಾಗೆಯೇ ಉಳಿಸಿಕೊಳ್ಳುವುದಲ್ಲ. ಜಾನಪದ ಜೀವನ ಚಿಂತನೆ ಹೇಳುವ; 'ಎಲ್ಲರಿಗೂ ಬದುಕು ಮತ್ತು ಎಲ್ಲರಿಗೂ ಅವಕಾಶ' ಎಂಬುದನ್ನು ಸಮಕಾಲೀನವಾಗಿ ಸಾಧ್ಯಮಾಡಿಕೊಡುವುದು. ಅರ್ಥಾತ್, ಜ್ಞಾನ ಮತ್ತು ಅವಕಾಶ ಎಲ್ಲರ ಸೊತ್ತು ಮತ್ತು ಬಳಕೆಯಾಗುವಂತೆ ನೋಡಿಕೊಳ್ಳುವುದು. ಜಾನಪದ ಅಧ್ಯಯನ ಅಂಥ ಹೊಸದಾರಿಯಲ್ಲಿ ನಡೆಯುತ್ತಿರುವುದನ್ನು ನಾವು ಮನ್ನಿಸಬೇಕು. ಜನಪದ ಸಾಹಿತ್ಯವನ್ನು ಕಿರಿದಾಗಿ

ನಿರ್ವಚಿಸಿ ಅದರ ಸ್ಥಾನಮಾನವನ್ನು ಶಿಷ್ಟ ಸಾಹಿತ್ಯದ ಕೆಳಗೆ ಇಟ್ಟು ನೋಡುವ ಮನೋಧರ್ಮ ಹುಟ್ಟಿರುವುದೇ ವರ್ಗಶಾಹಿ ಮತ್ತು ವಸಾಹತುಶಾಹಿ ಜ್ಞಾನ ಮಾದರಿಗಳು ನಮ್ಮ ಮೇಲೆ ಸವಾರಿ ನಡೆಸುತ್ತಿರುವುದರಿಂದಾಗಿದೆ. ಆ ಕಾರಣದ ಮೇಲೆ ಜನಪದ ಸಂಸ್ಕೃತಿ ಮತ್ತು ಜನಪದ ಸಾಹಿತ್ಯದ ಮೌಲ್ಯಮಾಪನ ಸಮಸಂಸ್ಕೃತಿ ಸ್ಥಾನಮಾನದ ಮೇಲೆ ನಡೆಯಬೇಕಿದೆ.

ಕನ್ನಡ ಜನಪದ ಸಾಹಿತ್ಯ ಸಂಗ್ರಹ ಎರಡು ನೆಲೆಯಲ್ಲಿ ನಡೆಯಿತು. ರಾಷ್ಟ್ರೀಯ ಪುನರುತ್ಥಾನದ ಕಾರಣದಿಂದ ಮತ್ತು ರಾಷ್ಟ್ರದ ಮೂಲ ಸಂಪತ್ತಾದ ಎಲ್ಲವನ್ನೂ ಪುನಶ್ಚೇತನಗೊಳಿಸುವ ಸಂದರ್ಭದಲ್ಲಿ, ರಾಷ್ಟ್ರೀಯ ಸಂಪತ್ತುಗಳಲ್ಲಿ ಒಂದಾದ ಜನಪದ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಸಂಗ್ರಹಿಸುವ ಪ್ರಯತ್ನ ಮೊದಲನೆಯದು. ಈ ಪ್ರವೃತ್ತಿ ಸಂಪೂರ್ಣವಾಗಿಯೂ ಭಾವನಾತ್ಮಕವಾದುದು. ರಾಷ್ಟ್ರೀಯ ಪುನರುತ್ಥಾನದಲ್ಲಿ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಭಾಗವಹಿಸಿದ ನವೋದಯ ಸಾಹಿತಿಗಳು ಜನಪದ ಸಾಹಿತ್ಯವನ್ನು ಈ ಹಿನ್ನೆಲೆಯಲ್ಲಿ ಸಂಗ್ರಹಿಸಿದರು. ಆದಕಾರಣ 'ಸಾಹಿತ್ಯವೆಂಬ ಸಾಮಗ್ರಿಗೆ' ಅವರು ಒತ್ತುಕೊಟ್ಟರು. ಅದರ ಉತ್ಪಾದಕರು, ಅವರ ಅಸ್ತಿತ್ವ, ನೆಲೆ-ಬೆಲೆ ಮತ್ತು ಜನಪದ ಸಾಹಿತ್ಯದ ಸಾಮಾಜಿಕ ಸಾಂಸ್ಕೃತಿಕ ಸಂದರ್ಭದ ಕಡೆಗೆ ಗಮನ ಹರಿಸಲಿಲ್ಲ. ರಾಷ್ಟ್ರದ ಆರಾಧನೆಯಂತೆ ಜನಪದ ಸಾಹಿತ್ಯವೂ ಒಂದು ರೀತಿಯ ಆರಾಧನೆಯ ಸಾಮಗ್ರಿಯೆ ಆಯಿತು. ಆ ಸಾಹಿತ್ಯವನ್ನು ಸಂಗ್ರಹಿಸುವ, ಪ್ರೇಮಿಸುವ ಮತ್ತು ಕೊಂಡಾಡುವ ಪ್ರವೃತ್ತಿ ತುಂಬು ಹೊಳೆಯಂತೆ ಹರಿಯಿತು. ಜನಪದ ಸಾಹಿತ್ಯವೂ ದೇಶವನ್ನು ಕಟ್ಟುವ ಒಂದು ಉಪಕರಣವಾಗಿ ಬಳಕೆಯಾಯಿತು. ಅಷ್ಟೇ ಪ್ರಮಾಣದಲ್ಲಿ ಸಾಹಿತ್ಯವೂ ಸಂಗ್ರಹವಾಯಿತು. ಜನಪದ ಸಾಹಿತ್ಯ ಸಂಗ್ರಹ ಜಂಗಮರು ತಾವಿರುವ ಕಡೆಯಲ್ಲಿ ಮಾತ್ರವಲ್ಲದೆ, ಜನಪದ ಸಾಹಿತ್ಯ ಸಂಗ್ರಹಯಾತ್ರೆಯನ್ನು ಕೈಕೊಂಡರು. ಈ ಸಂಗ್ರಹಯಾತ್ರೆ, ಅದನ್ನು ಕುರಿತ ಪ್ರಚಾರವೂ ಪ್ರಶಂಸೆಯೂ ಆಗಿತ್ತು. ಅದು ಅಗತ್ಯ ಭೂಮಿಕೆಯೂ ಆಯಿತು.

ಯಾವಾಗ ಜಾನಪದ ಎಂಬುದು ಅಧ್ಯಯನದ ವಿಷಯವೂ ಆಯಿತೊ ಆಗ ಅದಕ್ಕೊಂದು ಶಾಸ್ತ್ರೀಯ ಶಿಸ್ತು ಸೇರಿಕೊಂಡಿತು. ಅಲ್ಲಿಂದ ಜನಪದ ಸಾಹಿತ್ಯ ಸಂಗ್ರಹದ ಭರಾಟೆ ಕಡಿಮೆಯಾಯಿತು. ಯಾವಾಗ ಇದು ವೈಜ್ಞಾನಿಕವೆಂಬ ಹೆಸರಿನ ಪ್ರಜ್ಞಾಪೂರ್ವಕ ಚಟುವಟಿಕೆ ಆಯಿತೊ ಅಲ್ಲಿಂದ ಪ್ರೇಮದ ವಿವಾಹ ಕೌಟುಂಬಿಕ ಜವಾಬ್ದಾರಿ ಆದಂತಾಯಿತು. ಒಂದು ರೀತಿಯಲ್ಲಿ ಇದು ಜನಪದ ಸಾಹಿತ್ಯ ಸಂಗ್ರಹಕ್ಕೆ ತಗುಲಿದ ಪೆಟ್ಟು ಎನಿಸಿದರೂ ಮತ್ತೊಂದು ಬಗೆಯಲ್ಲಿ ಆ ಸಾಹಿತ್ಯದ ಅಂತರಂಗ ಪ್ರಕಾಶಿಸಲು ಅನುಕೂಲವಾಯಿತು.

ಅಭಿಮಾನದ ದೃಷ್ಟಿಯಿಂದ ಸಂಗ್ರಹಿಸಲಿ ಅಥವಾ ಅಧ್ಯಯನ ದೃಷ್ಟಿಯಿಂದ ಸಂಗ್ರಹಿಸಲಿ ಈ ಸಂಗ್ರಹ ಕಾರ್ಯ ಮಾತ್ರ ಸುಲಭದ್ದಲ್ಲ. ಮೂಲತ: ಅದು ಸಂಗ್ರಾಹಕನ ಅನುಭವ, ಬದ್ಧತೆ, ಶ್ರಮ ಮತ್ತು ಆರ್ಥಿಕ ಅನುಕೂಲತೆಯನ್ನು ಅಪೇಕ್ಷಿಸುತ್ತದೆ. ಆರಂಭಿಕ ಕಾಲದಲ್ಲಿ ಸಂಗ್ರಾಹಕರಲ್ಲಿ ಅರ್ಥಿಕ ಬಡತನವಿದ್ದರೂ, ಅವರ ಸಾಂಸ್ಕೃತಿಕ ಸ್ವಾಭಿಮಾನವೆಂಬುದು ಕಷ್ಟನಷ್ಟಗಳ ಪರಿವೆಯನ್ನು ಮರೆತು ಜನಪದ ಸಾಹಿತ್ಯವನ್ನು ಹಾಡಿ, ಸಂಗ್ರಹಿಸಿ ಜನತೆಯ ಮುಂದೆ ಮಂಡಿಸಿತು. ಇದೊಂದು ಅಧ್ಯಯನದ ವಿಷಯವಾದ ತಕ್ಷಣದಿಂದ ಅದಕ್ಕೊಂದು ಉದ್ಯಮದ ಸ್ವರೂಪ ಉಂಟಾಯಿತು. ಲಾಭ-ನಷ್ಟಗಳ ಪರಿವೆ ಸಂಗ್ರಾಹಕನನ್ನು ಕಾಡಹತ್ತಿತು. ಈ ಹೊತ್ತಿಗೆ ಜನಪದ ಸಾಹಿತ್ಯವನ್ನು ಜನಪ್ರಿಯ ಸಾಹಿತ್ಯದಂತೆ ಪ್ರಕಟಿಸಿ ಬೀದಿಬದಿಯಲ್ಲಿ ಮಾರಿ ಕಾಸು ಮಾಡುವ ಪರಿಸ್ಥಿತಿ ನಿಂತುಹೋಯಿತು. ವ್ಯಾಪಾರಿಗಳು ಈ ಸಾಹಿತ್ಯವನ್ನು ಪ್ರಕಟಿಸುವುದನ್ನು ನಿಲ್ಲಿಸಿದರು, ಪ್ರಕಾಶಕರೆಂಬುವವರು ಹುಟ್ಟಿಕೊಂಡರು. ಅಕೆಡೆಮಿಷಿಯನ್ ಮತ್ತು ಪ್ರಕಾಶಕರೆಂಬ ಉದ್ಯಮ ಆಧಾರಿತ ದಣಿಗಳಿಂದಾಗಿ ಹೊಸ ಸಂಗ್ರಹಕಾರರು ಮುಂದೆ ಬರುವುದಾಗಲಿಲ್ಲ. ಜನಪದಸಾಹಿತ್ಯ ಸಂಗ್ರಹಕಾರ್ಯ ಬಹಳ ಶಿಸ್ತಿನ ವಿಷಯವಾಯಿತು. ಸಂಗ್ರಹಕಾರ್ಯಕ್ಕೂ ಹೆಚ್ಚು ಓದು ಮತ್ತು ವಿದ್ವತ್ತು ಬೇಕೆನಿಸಿತು. ಸಹಜವಾಗಿ ಹವ್ಯಾಸಿ, ಭಾಷಾಪ್ರೇಮಿ ಮತ್ತು ಅಲೆಮಾರಿ ಸಂಗ್ರಹಕಾರರು ಹಿಂದೆ ಸರಿದರು. ಜನಪದ ಸಾಹಿತ್ಯವನ್ನು, ಸಂಗ್ರಹಿಸುವುದಕ್ಕಿಂತ ಅದರ ಸತ್ವ ಮತ್ತು ಸಾರ್ಥಕತೆಯ ಪ್ರಶ್ನೆ ಮುಂದೆ ಬಂದು ವಿದ್ವಾಂಸರು ಮಾತ್ರವೇ ಈ ಕೆಲಸವನ್ನು ಮಾಡಬೇಕು ಎಂಬ ಮನೋಧರ್ಮ ಉಂಟಾಯಿತು. ಜನಪದ ಸಾಹಿತ್ಯ ಸಂಗ್ರಹ ಹಿಂದೆ ಸರಿದುದಕ್ಕೆ ಅದು ಒಂದು ಅಧ್ಯಯನ ಶಿಸ್ತಿಗೆ ಒಳಪಟ್ಟುದಷ್ಟೆ ಕಾರಣವಲ್ಲ. ಆಧುನಿಕವೆಂಬ ವಸ್ತುಪ್ರಧಾನ ಚಿಂತನೆ ಮತ್ತು ಬಳಕೆಯ ಜೀವನ ವಿಧಾನ ಪಾರಂಪರಿಕ ಮತ್ತು ಸ್ಥಳೀಯವೆಂಬ ಎಲ್ಲ ಸಾಂಸ್ಕೃತಿಕ ಉತ್ಪನ್ನಗಳನ್ನು ಜನಬಳಕೆಯಿಂದ ದೂರಮಾಡಲು ತೊಡಗಿದ್ದು ಮುಖ್ಯಕಾರಣವಾಗಿದೆ. ಸೀಮಿತ ವರ್ಗದ ವಿಶಿಷ್ಟ ಚಟುವಟಿಕೆಯಾಗಿದ್ದ ಬರಹದ ಸಾಹಿತ್ಯ ಆಧುನಿಕತೆಯ ಜೊತೆಗೆ ಸ್ಪರ್ಧಿಸಿ ಮತ್ತು ಹೊಂದಿಕೊಂಡು ಮರುಹುಟ್ಟು ಪಡೆದ ಕಾರಣದಿಂದ ಅದು ವರ್ಗಾತೀತವಾದ ಸಾಹಿತ್ಯಕ ಚಟುವಟಿಕೆಯಾಯಿತು. ಎಲ್ಲಾ ಜಾತಿ, ಪಂಗಡದ ವ್ಯಕ್ತಿಗಳೂ ಈ ಸಾಹಿತ್ಯದೊಂದಿಗೆ ಸ್ಪಂದಿಸುವುದು ಸಾಧ್ಯವಾಯಿತು.

ಇದರಿಂದ ಸಾಹಿತ್ಯವೆಂದರೆ ಬರಹಗಾರರು ಬರೆದದ್ದು ಎಂಬ ಪ್ರತೀತಿ ದೃಢವಾಯಿತು. ಹೆಚ್ಚು ವ್ಯಕ್ತಿಗಳು ತಮ್ಮ ವ್ಯಕ್ತಿನಿಷ್ಠೆ ಮತ್ತು ವ್ಯಕ್ತಿವೃತ್ತಿ ಸಾಮರ್ಥ್ಯದೊಡನೆ ಈ ಸಾಹಿತ್ಯ ಚಟುವಟಿಕೆಯಲ್ಲಿ ತೊಡಗಿಸಿಕೊಂಡರು. ಜೊತೆ ಜೊತೆಯಲ್ಲೆ ಓದು ಮಾತ್ರ ಅರ್ಹತೆ, 'ಓದಿಲ್ಲದ್ದು' ಅನರ್ಹತೆ ಎಂಬ ಜೀವನ ತತ್ವ ಬಳಕೆಗೆ ಬಂತು. ಸಹಜವಾಗಿಯೆ ಅವಿದ್ಯಾವಂತರ ಜನಪದ ಸಾಹಿತ್ಯ ಸತ್ವದಲ್ಲಿ ಸಂಪುಷ್ಟವಾಗಿದ್ದರೂ ಗುರುತುಪಡೆಯುವಲ್ಲಿ ಹಿಂದೆ ಬಿದ್ದಕಾರಣ ವಿಸ್ಮೃತಿಗೆ ತುತ್ತಾಯಿತು. ಶಿಷ್ಟ ಸಾಹಿತ್ಯದ ನಿರಂತರ ಪ್ರಯೋಗಶೀಲತೆ ಜನಪದಸಾಹಿತ್ಯದ ನಿಧಾನ ಹಾಗೂ ನಿಶ್ಚಿತಚಲನೆಯನ್ನು ಹಿಂದೆ ಹಾಕಿತು. ಇದು ನಿಶ್ಚಿತ ಅಭಿರುಚಿಗೆ ನಿರಂತರ ಅಭಿರುಚಿ ಒಡ್ಡಿದ ಸವಾಲುಕೂಡ ಹೌದು. ಜನಪದ ಸಾಹಿತ್ಯ ಶಿಷ್ಟಸಾಹಿತ್ಯದಂತೆ 'ಅಧಿಕೃತ ಸಾಹಿತ್ಯ'ವಾಗಲಿಲ್ಲ ಎಂಬ ಸತ್ಯಸ್ಯಸತ್ಯವೂ ಜನಪದ ಸಾಹಿತ್ಯ ಇನ್ನಿತರ ಆಧುನಿಕ ಸಾಹಿತ್ಯ ಪದ್ಧತಿಗಳೊಡನೆ ಸ್ಪರ್ಧಿಸದೆ ಹಿಂದೆ ಬೀಳಲು ಕಾರಣವಾಗಿದೆ. ಉದ್ಯಮ, ಉದ್ಯೋಗ, ವೃತ್ತಿಯಲ್ಲದ ಈ ಸಾಹಿತ್ಯ ಆಧುನಿಕ ತತ್ತ್ವವಾದ 'ಸ್ಪರ್ಧೆ ಮತ್ತು ಗೆಲ್ಲು' ಸಮರದಲ್ಲಿ ಸೋಲೊಪ್ಪಿಕೊಳ್ಳುವುದು ಅನಿವಾರ್ಯವಾಯಿತು.

ಆದರೆ ಜನಪದ ಸಾಹಿತ್ಯದ ಸತ್ವ ಮತ್ತು ಸಾತತ್ಯ ಎಲ್ಲಿದೆ ಎಂಬುದನ್ನು ಗುರುತಿಸಿಕೊಳ್ಳಲಾಗದ ಹೆಳವತನ ನಮ್ಮನ್ನು ಕಾಡಬೇಕಿತ್ತೆ? ನವೋದಯ ಸಾಹಿತಿಗಳಾದ ಬಿ. ಎಂ. ಶ್ರೀ, ದ. ರಾ. ಬೇಂದ್ರೆ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಬೆಟಗೇರಿ ಕೃಷ್ಣಶರ್ಮ, ಮಧುರಚೆನ್ನ- ಈ ಮೊದಲಾದ ಹಿರಿಯರು ಜನಪದ ಸಾಹಿತ್ಯದಿಂದ ಒಂದು ಸತ್ವವನ್ನು ಕಂಡುಕೊಂಡು ಅದನ್ನು ಹೆಕ್ಕಿ ತೆಗೆದು, ತಮ್ಮ ಸಾಹಿತ್ಯವನ್ನು ಮೈದುಂಬಿಸಿಕೊಂಡರು. ಅವರಿಂದ ಮುಂದೆ ನಮ್ಮ ಸಾಹಿತ್ಯ ಚಿಂತಕರಾಗಲೀ, ಸಂಸ್ಕೃತಿ ಚಿಂತಕರಾಗಲಿ ಜನಪದ ಸಾಹಿತ್ಯದ ಹೊಸ ಸಾಧ್ಯತೆಗಳನ್ನು ಹುಡುಕಲೇ ಇಲ್ಲ ಎಂಬುದು ದುರ್ದೈವದ ಸಂಗತಿ. ಅಲ್ಲಲ್ಲಿ ಕೆಲವು ಸಾಹಿತಿಗಳು ಜನಪದ ಸಾಹಿತ್ಯದ ಸೆಲೆಗಳನ್ನು ಹಿಡಿದು ಬರೆಯುತ್ತಿದ್ದಾರೆ ನಿಜ. ಆದರೆ ಅದು ಅವರ ಬರಹದ ಪ್ರವೃತ್ತಿಗಳಲ್ಲಿ ಒಂದಾಗಿದೆಯೆ ಹೊರತು ಅವರ ಸೃಜನಶೀಲತೆಯ ಪ್ರಕೃತಿಯಾಗಿಲ್ಲ. ಈ ಕಾರಣದಿಂದ ಆಧುನಿಕ ಸಂದರ್ಭದಲ್ಲಿ ಜನಪದ ಜೀವನ ಮತ್ತು ಸಂಸ್ಕೃತಿ ಹೊರಗಿನ ಸರಕು, ಕನಸು, ಅಪೇಕ್ಷೆ, ತುಡಿತ, ಆಕರ್ಷಣೆ ಆಗಿದೆಯೆ ಹೊರತು ಜೀವನ ಬಂಧ, ಸಂಬಂಧ ಅಥವಾ ಬದುಕೇ ಆಗಬೇಕಿತ್ತಲ್ಲ, ಅದು ಆಗಲಿಲ್ಲ; ಹಾಗೆ ಆಗುವ ಸಾಧ್ಯತೆಯೂ ಹತ್ತಿರದಲ್ಲಿ ಇಲ್ಲ.

ಯಾವಾಗ ಆಧುನಿಕ ವ್ಯಕ್ತಿಗಳು ವ್ಯಕ್ತಿತ್ವ ಪ್ರತ್ಯೇಕತೆಯನ್ನು ಅನುಭವಿಸುವ ಅಪೇಕ್ಷೆಯನ್ನು ಅನಿವಾರ್ಯ ಅಂತ ಮಾಡಿಕೊಂಡರೊ ಅಂದಿನಿಂದ ಜನಪದ ಸಾಹಿತ್ಯ ಮತ್ತು ಜನಪದ ಸಂಸ್ಕೃತಿಯನ್ನು ಅನುಭವಿಸುವ ಮತ್ತು ಅನುಸರಿಸುವ ಅವಕಾಶಗಳನ್ನು ಕಳಕೊಂಡರು. ಪ್ರಭುಕೇಂದ್ರಿತ ಮತ್ತು ಧರ್ಮಕೇಂದ್ರಿತ ರಾಜಸತ್ತೆ ಇದ್ದಾಗ ಜನಪದಜೀವನ ಸತ್ವವನ್ನು ಆಗಾಗ ಪಡೆಯುತ್ತ ತಮ್ಮನ್ನು ಹಿಗ್ಗಲಿಸಿಕೊಳ್ಳುತ್ತಿದ್ದವು. ಪ್ರಭುವ್ಯವಸ್ಥೆಯ ಅಧೀನದಲ್ಲಿದ್ದೂ ಮಹಾಕವಿ ಪಂಪ ತನ್ನ ಮೂಲ ನೆಲೆಯಾದ ಬನವಾಸಿ ದೇಶವನ್ನು ನೆನೆದು ತನ್ನನ್ನು ಹಿಗ್ಗಲಿಸಿಕೊಂಡನು. ಪ್ರಭು ಕೇಂದ್ರಿತ ಹಿರಿಯ ಪ್ರಜೆಗಳು ತಮ್ಮ ಬಾಲ್ಯಜೀವನದಲ್ಲಿ ಜನಪದ ಬದುಕನ್ನು ಅನುಭವಿಸಿದರೆ ಮತ್ತೆ ಅದಕ್ಕೆ ಹಿಂದಿರುಗುತ್ತಿದ್ದುದು ವಾನಪ್ರಸ್ಥ ಸಮಯದಲ್ಲಿಯೆ. ಆದರೆ ನಾವು ಪ್ರಜಾಪ್ರಭುತ್ವವೆಂಬ ಜನಪದ ಜೀವನ ತತ್ತ್ವದೊಳಗೆ ಇದ್ದರೂ ಬದುಕುತ್ತಿರುವುದು ಮಾತ್ರ 'ಆಧುನಿಕ ವಾನಪ್ರಸ್ಥ' ದಲ್ಲಿ. ಸತ್ತಲ್ಲದೆ ಬದುಕಲಾರೆವು ಎಂಬ ಈ ಸ್ಥಿತಿಗೆ ನಮ್ಮನ್ನು ನಾವು ಶಪಿಸಿಕೊಂಡಿರುವುದೆ ಕಾರಣವಾಗಿದೆ. ಅಂತಹ ಒಂದು ದುರವಸ್ಥೆಯಿಂದ ಬಿಡುಗಡೆಗೊಳ್ಳುವ ಕಾರಣಕ್ಕಾಗಿಯೇ ನಾವಿಂದು ಜನಪದ ಸಾಹಿತ್ಯವನ್ನು ಓದಬೇಕಾಗಿದೆ ಮತ್ತು ಜನಪದ ಸಂಸ್ಕೃತಿಯನ್ನು ಕಲಿಯಬೇಕಾಗಿದೆ. ಇದರಿಂದ ಆಧುನಿಕತೆಯನ್ನು ಕಳೆದುಕೊಳ್ಳುತ್ತೇವೆ ಎಂದು ನಾವ್ಯಾರು ಭಯಪಡಬೇಕಾಗಿಲ್ಲ. ಆಧುನಿಕತೆಯನ್ನು ಜನಪದ ಬದುಕಾಗಿ ಹಂಚಿಕೊಳ್ಳುವ ಸಾಧ್ಯತೆಗಳನ್ನಷ್ಟೆ ನಾವು ನಮ್ಮಲ್ಲಿ ಕಂಡುಕೊಳ್ಳಬೇಕಾಗಿದೆ.

**ಕರ್ನಾಟಕ ಸರ್ಕಾರ; ಚಿಗುರಿದ ಸಂಸ್ಕೃತಿಯ ಸಾರ**

**ಸರ್ಕಾರ ನಿಂತಕಡೆ ಜನಪದಗಳು ಚಲಿಸಬೇಕು**

ಜನಪದಗಳು ತಾಟಸ್ಥ್ಯಕ್ಕೆ ಬರುತ್ತಿವೆ ಎಂದ ಕಡೆ ಸರ್ಕಾರ ಚಲಿಸಬೇಕು. ಜಗತ್ತಿನ ಎಲ್ಲ ಕಡೆಯೂ ಇಂತಹ ಚಲನೆಗಳು ಸಂಭವಿಸಿವೆ. ಕರ್ನಾಟಕದ ತಳ-ಕೆಳವರ್ಗಗಳು ಎಲ್ಲ ಅನುಕೂಲಗಳಿಂದ ವಂಚಿತವಾಗಿ ಸ್ತಬ್ಧತೆಯ ಕಡೆಗೆ ಹೊರಟಿವೆ ಎಂಬುದನ್ನು ಕಂಡ ಶ್ರೀ ಡಿ. ದೇವರಾಜ ಅರಸು ಅವರ ಸರ್ಕಾರ ಬೇರೆ ಬೇರೆ ರೀತಿಯಲ್ಲಿ ಅವುಗಳನ್ನು ಪ್ರೋತ್ಸಾಹಿಸಿ, ಪೋಷಿಸಿ ಮುಖ್ಯಧಾರೆಗೆ

ಅಭಿಮುಖೀಕರಿಸಿದರು. ಭಾಷೆಯ ದೃಷ್ಟಿಯಿಂದ ಕರ್ನಾಟಕ ಸರ್ಕಾರ ಅನ್ಯತೆಗೆ ಸೋಲುತ್ತದೆ ಎಂದು ತಿಳಿದಾಗ ಕರ್ನಾಟಕ ಜನತೆ ಗೋಕಾಕ್ ಚಳವಳಿಯನ್ನು ಆರಂಭಿಸಿ ಕನ್ನಡ ಭಾಷೆ ಮತ್ತು ಕನ್ನಡ ಸಂಸ್ಕೃತಿಯನ್ನು ಸಮನೆಲೆಗೆ ತಂದರು. ಜನಪದಸಾಹಿತ್ಯ ಮತ್ತು ಸಂಸ್ಕೃತಿಯ ಪುನರುತ್ಥಾನದ ಸಂದರ್ಭಕ್ಕೆ ಇಂಥದೊಂದು ಚಲನೆ ಜನರ ಮಧ್ಯೆ ಉಂಟಾಗಬೇಕಿದೆ. ಆದರೆ ಅಂತಹ ಸೂಚನೆಗಳು ಕಾಣುತ್ತಿಲ್ಲ. ಇಂತಹ ಸ್ಥಿತಿಯನ್ನು ಅಲುಗಾಡಿಸಲು ಜನತೆಯ ಸಂಸ್ಕೃತಿಯ ಪ್ರತಿನಿಧಿಯಾಗಿರುವ ಸರ್ಕಾರ ಹೊಸಹೆಜ್ಜೆಯನ್ನು ಹಸನಾದ ಗೆಜ್ಜೆ ಸದ್ದಿನೊಂದಿಗೆ ಇಡಬೇಕಾಗಿದೆ. 'ಕನ್ನಡ ಸಮಗ್ರ ಜನಪದ ಮತ್ತು ಯಕ್ಷಗಾನ ಸಾಹಿತ್ಯ ಸಂಪುಟ' ಗಳನ್ನು ಹೊರತರಲು ಹೊರಟಿರುವ ಕರ್ನಾಟಕ ಸರ್ಕಾರ ಮತ್ತು ಅದರ ಸಂಸ್ಕೃತಿ ಚಾಲಕ ಸಂಸ್ಥೆಯಾದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅಂತಹ ಒಂದು ಮಹತ್ವದ ಕೆಲಸಕ್ಕೆ ಕೈಹಾಕಿದೆ.

ಭಾರತದ ಅನೇಕ ಸಂಸ್ಥಾನಗಳಲ್ಲಿ ಜನಪದ ಸಾಹಿತ್ಯ ಸಂಗ್ರಹ ಹಾಗೂ ಜಾನಪದ ಅಧ್ಯಯನ ನಡೆದಿದೆ. ಆದರೆ ಕರ್ನಾಟಕದ ಈ ದಿಸೆಯ ಕೆಲಸ ಆ ಎಲ್ಲವನ್ನೂ ಮೀರಿಸಿ ಮುಂದೆ ನಿಂತಿದೆ. ಈ ಸಾಧನೆಯ ಮೊದಲ ಗೌರವಕ್ಕೆ ಪಾತ್ರರಾದವರೆಂದರೆ ಕನ್ನಡ ನಿಜ ನೆಲದಿಂದ ಬಂದ ನಮ್ಮ ನಾಡಿನ ಸಾಹಿತಿಗಳು. ನೆಲ ಸಂಸ್ಕೃತಿಯ ನೆಲೆಯಲ್ಲಿ ನಿಂತು ನಾಡಿನ ಭವಿಷ್ಯದ ಬಗ್ಗೆ ತಲೆಬಿಸಿ ಮಾಡಿಕೊಂಡ ಸಂಸ್ಕೃತಿ ಚಿಂತಕರ ಪಾತ್ರ ಈ ಸಾಧನೆಯನ್ನು ಸತ್ವಯುತಗೊಳಿಸಿದೆ. ಪ್ರತ್ಯಕ್ಷವಾಗಿ ನಮ್ಮ ನಾಡಿನ ಎಲ್ಲ ವಿಶ್ವವಿದ್ಯಾನಿಲಯಗಳು ಜನಪದ ಸಾಹಿತ್ಯ ಮತ್ತು ಜಾನಪದ ಅಧ್ಯಯನವನ್ನು ತಮ್ಮ ಒಂದು ಬದ್ಧತೆಯನ್ನಾಗಿ ಸ್ವೀಕರಿಸಬೇಕು. ಕರ್ನಾಟಕ ಜಾನಪದ ಪರಿಷತ್ತಿನಂತಹ ಕೆಲವು ಖಾಸಗಿ ಸಂಸ್ಥೆಗಳು ಜಾನಪದ ಪುನರುದ್ಧಾರ ಕೆಲಸದಲ್ಲಿ ತೊಡಗಿವೆ. ಕರ್ನಾಟಕದ ರಾಜಕಾರಣ ಮತ್ತು ರಾಜ್ಯ ಪ್ರತಿನಿಧಿಗಳನ್ನು ದೂರವಿಟ್ಟು ಮಾತನಾಡುವಂತಿಲ್ಲ. ಗ್ರಾಮೀಣ ಪ್ರದೇಶದಿಂದ ಬಂದ ಎಲ್ಲ ಜನಪ್ರತಿನಿಧಿಗಳು ಜಾನಪದ ನಮ್ಮದೆಂದು ಪ್ರೀತಿಸಿ ಪ್ರೋತ್ಸಾಹ ಕೊಡುತ್ತಾ ಬರುತ್ತಿದ್ದಾರೆ. ಕರ್ನಾಟಕದಲ್ಲಿ ಜನಪದ ಕಲೆ ಮತ್ತು ಕಲಾವಿದರಿಗೆ ಸಿಗುತ್ತಿರುವ ಪ್ರೋತ್ಸಾಹ ಭಾರತದ ಬೇರಾವ ಸಂಸ್ಥಾನದಲ್ಲಿಯೂ ಸಿಗುತ್ತಿಲ್ಲವೆಂದು ನಿಸ್ಸಂಶಯವಾಗಿ ಹೇಳಬಹುದು. ಇಂತಹ ಜನಪದ ಸಾಹಿತ್ಯ, ಕಲೆ, ಸಂಸ್ಕೃತಿ ಬದ್ಧ ರಾಜ್ಯಶಕ್ತಿಯ ಪ್ರತ್ಯುತ್ಪನ್ನವಾದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಾನಪದಕ್ಕೆ ಕೊಟ್ಟಿರುವ ಪ್ರೇರಣೆ, ಪ್ರೋತ್ಸಾಹ ಅಪಾರವಾದುದು. ತಾನೇ ನೇರವಾಗಿ ಹಾಗೂ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಮೂಲಕ ಜನಪದ ಸಾಹಿತ್ಯ ಮತ್ತು ಸಂಸ್ಕೃತಿ ಚಿಂತನೆಯ ಪುಸ್ತಕಗಳಿಗೆ ಅರ್ಥಿಕ ನೆರವು ನೀಡುತ್ತಿದೆ. ಜನಪದ ಸಾಹಿತ್ಯದ ಪ್ರಾಮಾಣ್ಯ ಸಂಗ್ರಹಗಳನ್ನು ಪುನರ್ ಮುದ್ರಿಸಿದೆ. ಜನಪದ ಕಲಾವಿದರಿಗೆ ಮಾಸಾಶನ, ಕಲಾವಿದ ಪ್ರಶಸ್ತಿ ಮತ್ತು ಅತ್ಯುನ್ನತ 'ಜಾನಪದ ಶ್ರೀ' ಪ್ರಶಸ್ತಿಯನ್ನು ನೀಡಿ ಗೌರವಿಸುತ್ತಿದೆ. ಕಲಾವಿದರ ಪುನಶ್ಚೇತನ, ಗುರು-ಶಿಷ್ಯ ಪರಂಪರೆಯ ಮೂಲಕ ಜನಪದ ಕಲೆಗಳ ಪುನರುಜ್ಜೀವನ, ಜನಪದ ಕಲಾವಿದರಿಗೆ ವಾದ್ಯೋಪಕರಣಗಳ ಸಹಾಯ, ಶ್ರೇಷ್ಠ ಕಲಾವಿದರಿಗೆ ರಾಜ್ಯೋತ್ಸವದ ಪ್ರಶಸ್ತಿ ನೀಡಿ ರಾಜ್ಯದ ಇನ್ನಾವುದೇ ಕಲೆ, ಸಂಸ್ಕೃತಿಯ ಸಮಸಮಕ್ಕೆ ತಂದು ಅವರ ಸ್ವಾಭಿಮಾನವನ್ನು, ಸ್ವಾಯತ್ತತೆಯನ್ನು ಮಾನ್ಯ ಮಾಡಿದೆ.

ಇದೀಗ ಇದೇ ಕರ್ನಾಟಕ ಸರ್ಕಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಸಮಗ್ರ ಕನ್ನಡ ಜನಪದ ಸಾಹಿತ್ಯ ಪ್ರಕಟಣೆಗಾಗಿ ಸಮಿತಿಯೊಂದನ್ನು ರಚಿಸಿದೆ. ಇದರಿಂದ ಸುಮಾರು ಐದುನೂರು ಪುಟಗಳ ನೂರು ಜನಪದ ಸಾಹಿತ್ಯ ಸಂಪುಟಗಳು ಹೊರಬರುತ್ತಿವೆ. ಇದನ್ನು ಕನ್ನಡ ಜನಪದ ಸಾಹಿತ್ಯ ಪುನರುತ್ಥಾನದ ಪರ್ವ ಎಂದು ಕರೆಯಬಹುದು. ಈ ಬಗೆಯ ಕೆಲಸ ಭಾರತದ ಮತ್ತಾವುದೇ ರಾಜ್ಯದಲ್ಲಿ ಆರಂಭಗೊಂಡಿಲ್ಲ. ವಚನ ಸಾಹಿತ್ಯ ಹಾಗೂ ದಾಸಸಾಹಿತ್ಯವನ್ನು ಕುರಿತ ಸಂಪುಟಗಳನ್ನು ಪ್ರಕಟಿಸಿದ ನಂತರದ ಮೂರನೆಯ ಬೃಹತ್ ಕಾರ್ಯಯೋಜನೆ ಇದು. ಕನ್ನಡಿಗರನ್ನು ಇಷ್ಟೊಂದು ಸಂತಸಪಡಿಸಿದ ಸಂದರ್ಭ ಇನ್ನೊಂದಿಲ್ಲ. ಇದೊಂದು ನಿರಂತರವಾದ ನಾಡ ಚಳವಳಿ ಇದ್ದಂತೆ. ಈ ಕಾರಣಕ್ಕೆ ಕರ್ನಾಟಕ ಸಮಸ್ತ 'ಜನಶ್ರೀ' ಕರ್ನಾಟಕ ಸರ್ಕಾರ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಋಣಿಯಾಗಿದೆ. ಈ ಋಣ ಯಾಕೆಂದರೆ ಕೆರೆಯ ನೀರನು ಕೆರೆಗೆ ಬಿಡಿ ಎಂಬಂತೆ ಜನತೆಯ ಸಾಹಿತ್ಯವನ್ನು ಜನರ ಮಧ್ಯೆ ಜನಪ್ರಿಯಗೊಳಿಸುವ ಕೆಲಸ, ನಿಮ್ಮ ಸಂಪತ್ತು ನಿಮ್ಮ ಪ್ರೇಮ, ನಿಮ್ಮ ಅಭಿಮಾನ ಮತ್ತು ನಿಮ್ಮ ಅಂತರಂಗದ ಅಭಿವೃದ್ಧಿಯನ್ನಾಗಿ ಮಾಡಿಕೊಳ್ಳಿ ಎಂಬ ಸಂದೇಶವನ್ನು ಕೊಟ್ಟಂತಾಗಿದೆ. ಜನರಿಂದ ಜನರಿಗಾಗಿ ಜನರಿಗೋಸ್ಕರ ಇರುವ ರಾಜಕೀಯ ಶಕ್ತಿ ಮಾತ್ರ ಇಂಥ ಕೆಲಸವನ್ನು ಮಾಡಬಲ್ಲದು. ಇಂತಹ ಮಹತ್ವದ ಯೋಜನೆಯನ್ನು ಕೊಟ್ಟ ಕರ್ನಾಟಕ ಸರ್ಕಾರಕ್ಕೆ ಸಮಗ್ರ ಕನ್ನಡ ಜನಪದ ಸಾಹಿತ್ಯ ಸಮಿತಿ ಗೌರವ ವಂದನೆಗಳನ್ನು ಸಲ್ಲಿಸುತ್ತದೆ.

ಜನಪದ ಸಾಹಿತ್ಯ ಮುಗಿಯದ ಸಾಹಿತ್ಯ. ಜನರ ಜೀವನದ ಜೊತೆಗೇ ಅದು ಬೆಳೆಯುತ್ತಿರುತ್ತದೆ. ಈ ಕಾರ್ಯಯೋಜನೆ ಕೂಡ ಹಾಗೆಯೇ ಮುಂದುವರಿಯಬೇಕಾದ ಅವಶ್ಯಕತೆ ಇದೆ. ಕರ್ನಾಟಕದಲ್ಲಿ ಇರುವ ಜಾನಪದ ವಾತಾವರಣ ಇದನ್ನು ಆಗು ಮಾಡಿಕೊಡುತ್ತದೆ ಎನ್ನುವುದರಲ್ಲಿ ಅನುಮಾನವಿಲ್ಲ. ಆದರೆ ಸಂಪುಟ ಸಮಿತಿ ಇಂತಹ ಪ್ರತಿಯೊಂದು ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕಿದೆ. ಇದನ್ನು ಮನಸ್ಸಿನಲ್ಲಿಟ್ಟುಕೊಂಡೆ ಸಂಪುಟ ಸಮಿತಿ ತುಂಬು ಜವಾಬ್ದಾರಿಯಿಂದ ತನ್ನ ಕೆಲಸದಲ್ಲಿ ತೊಡಗಿದೆ. ಕರ್ನಾಟಕದಲ್ಲಿ ಈಗಾಗಲೆ ಹಲವು ವ್ಯಕ್ತಿಗಳು ಮತ್ತು ಕೆಲವು ಸಂಸ್ಥೆಗಳು ನಿರಂತರವಾಗಿ ಜನಪದ ಸಾಹಿತ್ಯ ಸಂಗ್ರಹಗಳನ್ನು ಪ್ರಕಟಿಸುತ್ತಾ ಬಂದಿವೆ. ಇವುಗಳಲ್ಲಿ ಕೆಲವು ಮಾತ್ರ ಶಾಸ್ತ್ರೀಯವಾಗಿದ್ದು ಹೆಚ್ಚಿನವು ಸಾಂದರ್ಭಿಕ ಒತ್ತಡ ಮತ್ತು ಅಗತ್ಯತೆಗೆ ಹೊಂದಿಕೊಂಡು ಪ್ರಕಟವಾಗಿವೆ. ಅನೇಕ ವೇಳೆ ಅದೆ ಅಂಶಗಳು ಪದೇಪದೇ ಬೇರೆಬೇರೆ ಸಂಗ್ರಹಗಳಲ್ಲಿ ಪುನರುಕ್ತಿಗೊಂಡಿವೆ. ಇದನ್ನು ಗಮನಕ್ಕೆ ತೆಗೆದುಕೊಂಡಿರುವ ಪ್ರಕಟಣ ಸಮಿತಿಯು ಇರುವುದನ್ನೆಲ್ಲ ಇದ್ದ ಹಾಗೇ ಪ್ರಕಟಿಸುತ್ತಿಲ್ಲ, ಒಂದು ಪ್ರಕಾರದ ಒಂದು ಪ್ರಧಾನ ಆಶಯದ ಮೇಲೆ ನೆಲೆ ನಿಂತಿರುವ ಒಂದು ಹಾಡು, ಕಥೆ, ಕಥನಗೀತೆ, ಗಾದೆ, ಒಗಟು, ಒಡಪು, ನುಡಿಗಟ್ಟು….. ಹೀಗೆ ಒಂದು ಪಾಠವನ್ನು ಮಾತ್ರ ಆಯ್ದುಕೊಳ್ಳಲಾಗಿದೆ. ಕರ್ನಾಟಕವನ್ನು ಸಾಂಸ್ಕೃತಿಕವಾಗಿ ಅಥವಾ ಭಾಷಿಕವಾಗಿ ವಿಶೇಷವಾಗಿ ಪ್ರತಿನಿಧಿಸುವ ಮತ್ತೊಂದು ಪಾಠವಿದ್ದಲ್ಲಿ ಅದನ್ನು ಪರಿಗಣನೆಗೆ ತೆಗೆದುಕೊಳ್ಳಲಾಗಿದೆ. ಯಾವುದೇ ಪಾಠವನ್ನು ಶಿಷ್ಟ ಸಂಪಾದನೆಯ ಕ್ರಮಕ್ಕೆ ಒಳಪಡಿಸಿರುವುದಿಲ್ಲ. ಆ ಕ್ರಮ ಬಹುಜನರಿಂದ, ಬಹುಪಾಠಗಳಲ್ಲಿ ಮತ್ತು ಬಹುಕಾಲಗಳಲ್ಲಿ ಸೃಷ್ಟಿಯಾಗುವ ಜನಪದ ಸಾಹಿತ್ಯಕ್ಕೆ ಸಲ್ಲತಕ್ಕುದಲ್ಲ. ಭಾಷಿಕ ದೋಷಗಳನ್ನು ಸರಿಪಡಿಸಲು ಮಾತ್ರ ಮುಂದಾಗಿದ್ದೇವೆ. ಆಗತ್ಯವಿದ್ದಷ್ಟು ಸಾಂಸ್ಕೃತಿಕ ಪದಕೋಶವನ್ನು ಒದಗಿಸಲು ಕ್ರಮ ತೆಗೆದುಕೊಳ್ಳಲಾಗಿದೆ. ಶಿಷ್ಟ ಮತ್ತು ಜನಪ್ರಿಯ ಸಾಹಿತ್ಯ ಪ್ರವೃತ್ತಿಗಳು ಜನಪದ ಸಾಹಿತ್ಯದ ಮೇಲೆ ಯಾವ ಕಾಲದಿಂದಲೂ ಪ್ರಭಾವಬೀರುತ್ತ ಬಂದಿವೆ. ಸಮೂಹ ಮಾಧ್ಯಮಗಳು ಈ ಹೊತ್ತು ಭಾರಿ ಪರಿಣಾಮವನ್ನು ಜನಜೀವನದ ಎಲ್ಲ ಕ್ಷೇತ್ರಗಳ ಮೇಲೆ ಬೀರುತ್ತಾ ಇವೆ. ಇಂತಹ ಸಂದರ್ಭಗಳಲ್ಲಿ ಶಿಷ್ಟ ಮತ್ತು ಜನಪದ ಸಾಹಿತ್ಯದ ನಡುವೆ 'ಮಧ್ಯಮ ಸಾಹಿತ್ಯ' ಸೃಷ್ಟಿಯಾಗಿದೆ. ಈ ಸಾಹಿತ್ಯ ಬಾಯಿ ಮಾತಿನಲ್ಲೂ ಇದೆ, ಬರಹದಲ್ಲೂ ಇದೆ. ಇದು ಜನಪದದ ಮಧ್ಯೆಯೇ ಪ್ರಚುರಪ್ರಚಾರದಲ್ಲಿದೆ. ಜನ ಈ ಸಾಹಿತ್ಯವನ್ನು ಜನಪದ ಸಾಹಿತ್ಯದ ಒಂದು ಭಾಗ ಎಂದು ಒಪ್ಪಿ ಸ್ವೀಕರಿಸಿ ಹಾಡುತ್ತಿದ್ದಾರೆ. ತತ್ವಪದಗಳು ಮತ್ತು ಭಜನೆಯ ಪದಗಳು ಈ ಪ್ರವೃತ್ತಿಗೆ ಮುಖ್ಯ ಸಾಕ್ಷಿಗಳಾಗಿವೆ. ಮೌಖಿಕ ಪರಂಪರೆಯೊಳಕ್ಕೆ ಬಂದು ಅನ್ಯೋನ್ಯವಾಗಿ ಸೇರಿಕೊಂಡ ಎಲ್ಲವೂ ಹಾಗೂ ಜಾನಪದೀಯವಾಗಿ ಪರಿಗಣಿತವಾದುದೆಲ್ಲವೂ ಜಾನಪದ ಎಂದು ನಮ್ಮ ವಿಶ್ವ ಪರಂಪರೆಯ ಜಾನಪದ ವಿದ್ವಾಂಸರು ಅನುಮೋದನೆ ನೀಡಿದ್ದಾರೆ. ಉತ್ತರ ಕರ್ನಾಟಕದಂಥ ಸಮೃದ್ಧ ಜಾನಪದ ಜೀವನವನ್ನು ಬದುಕುತ್ತಿರುವ ಜನ ತಮ್ಮ ಅಂತಃಸತ್ವದಲ್ಲಿ ಕೆಲವು ಶಿಷ್ಟ ಹಾಡುಗಳನ್ನು ಜಾನಪದೀಯಗೊಳಿಸಿಬಿಟ್ಟಿದ್ದಾರೆ. ದಾಸಸಾಹಿತ್ಯದ ಅನೇಕ ಹಾಡುಗಳು, ಶಿಶುನಾಳ ಷರೀಫರಂಥ ಜನಸಾಮಾನ್ಯರ ನಡುವಿನ ತತ್ವಚಿಂತಕರ ಹಾಡುಗಳು ಜನರ ಬಾಯಲ್ಲಿ ಜಾನಪದೀಯವಾಗಿವೆ. ವಚನ ಚಳವಳಿಯ ಮುಖ್ಯ ಧಾರೆಯ ಹಿಂದಿನಿಂದ ಬಂದ ಶರಣ ಕವಿಗಳ ಹಾಡುಗಳು ಭಜನೆಯ ಪದಗಳಾಗಿ ಹಾಡಲ್ಪಡುತ್ತಿವೆ. ಜನಪದ ಸಾಹಿತ್ಯದ ಒಂದು ಪ್ರಕಾರವನ್ನು ಮತ್ತೊಂದು ಉದ್ದೇಶಕ್ಕೆ ಬಳಸಿಕೊಳ್ಳುವ ಪರಿಪಾಠ ಎಲ್ಲ ಜನಪದಗಳಲ್ಲೂ ಇದೆ. ಪ್ರಕಾರದೊಳಗಿನ ಉಪಪ್ರಕಾರಗಳಲ್ಲಿ ಕಾರ್ಯಾಂತರವಾಗುವ ರೂಢಿಯೂ ಇದೆ, ಇದನ್ನು ಅಡ್ಡ ಪ್ರಕಾರ ಸ್ವಭಾವ ಎಂದು ಕರೆಯಬಹುದು. ವ್ಯಕ್ತಿ ಯೊಬ್ಬ ಮರಣ ಹೊಂದಿದಾಗ ಆ ದಿನ ರಾತ್ರಿ ಇಡೀ ದಾಸರ ಪದಗಳನ್ನು ಕರುಣಾಕೃತಿಯಾಗಿ ಬಳಸಲಾಗುತ್ತದೆ. ಜನಪದದಲ್ಲಿ ಈ ಸಂದರ್ಭಕ್ಕೆಂದು ಮರಣಗೀತೆಗಳಿದ್ದಾಗ್ಯೂ ಹಾಡುಗಾರರು ದಾಸರ ಪದಗಳನ್ನು ಬಳಸುತ್ತಿರುವುದು ಸಾಂದರ್ಭಿಕ ಔಚಿತ್ಯವೇ ಆಗಿದೆ. ಇತ್ತೀಚಿನ ದಿನಗಳಲ್ಲಿ ಪ್ರತಿ ಜಾನಪದ ಪ್ರಕಾರ ವಿಸ್ತೃತಗೊಂಡು ಆಧುನಿಕ ಅವಶ್ಯಕತೆಗಳಿಗಾಗಿ ಬಳಕೆಯಾಗುತ್ತಿದೆ. ಈ ಚಟುವಟಿಕೆಯನ್ನು ಪಾಶ್ಚಾತ್ಯ ಜಾನಪದ ವಿದ್ವಾಂಸರು 'ಸಾರ್ವಜನಿಕ ಜಾನಪದ' ಎಂದು ಕರೆದಿದ್ದಾರೆ. ಈಗ ಬರುತ್ತಿರುವ ಟಿ.ವಿ, ಧಾರಾವಾಹಿಗಳನ್ನು ಗಮನಿಸಿದರೆ ಮುಂದೊಂದು ದಿನ 'ಸಾರ್ವಜನಿಕ ಸಾಹಿತ್ಯ' ಎಂಬ ನಡುಮಧ್ಯದ ಸಾಹಿತ್ಯವೂ ಹುಟ್ಟಿಕೊಳ್ಳಬಹುದು. ಇಂತಹ ಸನ್ನಿವೇಶದಲ್ಲಿ ಜನಪದ ಸಾಹಿತ್ಯ ತಾಳುವ ಭಿನ್ನ ಉಪಪ್ರಕಾರಗಳ ಚಲನೆಯನ್ನು ಜಾನಪದ ವಿದ್ವಾಂಸರು ತೆರೆದ ಮನಸ್ಸಿನಿಂದ ನೋಡಬೇಕಾಗಿದೆ.

ಈ ಯೋಜನೆಯನ್ನು 'ಸಮಗ್ರ ಕನ್ನಡ ಜನಪದ ಸಾಹಿತ್ಯ ಸಂಪುಟ ಪ್ರಕಟಣ ಯೋಜನೆ' ಎಂದು ಕರೆಯಲಾಗಿದೆ. ಇದರೊಳಗೆ ಬಯಲಾಟ ಮತ್ತು ಯಕ್ಷಗಾನ ಪ್ರಸಂಗಗಳನ್ನು ವಿಶೇಷ ಗಮನಕ್ಕೆ ಅರ್ಹವೆಂದು ಪರಿಗಣಿಸಲಾಗಿದೆ. ಜನಪದ ಸಾಹಿತ್ಯ ಮತ್ತು ಶಿಷ್ಟ ಸಾಹಿತ್ಯದ ಮಧ್ಯೆ ಜನಪರವಾಗಿ ಬೆಳೆದುನಿಂತಿರುವ ಈ ಸಾಹಿತ್ಯ ಒಂದು ವಿಶೇಷ ಸಾಹಿತ್ಯ ಪ್ರಕಾರವಾಗಿದೆ. ಶಿಷ್ಟ ಸಾಹಿತ್ಯ

ಮೀಮಾಂಸೆ ಜನಪದ ಸಾಹಿತ್ಯವನ್ನು ಅವಗಣಿಸಿರುವಂತೆ ವಿವಿಧ ಬಯಲಾಟ ಪ್ರಕಾರಗಳ ಪ್ರಸಂಗ ಸಾಹಿತ್ಯವನ್ನು ತನ್ನಿಂದ ದೂರವಿರಿಸಿದೆ. ಶಿಷ್ಟ ಸಾಹಿತ್ಯವನ್ನು ಮೀರಿ ಬೆಳೆದ ಯಾವ ಸಾಹಿತ್ಯ ಪ್ರಕಾರವಿದ್ದರೂ ಅದನ್ನು ಗಮನಿಸುವುದು ಬೆಳೆಯುವ ಪ್ರತಿಭಾ ಚಟುವಟಿಕೆಯ ಪುರಸ್ಕಾರವಾಗುತ್ತದೆ. ಜನಪದ ಸಾಹಿತ್ಯ ಸಂಪುಟ ಸಮಿತಿ ತುಂಬ ಜವಾಬ್ದಾರಿಯಿಂದಲೆ ಈ ಬೆಳೆದ ಸಾಹಿತ್ಯ ಪ್ರಕಾರವನ್ನು ಗುರುತಿಸಿ ಗೌರವಿಸಿದೆ.

ಸಮಗ್ರ ಕನ್ನಡ ಜನಪದ ಸಾಹಿತ್ಯ ಪ್ರಕಟಣೆಯ ಈ ಯೋಜನೆಯಲ್ಲಿ ಮೊದಲಾಗಿ ಪ್ರಕಟಿತ ಸಾಹಿತ್ಯವನ್ನು ಆರಿಸಿ ವಿದ್ವಾಂಸರು ಹಾಗೂ ಕನ್ನಡ ಸಾಹಿತ್ಯಾಭಿರುಚಿಯುಳ್ಳ ಎಲ್ಲರಿಗೂ ಒಪ್ಪುವಂತೆ ಸಂಪುಟಗಳಲ್ಲಿ ಪ್ರಕಟಿಸಲಾಗುತ್ತದೆ. ಎರಡನೆಯ ಹಂತದಲ್ಲಿ ಕರ್ನಾಟಕ ನಾಡಿನಾದ್ಯಂತ ಜನಪದ ಸಾಹಿತ್ಯವನ್ನು ಸಂಗ್ರಹಿಸಿ, ಪ್ರಕಟಿಸಲು ಸಾಧ್ಯಾವಾಗದೆ ಇಟ್ಟುಕೊಂಡಿರುವ ವ್ಯಕ್ತಿ ಹಾಗೂ ಸಂಸ್ಥೆಗಳ ಜನಪದ ಸಾಹಿತ್ಯವನ್ನು ಪ್ರಕಟಿಸಲು ಯೋಜಿಸಲಾಗಿದೆ. ಇಲ್ಲಿ ಕೂಡ ಈಗಾಗಲೆ ಬೇರೆ ಬೇರೆ ಕೃತಿಗಳಲ್ಲಿ ಕಾಣಿಸಿಕೊಂಡಿರುವ ಸಾಹಿತ್ಯ ಭಾಗವನ್ನು ಬಿಟ್ಟು ಹೊಸದೆನಿಸಿದುದನ್ನು ಕೈಗೆತ್ತಿಕೊಳ್ಳಲಾಗುವುದು. ಮೂರನೆಯ ಹಂತದಲ್ಲಿ ನಾಡಿನಾದ್ಯಂತ ಕೆಡೆದು ಬಿದ್ದಿರುವ ಅಪೂರ್ವವೂ, ಅಮೂಲ್ಯವೂ ಆದ ಜನಪದ ಸಾಹಿತ್ಯವನ್ನು ಕ್ಷೇತ್ರ ಕಾರ್ಯ ಮಾಡಿಸಿ, ಸಂಗ್ರಹಿಸಿ ಪ್ರಕಟಿಸುವ ಬಹುದೊಡ್ಡ ಯೋಜನೆ ಇದೆ. ನಮ್ಮ ಸಾಹಿತ್ಯ – ಸಂಸ್ಕೃತಿ ಚಿಂತಕರು ‘ಕರ್ನಾಟಕದ ಮುರಿದ ಭಾಗವನ್ನು ಸರಿಪಡಿಸಿ ಕಟ್ಟಿರಿ, (ಅರ್ಚಕ ಬಿ. ರಂಗಸ್ವಾಮಿ: ಹುಟ್ಟಿದ ಹಳ್ಳಿ; ಹಳ್ಳಿಯ ಹಾಡು ೧೯೩೩) ಎಂಬ ಕಳಕಳಿಯ ಆದೇಶವನ್ನು ಕೊಟ್ಟಿದ್ದಾರೆ, ಅದನ್ನು ಪಾಲಿಸುವುದು ನಮ್ಮ ಕರ್ತವ್ಯ ಹಾಗೂ ಧರ್ಮವಾಗಿದೆ.

ಕರ್ನಾಟಕ ಸರ್ಕಾರವು ದಿನಾಂಕ ೧೦-೦೭-೨೦೦೪ರಂದು ಸಮಗ್ರ ಕನ್ನಡ ಜನಪದ ಸಾಹಿತ್ಯ ಸಂಪುಟ ಯೋಜನೆಯ ನಿರ್ವಹಣೆಗಾಗಿ ಸಮಿತಿಯೊಂದನ್ನು ರಚಿಸಿದೆ. ಇಲ್ಲಿ ನಾಡಿನ ಹಿರಿಯ ಹಾಗೂ ಶ್ರೇಷ್ಠ ಜಾನಪದ ತಜ್ಞರಿದ್ದಾರೆ. ಅವರ ಪ್ರತಿಭೆ ಮತ್ತು ಪರಿಶ್ರಮ ಇಲ್ಲಿ ಕೆಲಸ ಮಾಡಿದೆ. ಬಹಳ ಕಾಲದ ಕನಸೊಂದು ನನಸಾಗುತ್ತಿರುವ ಬಗ್ಗೆ ಅವರು ಸಂತಸಗೊಂಡಿದ್ದಾರೆ. ಇದೊಂದು ನಾಡಿಗೆ ಸಲ್ಲಿಸುವ ಸೇವೆಯ ಕೆಲಸವೆಂಬಂತೆ ದುಡಿಯುತ್ತಿದ್ದಾರೆ. ಅವರು ಕರ್ನಾಟಕ ಸರ್ಕಾರ ಹಾಗೂ ಕನ್ನಡಿಗರ ಗೌರವಕ್ಕೆ ಪಾತ್ರರಾಗಿದ್ದಾರೆ. ಕರ್ನಾಟಕದ ನಾನಾ ಕಡೆ ಬಹಳಕಾಲದಿಂದ ಜಾನಪದ ಕ್ಷೇತ್ರದಲ್ಲಿ ಕೆಲಸ ಮಾಡಿ ನುರಿತಿರುವ ನೂರೈವತ್ತಕ್ಕೂ ಹೆಚ್ಚು ಜಾನಪದ ವಿದ್ವಾಂಸರು ಸಂಪುಟಗಳ ಸಂಪಾದಕರಾಗಲು ಒಪ್ಪಿಕೊಂಡಿದ್ದಾರೆ. ನಾಡ ಮೇಲಿನ ಅವರ ಪ್ರೀತಿ ಅಪಾರವಾದುದು. ಅವರನ್ನು ಕರ್ನಾಟಕ ಸಾಹಿತ್ಯ ಸಂಸ್ಕೃತಿ ಪ್ರೇಮಿಗಳು ಸ್ಮರಿಸುತ್ತಾರೆ. ಸಂಪುಟ ಸಮಿತಿ ಅವರನ್ನು ತುಂಬುಮನಸ್ಸಿನಿಂದ ವಂದಿಸುತ್ತದೆ.

ಈ ಸಂಪುಟಗಳು ಹೊರಬರುವಲ್ಲಿ ಕರ್ನಾಟಕ ಸರ್ಕಾರದ ಪ್ರಯತ್ನ ಶ್ಲಾಘನೀಯ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿ ಹಾಗೂ ನಿರ್ದೇಶಕರು ಈ ನಿಟ್ಟಿನಲ್ಲಿ ಮುಕ್ತ ಸಹಕಾರವನ್ನು ನೀಡಿದ್ದಾರೆ. ಈ ಇಲಾಖೆಯ ಜಂಟಿ ನಿರ್ದೇಶಕರೂ, ಸಾಹಿತಿಗಳೂ ಆದ ಶ್ರೀ ಕಾ.ತ. ಚಿಕ್ಕಣ್ಣನವರು ಪ್ರತಿಯೊಂದು ಹಂತದಲ್ಲೂ ಸಂಪುಟ ಸಮಿತಿಯ ಜೊತೆಗಿದ್ದು ಅವರ ಅಪಾರ ಶ್ರಮ ಮತ್ತು ಸಹಕಾರವನ್ನು ಧಾರೆ ಎರೆದಿದ್ದಾರೆ. ಕರ್ನಾಟಕ ಜಾನಪದ ಅಕಾಡೆಮಿಯು ಪ್ರಕಟಣೆಯ ಕೆಲಸಕಾರ್ಯಗಳನ್ನು ನಿರ್ವಹಿಸಿ ತುಂಬು ಬೆಂಬಲ ನೀಡಿದೆ. ಈ ಸಮಸ್ತರಿಗೂ ನನ್ನ ಗೌರವಪೂರ್ವಕ ವಂದನೆಗಳು ಸಲ್ಲುತ್ತವೆ.

**ಪ್ರೊ. ಹಿ. ಶಿ. ರಾಮಚಂದ್ರೇಗೌಡ**
ಅಧ್ಯಕ್ಷರು
ಸಮಗ್ರ ಕನ್ನಡ ಜನಪದ ಮತ್ತು
ಯಕ್ಷಗಾನ ಸಾಹಿತ್ಯ ಸಂಪುಟ ಸಮಿತಿ

## ಕಂದ-೧

ಬ್ರಹ್ಮಾ ನಂದಂ | ಪರಮಸುಖವಂ | ಕೇವಲಂ |
ದ್ವೈನತೀಭಂ ದ್ವೈದ್ವ ತೀರ್ಥಂ | ಗಗನ ಸದ್ಬುಭಂ |
ಮೇಘ ವರ್ಣ | ಏಕಂ | ನಿತ್ಯಂ | ವಿಮಾಲಾಚರರಿ |
ವಚನಂ | ಭಾವತೀತಂ | ತ್ರಿಗುಣ ರಹಿತಂ | ಭವ ರೋಗ
ವೈದ್ಯಂ | ಸದ್ಗುರುತ್ವಂ ನಮಾಮಿ ||

## ತತ್ವ

ಕಂಡೆನಾ ನಾನೊಂದು ಪಕ್ಷಿಯ ಧರೆಯೊಳು |
ಮಂಡಾಲ ತುವಿಯೊಳು, ತಿರುಗುವುದ |
ಇದ ಕಂಡಿತ ಹರಿಹರ ಧೀ ಬ್ರಹ್ಮದಿ
ಗಳಿಗೂ ತಿಳಿಯಲು (ಹಾತಿಯು) | ಹಸಿದಾವಾಗಿರು
ವುದು || ಕಂಡೆನು ||

ರೆಕ್ಕೆ ಪುಕ್ಕಲ್ಲಿದೆ ಕೊಕ್ಕು ಮೊದಲಿಲ್ಲದೆ ಲೆಕ್ಕದೊಳಗೆ
ತಾನು ತಿರುಗುವುದು | ಇದ ಕಂಡಿತ ಹರಿಹರ
ಧೀ ಬ್ರಹ್ಮಾಧಿಗಳಿಗೋ ತಿಳಿಯಲು (ಹಿಡಿಯಲು)
ಹಸವಳವಾಗಿರುವುದು …….. || ಕಂಡೆನು ||

ಕಣ್ಣು ಕವಿ ಇಲ್ಲದೆ ಬಣ್ಣ ಮೊದಲಿಲ್ಲದೆ
ಸಣ್ಣದೊಳಗೆ ಸಣ್ಣವಾಗಿರುವುದ ಕಣ್ಣಲ್ಲಿರ
ಈ ಜಗವ ತಿರುಗಿ ನೋಡಿಕೊಂಡು ತನ್ನ
ಸ್ಥಳಕೆ ತಾನು ಬರುತಿರುವುದ || ಕಂಡೆನು ||

ಇಪ್ಪತ್ತೈವಾರೊಳು ಬವ್ವಾದಿಂದಿರುತೀದೆ
ತಪ್ಪಾದೆ ಸಂಚಾರ ಮಾಡಿರುವುದಾ |
ಇಷ್ಟತ್ತೊಂದು ಮತ್ತು ಆರು ಎರಡರ ಸೊನ್ನೆ
ಲೆಕ್ಕದೊಳಗೆ ತಾನು ತಿರುಗುವುದಾ || ಕಂಡೆನು ||

ಎಲ್ಲಾರ ಮನೆಯೊಳು ವಾಸವಾಗಿರುತೀದೆ
ಬಲ್ಲವರಿಗೆ ನಿಜ ತೋರುವುದ ಅಲ್ಲಾ
ಹೌದು ಎಂಬ ಕುಲ್ವಾ (ಉವ್ವಾ) ಮಾನವರಿಗೆ
ಉಲ್ಲಾಸ ಮಾರ್ಗದ ಬಿಡಿಸುವುದ || ಕಂಡೆನು ||

ಒಂಬತ್ತು ಬಾಗಿಲೊಳು ತುಂಬಿ ತುಳುಕುತಲಿದೆ
ಈ ಕಂಬಾದೊಳಗೆ ಮನೆ ಮಾಡಿರುವುದು
ಕೊಂಬು ಕನ್ನರ ಶ್ರೀ ಗುರುವಿನ ಪಾದಾವ
ನಂಬಿದವರಿಗೆ ನಿಜ ತೋರುವುದ || ಕಂಡೆನು ||

ಅಂದಾದ ಗುರುಭೋದೆ ಆಗಳದು ತಕ್ಷಣ ಚಂದ್ರ ನಿಲ್ಲದ
ಬೆಳಕು ವನಮ್ಮ | ಮಂದಾಗ ಮನೆ ಲಕ್ಷ್ಮಿರಾಮಣನ
ಬೆರೆಯುವ ಆನಂದ ಮಾರ್ಗವ ನೋಡಮ್ಮ || ಅಂದಾದ ||

ಹಂದಿಲು ಮಣ್ಣನ್ನು ತಿಂದಿತು ಬೇಗನೆ | ಗಂಧ ಎಲ್ಲಿಗೆ
ವಾಸನೆ ವನಮ್ಮ | ಬಂದಾಕೆ ನೆಂವರು ಭಯವಾಗಿ
ಹೋದಾರು | ಗಂಗೆ ಇಲ್ಲವ ನದಿ ನೋಡತಮ್ಮ || ಅಂದಾದ ||

ಬಡಗಾಲಿಂದಲಿ ಬಲದು | ಬನವು ಹಸವು ಬಂದು |
ಬಿಡವೆ ಯೋರುನ ಬಾಗಿಲು ತಿಂದಿನು ಸಿದಲೆಲೆತ್ತ್ಯು
ಸರ್ಪಗ ಬಿಡನಾಡಿ ನುಂಗೀತು | ದುದವಾತೆ
ರತ್ನವ ತಂದು ತನ್ನ ಮಸ್ತಕ
ದೊಳಟ್ಟ ದೀರ ಮಹೇಶ
ಇವನಾವರಮ್ಮ || ಅಂದಾದ ||

ಎಲ್ಲರಂತವನಲ್ಲ ಎನಗುರವು ಬಲ್ಲಿದೆನೆ ಪ್ರಭುವು || ಎಲ್ಲಿ ||
ಎಲ್ಲರಂತವನು ಕೇಳಮ್ಮ ಎಲ್ಲಿವನು ಎನ್ನೆಲೆ
ತೋರಿ ಎಲ್ಲು ಹೋಗದಂತ ಮಾಡಿಟ್ಟ ಈ ಜನ್ಮವನ
ಸುಟ್ಟಾ || ನೋಡು ಪ್ರಣವ ಸರೂಪ ನೀನೆರಿದೆ
ತಾನ್ಸೆದು ವಿಧದಿ ಕೂಡಿ ಧರೆಯೊಳು || ತುಂಬಿರುವು |
ಇದ ನೋಡು ಸೃಷ್ಟಿಯ ನೋಡುವ || ಭಾಸವದೆಂಬ ||
ಈ ರೂಪಿನಿಂದ ಕೂಡಿ ಹಂಸವ ಹೂಡಿ ಸೂತ್ರವ
ನೋಡಿ ಆ ಪರಂಜೋತಿ ತೇಜುವ್ವ ಮಾಡಿದವ
ಶ್ರೀ ಗುರುವುವಿನ್ನಿಂದ ಅದು ನೀನೆ ಎಂದು
|| ಬಲ್ಲರಂತವಗೂ ||

ಆದಿನಾತ ಅಂತ್ಯಗಳನ್ನು ನಡುವೆ ಸೋಭೀಪ ವೇದಿಕೆಯೆ
ಮೇಲೇರಿ ಶ್ರೀ ಗುರುವಿನ ಪಾದದಲ್ಲಿ ನೀ ಬೆರೆತು
ಸುಖಿಸೆಂದ || ಎಲ್ಲರುತವನಲ್ಲ ||

ಆರು ವರ್ಗವ ಹರಿದು ಬಿಸುಡೆಂದ ಪರವಾಳು ಕಚ್ಚೆಯ
ಮೂರು ಗುಣಗಳ ಬಿಗಿದು ಹಿಡಿಯೆಂದ ಆರಾರ್ಲಿ ಮುವ್ವತ್ತಾರು
ತತ್ವದ ಮೂಲ ತಿಳಿಯೆಂದ ಮೂರು ಕರ್ಣವು ಗುಬ್ಬಿಯಿಲ್ಲದೆ

ನೂರು ಕಾಲವು ತಪವ ಗೈದೆದೊಡಿ ತೋರದಾತ್ತನಂದ ಸುರಿ |
ವೆಂದ ಜೋಪಾನವೆಂದ || ಎಲ್ಲರಂತವನಲ್ಲ || ಆದೇವ
ಗುರುವು ಅಪಾರ ಮಹಿಮನ ಯುವಕ ಆವನೆಂದ
ಆ ಗುರುವಿನಿಂದ ಘೋರ ಬವ ಮರಿತಗಳು ಹರವೆಂದ ಆರುರಾಗುವ
ಮೂರು ಮಾಡಿ ಮೂರುಲಿಂಗವ ನೊಂದು ಗೊಡಿಸೇರಿ ನೀನಾಸ್ಥಳದಿ
ಬೆಳದೆಂದ ಜೋಪಾನ ವೆಂದ || ಎಲ್ಲರಂತವನಲ್ಲ ||

ಆದಿ ನಾಲ್ಕುರ ನಡುವೆ ಸೋಭಿಪ ವೇದಿಕೆಯ ಮೇಲೇರಿ
ಶ್ರೀ ಗುರುವಿನ ಪಾದದಲ್ಲಿ ನೀ ಬೆರೆತು ಸುಖಿಸೆಂದ || ಎಲ್ಲರಂತವನಲ್ಲ ||

ಆರು ವರ್ಗವ ಹರಿದು ಬಿಸುಡೆಂದ ಕರವಾಳು ಕಚ್ಚೆಯ ಮೂರು
ಗುಣಗಳ ಬಿಗಿದು ಹಿಡಿಯೆಂದ ಆರಾರ್ಲಿ ಮುವ್ವತ್ತಾರು ತತ್ವನ
ಮೂಲ ತಿಳಿಯೆಂದ ಮೂರು ಕರ್ಣವು ಶುದ್ದಿಯಿಲ್ಲದೆ
ನೂರು ಕಾಲವು ತಪವ ಗೈಡೆದೊಡೆ ತೋರದಾತ್ಮನಂದ
ಸುಕೈವೆಂದ ಜೋಪಾನವೆಂದ || ಎಲ್ಲರಂತವನಲ್ಲ ||

ಕಾರಣವ ವರಗುರುವು ಬೇಕೆಂದ ಆದೇವ ಗುರುವು
ಆಪಾರ ಮಹಿಮನು ಯುವಸ್ರ ಅವನೆಂದ ಆಗುರುವಿನಿಂದ
ಘೋರ ಭವ ಮರಿಗಳು ಹರವೆಂದ ಆರುಲಿಂಗವ ಮೂರು ಮಾಡಿ
ಮೂರು ಲಿಂಗವ ನೊಂದುಗೂಡಿ ಸೇರಿ ನೀನಾಸ್ಥಳವಿ
ಬೆಳಗೆಂದ ಜೋಪಾನ ವೆಂದ || ಎಲ್ಲರಂತವನಲ್ಲ ||

ತನ್ನ ತಾನೆ ತಿಳಿಯಬೇಕೆಂದ ತನ್ನ ತಿಳಿದರೆ ಭಿನ್ನ
ಭಾವಗಳು ಅಳಿವುದು ಆದರಿಂದ ನಿನ್ನ ನೀ ತಿಳಿವುದೇ
ಎನ್ನ ಮೆತವಿದೆಂದ ಇದೇ ಕಡೆಯೆಂದ ತಿಳಿಯದಿದ್ದರೆ
ಭಿನ್ನ ಭಾವ ವಾಯುವುದಾ ಅವರಿಂದ ನಿನ್ನ ಜನ್ಮಕೆ
ಇದೇ ಕಡೆಯೆಂದ ನಿಜವಿದೆಂದ || ಎಲ್ಲರಂತವನಲ್ಲ ||

ವಿಂಬು ಮತಗಳ ಸ್ವಂಬ ಮುರಿಯೆಂದ ವನ ಪಂಬು
ಮಾತಿನ ಗಂಬು ಕಳ್ಳರ ತಂಬಬೇಡೆಂದ ನೀ ಇದನಂಬ
ಕೊಂಡರೆ ಗಂಮ ಕತ್ತರಿಸುವವರು ತಿಳಿಯೆಂದ
ಮರೆಯದಿರಲಿಯೆಂದ || ಎಲ್ಲರಂತವನಲ್ಲ ||

ತುಂಟರೈವರ ಸೆರೆಯೊಳರುಸುತ ಅಷ್ಟ ಅಕ್ಷರಗಳನ್ನೇ
ಪಡಿಸುತ ಕಂಠಕೊಬ್ಬಿತೆ ಕಳೆದು ನಡೆಯೆಂದ ನಿಗುಣವಿದೆರಿವ
ಮರವೆ ಮೋಕ್ಷಗಳು ಅರಿದಾ ಹೋಯಿತೆಂದ ಆದನರಿಯೆ
ನಿನ್ನ ಅರಿವಿಗೆ ಕಾರಣವಾಯುತಲಿ ತಿಳಿಯದ ಅರಿತು
ನೀನು ಬರಿದೆ ಭ್ರಮೆಯೊಳು ಭ್ರಮಿಸಬೇಡೆಂವ ಕಡು

ವಾಕ್ಯದಿಂದ ಅರಿವಿಣಾಗುವಾಗಿ ಶ್ರೀ ಗುರುವರ
ರೇಣುಕಾನಂದ ಶ್ರೀ ಗುರು ಜ್ಞಾನಾನಂದ || ಎಲ್ಲರಂತವನಲ್ಲ ||

## ತೆರೆದ ಬಾಗಿಲ ಸುಂಕ

ಸಂಸಾರದೊಳು ಮುಕ್ತಿಸಿದ್ದ ನಿತ್ಯ ಸಂಸಾರ
ರೋಗಿಯು ಲೋಕ ಪ್ರಸಿದ್ಧಾ || ಪ ||

ಜಲದೊಳಗುದಿಸಿ ಕಾಜಿಸು ಶಿಕ್ಷ ಕಮಲವು ಜಲವಿನಿ
ಕಾವರು ಅಂಟದಿರುವಂತೆ ಮಲಿನ ಸಂಸಾರದಿ ಮುಳುಗಿ
ತಾನಿದ್ದರು | ಸಲೆ ಮಾಯವಶ ವಾಗವಾತ್ಮನು ಭದಿಗೊ
ತೊರೆಯ ಮೋಹವೆಂಬ ಮನಕ್ಷೇತ್ರವನ್ನು ಹರಿದು
ಮಮತೆಯೆಂಬ ಸತಿಸಂಗವನ್ನು ಮರೆತು ಹರಿಕಾರ
ಯೆಂಬುವ ಮಗನನ್ನು ವರಶಾಂತಿಯೊಂಬುವ
ದೇಶದೊಳಪ್ಪಗೆ
ಇರಿಸಿ ತನ್ಮಯಚಿತ್ತ ಪರಮಪುರುಷನೊಳ್ | ತ್ವರಿತವಿತನ್ನು
ಗೃಹಕೃತ್ಯವನ್ನು ನಡೆಸುವ ಉರುವ್ಯಭಿಚಾರಿಣಿ
ಗರಿಯಲ್ಲಿ ಚಿತ್ತವ ನಿರುತಾತನೋಳಗಿಸಿರುವ ಸತ್ಪುರುಷಗೆ
ಹವಿಯಂತಿ ಭಕ್ಷಿಪ ವಿಕ್ಷಂಗಳೆಲ್ಲತಾ ಕವಿಯಂತೆ
ಸರ್ವಕೆ ಸಾಕ್ಷಿಯಾಗಿರುವ ತವಪುಣ್ಯ ಪಾಪಂಗಳಂ
ವುದೆಇರುವ ಭವಿಯೊಳಗಿದ್ದು ಇಲ್ಲದ ಮಹಾತ್ಮನೆ
ಕುಲಕ್ಕೊಬ್ಬ ಭಕ್ತ ಕೋಟಿಗೊಬ್ಬ ಶರಣನು ಇಳೆಯೊಳು
ಪಾದದನಾಗಿರುತಿಹನು | ಸಲೆ ಗುರು ಮಹಲಿಂಗನ
ಕಾರುಣ್ಯದಿಂದ ಮಲಹರನಡಿಯ ತಾವರೆಯ
ಬಿಡದಿಹನು ಸಂಸಾರದೊಳಗಿನೆದ್ದು || ಸಂಸಾರ ||

* * *

ಜಯಿತು ಜಯಿತು ಜಯವಾಗಲಿ ಗುರುವೆ |
ಜಯವೊಂದು ನಿಮಗಾಗಲಿ ತಾಯಿ | ದೇವದೇವರ
ದೇವರ ಮಗನು ದೇವಲೋಕದ ಬುಡುಬುಡುಕಿನಾ
ಪಡುವಲ ದಿಕ್ಕಿನ ಬುಡುಬುಡುಕೀನಾ ಮೂಡಲಿ
ದೇಶವ ನೋಡಲಿಕ್ಕೆ ಒಂದೇ ಜಯತು
ಈ ದೇಹದ ಮರ್ಮವನ್ನೆಲ್ಲಾ ಬಲ್ಲೆ | ಭಾವ
ಶುದ್ಧಳಾಗಿ ಕೇಳಮ್ಮ ತಂಗಿ | ಉಪಾಯ ಒಂದು

ನಿನಗೇಳುವೆನವ್ವಾ | ಈ ದೇಹದೊಳಗೆ ಒಂದು
ದೇವರು ಉಂಟು | | ಜಯತು ||

ಸ್ಥೂಲ ಸೂಕ್ಷ್ಮ ಕಾರುಣ ಪ್ರಣವಗಳ | ಇವಿಲಂ
ಕಾರದ ನೆಲೆಯ ತಿಳಿದು ಕಾಲ ತಿಳಿದು ಕೊಂಡಿರ-
ಬೇಕು ಮಗಳೆ | ಜಾಗ್ರ ಸ್ವಪ್ನ ಸೂಸುತ್ತಿಯೊನೆ
ಜಾಗ್ರದಿಂದ ಶಿವನಿರುವನು ತಾಯಿ | ಜಾಗತೆಯಿಂ-
ವಲಿ ಕೇಳವ್ವ ಮಗಳೇ ಇಲ್ಲಿ ಜ್ಞಾನಿ ಒಂದು
ನೆಲೆಸಿರುವರು ತಾಯಿ || ಜಯತು ||

ತೈಲವಿಲ್ಲದ ಜ್ಯೋತಿಯು ಉಂಟು | ಭಾವಶುದ್ಧಳಾಗಿ
ಕೇಳಮ್ಮ ತಂಗಿ | ಸಂಶಯವಾಗಿ ಕೇಳಮ್ಮ ಮಗಳೆ |
ಅದು ಬಯಲಿಗೆ ಬಯಲು ನೋಡಮ್ಮ ಮಗಳೆ || ಜಯತು ||

ಕಲ್ಯಾಣದಲ್ಲಿ ಹುಟ್ಟಿದೆನವ್ವಾ | ಅಲ್ಲಮ್ಮ ದೇವರ ದೇವರು
ನಾನು, ಕಲ್ಲು ದೇವರ ಕರೆಯುತ ಬಂದೆ | ಎಲ್ಲಾ
ಶಾಸ್ತ್ರದ ....... ಬಂದೆ | ಯಾಕೆ ಬೇಕು | ಸಂಸಾರ
ನಿನಗೆ | ಈ ಮರುಳಾದ ಮರುಣದ ಬಾಗಿಲು
ತೆರೆವಾಯ್ತಲ್ಲ || ಜಯತು ||

* * *

ಭಗವಾನ್ ನಾಮವೇ ಭಾಗವತರ ನಿಧಿಸರ್ಗಕ್ಕೆ
ಸುಲಭ ಈ ದಾರಿ | ಜಾಗರೂಕನಾಗಿ ಜಗವ
ಸುಖವನಿಗಿ | ಪೋಗವೆ ನರಕಕ್ಕೆ ನೀ ಹಂಸನಾಗಿ || ಪ ||

ಆತ್ಮನೆಂಬೊ | ಪತಿತನ ನೋಡಿ ಈತನು ಎಂಬೊ |
ರಥದೊಳ್ ಕೂಡಿ ಇಂದ್ರಿಯಗಳನೆ | ತೇಜಿಯಿಸು
ಮಾಡಿ ಬುದ್ಧಿಯನ್ನೆ ಸಾರಥಿ ಮಾಡಿ
ವಿಷಯವ ಭೀತಿಗೆ ಮನ ಕೋಪ ಬೇಡ
ಘಾಸಿಸುವರು ನಿನ್ನ ಯಮನವರು ಮೂಢ
ಘೋಷಿಸುವವುಗಳ ತಿಳಿದು ನೋಡೋ | ಘಾಸಿ
ಇಲ್ಲದ ಮೋಕ್ಷದ ಜಾಡ || ಭಗವಾನ್ ||

ಇಂಥ ಸುಲಭದಿಯ ಮರೆಯುವರೆ ಕುಂದುಕ
ಬಾರದೆ ಮುಂದಿನ್ನು ತಂದೆ ಶ್ರೀಗುರು ಅರಿವಿ-
ನೊಳಗೆ ತೂರಿ | ಹಿಂದುಧರನೇನಾಗದೆ ಇಹ-
ದೊಳು || ಭಗವಾನ್ ನಾಮವೆ ||

* * *

ಬೆಟ್ಟದಲ್ಲಿ ಹುಟ್ಟಿದ್ದೆ | ಪಟ್ಟಣಕ್ಕೆ ಬಂದ್ದಿದ್ದೆ |
ಓ ಓ ಬಿದುರೆ | ಹೊ ಹೊ | ಬಿದುರೆ || ಪ ||

ಅಸಲುಗಳುವಾದೆ | ವದಿಯೂ ಬೊಂಬಾದೆ
ಇಂಥ ಉಳ್ಳವರ ಕೈಯಲ್ಲಿ ಕುಡುಗೋಲು
ನಾನಾದೆ ಬಿದುರೊ | ಹೊ ಹೊ | ಬಿದುರೆ ||

ಹರಿಗೋಲು ನಾನಾದೆ ದಂಡಕೋಲು ನಾನಾದೆ |
ಇಂಥ ಪಟ್ಟಣದ ರಂಗಸ್ವಾಮಿ ಕೈಯಲ್ಲಿ
ಕೊರುಳಾದ ಬಿದುರೆ | ಹೊ ಹೊ | ಬಿದುರೆ ||

* * *

ಹೋ ಹೋ ಸದ್ಗುರುವೆ ವಂದನೆಯು ನಿಮಗೆ
ಹಾ ಹಾ ನಿಮ್ಮ ಮಹಿಮೆ ಅಳದಹುದೆ | ನಮಗೆ
ಆಕಾರ ಉಕಾರನು ಭವತಿಳಿದು ಮಾಕಾರದಲಿ
ಮುಕ್ತಿ ಮಾರ್ಗವ ನೆನೆದು ಇಂಥ ಸಾಕಾರದಲಿ
ಒಂದು ಸರ್ವರಲಿ ಬೆರೆತು ಓಂಕಾರದಲಿ ನೋಡೆ |
ಬಂದೆ ಬೆಳಗುವುದು || ಹೊ ಹೊ | ಸದ್ಗುರುವೆ ||

ಕರಿ ಸಿಂಹಗಳು ಕೂಡಿ ಕಲಿತು ಮಾತನಾಡಿ
ಅರುಣ ಹೆಬ್ಬುಲಿಗಳು ಎರಡಾಟಾಂಗಳಾಡಿ ಉರುಗ
ವೃಶ್ಚಿಕ ಒಂದಾಗಿ || ಕೂಡಿ ಹೊ ಹೊ ಸದ್ಗುರುವೆ ||

ಆ ಅಗ್ನಿ ಈ ಹಳ್ಳ ಒಂದಾದ ಅಂದವನೆಂದೆ | ನನ್ನ
ಬಾಲ ಬ್ರಹ್ಮಾನಂದ
ಆಕಾರ ಉಕಾರನುಭವವತಿಳಿದು ಮೊದಲು ಮುಕ್ತಿ
ಮೊರ್ಗವ ನೆನೆದು ಇಂಥ ಸಾಕಾರವರಿ ಬರಿದು
ಸರ್ವರಲಿ ಬೆರೆತು | ಓಂಕಾರರ್ದ ನೋಡೆ
ಬಂದೆ ಬೆಳಗುವುದು || ಹೋ ಹೋ ಸದ್ಗುರುವೆ ||

ಆ ಅಗ್ನಿ ಈ ಅಳ್ಳ ಒಂದಾದ ಅಂದವನೇಂದೇ ನನ್ನ
ಬಾಲಿ ಬ್ರಹ್ಮಾನಂದ ಬಂಗಾರದ ಗೊಂಬೆ ಆವಿಯ
ದೋಳಡುವುದು ಉನ್ಮಯವ ತುಂಬೀ ಕೋಲಾಹಲದ
ನಿಮ್ಮ ಭಲಬೇಡಿ ತೆಂಭವಾದಿ || ಹೋ ಹೋ ||

ನನ್ನ ಮೀರನ ಪುರಿವಾಸ ಕೊಂಡಾವಧೂರ |
ಪ್ರಕಾರವ ಗೋಚರಿಪರ್ಪಮ ಸಂಷ್ಟೀತಾ ಅಣುರೇಣು
ಪರಿಪೂರ್ಣ ಆನಂದಭರಿತ ಗುಣನಿಧಿಯೇ ಕಲ್ಲೂರು
ಗೋಪಾಲ ಚರಿತೆ || ಹೋ ಹೋ ||

* * *

ಬ್ರಹ್ಮಾಂಡದೊಳಗೊಂದು ಹಮ್ಮಿನ ಮರ ಹುಟ್ಟಿ ಶುಂಭುಲಿಂಗಾ
ಇದು ಆಗಮ್ಯವಾಗಿದೆ ಇದು ಆಗಮ್ಯವಾಗಿದೆ ಆಂಗು
ತಿಳಿಯದು ಶಂಭುಲಿಂಗಾ || ಪ ||

ನಾದ ಬಂದು ಕಳೋ ಮುಂದುವರ್ಣ ಬಿಂಜ ಶುಭು |
ಲಿಂಗಾ || ಇದು ಮೇಥಿನಿಯಗಳು ಬಿದ್ದು | ಮೇಳತು
ಕೊಂಡಿರುತ್ಸತೆ || ಶಂಭುಲಿಂಗಾ ||

ಈಡ ಮೈಗಾಗಳಿಗಾಳ ನೀರೊಳು ಬೆಳೆದು
ಶಂಭುಲಿಂಗಾ || ಇದು ರೂಢಿಯೊಳು ಬಿಂದೂ
ಪ್ರಜ್ವಲಸುತಲಿದೆ || ಶಂಭುಲಿಂಗಾ ||

ಎಪ್ಪತ್ತು ಎರಡುಸಾವಿರದ ಎಲೆಗಳು ಉರಿದು ಶಂಭುಲಿಂಗಾ || ಇವೆ
ಒಪ್ಪುದ ಕೊಂಬೊರು ಇನ್ನೊರು ಹದಿನಾರು ಶಂಭುಲಿಂಗ ||
ವಪ್ಪದಿಂದೇ ನೋಡೆ ವಾರಿಜ ಕಮಲಕ್ಕೆ ಶಂಭುಲಿಂಗಾ ಇದತೆ
ತಪ್ಪದೆ ಇವನ್ನು ದ್ಯಾರ್ಮವಸಳಂಬು || ಶಂಭುಲಿಂಗ ||

ಪೂರ್ವದಿಕ್ಕುನಲ್ಲಿ | ಆರು ವರ್ಣದ ಕಾಯ
|| ಶಂಬುಲಿಂಗ || ಸಾರಿ ಪಶ್ಚಿಮದಲ್ಲಿ ಹೊರ
ಗಾರಿಲತು || ಶುಂಭುಲಿಂಗ ||

ವರಿ ಉತ್ತರದಲ್ಲಿ ಹಣ್ಣಾಗಿ ನಿಂತಿತು ಶಂಭುಲಿಂಗಾ
ಸಾರಿ ದಕ್ಷಿಣದಲ್ಲಿ ತೊಟ್ಟು ಕಳಚಿ ಬಿದ್ದಿತ್ತು || ಶಂಭುಲಿಂಗ ||
ತೊಟ್ಟು ಇಲ್ಲದ ಹಣ್ಣ ಕೊಟ್ಟು ಶಿವಲಿಂಗಸ್ವಾಮಿ || ಮನ ಮುಟ್ಟಿ
ಸವಿದಣ್ಣಾನಿಗೆ ಹುಟ್ಟು ನಾಶನದಹುದು || ಶಂಭುಲಿಂಗ ||

* * *

ಭವಾಭಯಾದಿಗಳ ಮದ್ದು | ಸದ್ಗುರು ತರಿದರು ತಾವಿದ್ದು
|| ಫಲವೇನುನಾಕಾವಿದ್ದು | ಈ ಜನ್ಮವು ಇಲ್ಲಿಗೆ ರುದ್ದ || ಪ ||

ಪತ್ಸನ ನಿಬ್ಬನು ನೋಡ್ಸೆ | ನೀ ಸತ್ಸ ಮೊರ್ಗ
ದೊಳು ಹೊಡ್ಸೆ | ಹತ್ತಾವ ತಾರನ ಗೂಡು |
ನಿನ್ನ ಪಿತ್ತ ರೋಗನ ನೀನಾಡು ‖ ೧ ‖

ಮಾತ್ರೆಯ ಪೊಟ್ಟನು ವೈದ್ಯ | ಸತ್ಯಾತ್ಮಕರಿಗಿ ಇದು
ಸಾಧ್ಯ | ಕುಶರಾ ಮರ ಚೋಧ್ಯ | ಅಲ್ಲಿ ದೊರಕಿತು
ಮೆನನೆನ ಭಾಗ್ಯ |

* * *

ಶ್ರೀ ಗುರುವ | ಪರಮ ಸದ್ಗುರುವ ಕೃಪಾಗುರುವೆ
ನನ್ನ ನಾಗ ಭೂಪತಾನೊ ದಯವಾಗಿನ್ನ ಗುರುದೊ

ಇಂದೇ ಕಾಳಗದಲ್ಲಿ ಹೆಚ್ಚ ಕಡಿದಾಡಿ | ಅಂತ ಸಂದು
ಹೋದವಾರ ಕತೆ ಸಾಟಿ ಇದಕಿಲ್ಲಾ ‖ ೧ ‖

ಆವರವು ಕಳಪ್ರಿಸಿಯು ಅನ್ಯಾಯದಿಂದಾ | ಅರಿತ
ಕಾದಿ ಸತ್ತವರ ಕತೆ ಕಾಯಳ ವಿದೆಲ್ಲಾ ‖ ೨ ‖

ಮುಂದೆ ಮುಕ್ತಿಯ ಪಡೆದು | ಮದದಿಂದ
ಆ ಶಿವನ | ಅಂದು ಪುಷ್ಪಾತವೇರಿ ಹೋದವರಿ ಕತೆಯು ‖ ೩ ‖

ಮಲ್ಲಿಗೆಯಲ್ಲಿ ಇಟ್ಟುವನ ಹುಲ್ಲು ಬಾಡಲು ಬಿದ್ದ |
ಕಲ್ಲಿಲ್ಲಟ್ಟುವನೆ ಗೆಲ್ಲೋ ರಷಸಿದ್ದೆ ‖ ೪ ‖

ವೇದವಿದೇ ಶಿಷ್ಟಾವಿದ ಪೂಜೆಮಾಡಲಿವನಳಿದು |
ಆ ಪಾದದಿಂದ ಪೂಜಿಸಿದ | ವ್ಯಾದನಂ ಪೊರಿದೇ ‖ ೫ ‖

ಊರಡವಿಯಲ್ಲಾ ನೀರುಗಳಿಲ್ಲಾ | ಸೇರಿನದಿಯೂ ಪುಣ್ಯ
ತೀರ್ಥವಾದಂತೆ ‖ ಕಾರನಿಗೆ ಕೂಗಿದರೆ ಸೇರುವುದೇ
ವಾಯಸೆರೆ ಅದರೆ ನೂರು ಹೇಳಲು ಬಿಡಲು ಕಾವಿಂಬ
ಧ್ವನಿಯಾ ‖ ಗುರುಪಾದ ಸೊಂಕಿ ನಮ್ಮ ಮರಿತ ವಡಗಿದವು
ಸರಿಯಾರು ನವಗಿನ್ನು | ಸಕಲ ಲೋಕದಲೂ ‖ ೧ ‖

ಸುರನರರುಗಳನ್ನೆಲ್ಲ ತಿತ್ನದೀ ಮುಕ್ತಿದೋ ವ್ಯಾಪ್ತ
ವಿಧಿಯೇ ‖ ಈ ಹರಿಯನ್ನು ಹರಿದಿಯ ಬಸಕೊಳುಒರಿಸೀಲೆ
| ಪಾದೆ ವಿಧಿಯೋ ‖ ಪ ‖

ಸತ್ಯಹರಿ ಚಂದ್ರ ಸತ್ಯಬ್ರಷ್ಟಾನ ಮಾಡಿದೆ ಪಾಪಿ
ವಿಧಿಯೇ || ಅವ್ವವಿ ನಳದಮಯಂತಿ | ಅಡವಿ
ಪಾಲುಮಾಡಿದೆ ಪಾಪಿ ವಿಧಿಯೋ || ಜಗ
ವಾದಿ ಕೃಷ್ಣನ ಬೇಡನ ಕೈಲಿ
ಕೊಲಿಸಿದೇ || ಸಾ || ವಿಧಿ ||

* * *

ಮನುಜಮನೀ ಬಿಂಬ ರತ್ನ ದೊರೆತವಗೆ ಮರಣ
ಬಾದೆಗಳಲ್ಲಿವೋ || ವತ್ಸ | | ಚನ್ಮಲಾದ್ರಿಯೋಗಳನ್ನು
ಪ್ಪುದೋ | ಕಣ್ಣುಗಳು ರವಿಯಂತೆ ಕಾಣಸಿಬಹುದೇ
ಇದಕೆ ಮಸ ಮುನಿಗಳು ಅಜವಂಶ್ಯರೂ
ಕಾದಿಹರು ಒಮ್ಮೆ ತಪವನೆ ಗೈಯುತಾ | ಇದಕೆ
ಸತ್ತವರ ಬದುಕುವುದೋ ತೃಣವೆನಿಪ ವಿತ್ತಮವ ಜೀವರತ್ನ
ಇದನ್ನು ಅರ್ತಯಾ ಪೂರ್ವದವರೂ | ಪಡಿದು
ತಮ್ಮ ಮೃತಭಾದೆಯ ನಳಿದರೂ || ೧ ||

ಹಿಂದೆ ರಾಮಾ ಯುದ್ಧದೀ | ಸಾವಿತ್ರುಕರಿದ
ಮಾಚೇತನಾಗಿದೆ ಹನುಮ ತಂದೆ ಸಂಜೀವನ
ಮಣಿಯೋ ಸೈನ್ಯವುಹೆಚ್ಚಿತ್ತು ಕೊಂಬುದಾಗ || ೩ ||

ಮೀರಿಯೊವ ಜ್ಯಾಡ್ಯತದೂ ಪ್ರಾರಬ್ದವೆಲ್ಲ ಪಿಳಿದು
ನಿರ್ಮಿಲದಿ ಧೀರ ಗುರುರಂಗ ನಪ್ಪಾ || ೪ ||

* * *

ಹೇಳಭಾರೊ ಪೊರ್ಗೋದೇಳಿಬರೂ | ಹೆಳದರ್ಧದೊಳಗೆ
ಶಾಂತವ ಕೇ | ಚಿಂತ್ತಿಸಿ ನೊಡಿರೆಂದು | ಹೇಳಿ ಬಾ |

ಪ್ರಜ್ಞೆಯೆಂಭೂವ ಖಡ್ಗಹಿಡಿದು | ಯಜ್ಞಪೋತವ
ಶಿರವ ಕಡಿದು ಅಜ್ಞೆಭಾವದ ಹಲಿಯನೂ ಕೋಟೆ
ಯಜ್ಞಗಳದುವೆಂದು | ಹೇಳಿ ಹೋಗೋವ

ಎಂಟು ಗೇಣಿನ ಹಟಯೊಳು | ನೋಕಿಂದು
ನೀಣೀನ ಮೊಲೇನೂಳಣಿ ಗಂದು ಕಾಣದೇ ಬರಿದೆ |
ಗಂಟೆಗೇ ಬಾಬರಾಗಿ ಕೇಲುರೆಂದು || ಹೇಳ ||

ಇಲ್ಲಾರಿ ಕಾಂಬುದ ಕಂಡುಕಂಡು ಕವ್ಸ ಬೊಂಬಿಗಳ
ನೇ ಪೂಜಿಪಿಕಲ್ಲೆ ಶಿವನೋ ಶಿವಸೇತಲ್ಲೂ
ಒಲ್ಲವರು ನೀವಾ ಪೇಳರೆಂದು || ಹೇಳಿ ||

ಬೆರಿಚ ಪದರದ ಬೇಲದೊರು ವಂಚು ಮಿಂಚು
ಕೀರುವ ರತ್ನವ ಪಂಚ ಸುಕ್ತಾರ

* * *

ಮಂತಾಮೊಹ್ಸ ಕಾರನವಮಾವ ಬ್ರಾಂತು
ತೀರಾದು ಗುವವಿ | ಶಾಂತಿ ಪುರುಷ
ಇವನಾರ ಮ್ಮಯ | ಬೆರಿತತೋರದು || ಪ ||

ಲಿಂಗಗಗವೇ ನಿಮಗೆ ಇಲ್ಲಾವೆಂದು | ಲಿಂಗ
ವ ಕೊರಿದಾಗ ಗಲರುವು ಭವುಮಂಟಪ
ದೂಳುಕುಳದು ಮುದ್ರೆಯ ತೋರಿದಿ ಗುರುರಿಪು
ಮಿಟ್ಟಬಾರದರಿತ ಮರವ | ಮುರಿದು ಹಾಕೀದ ||
ಮುದ್ದುವೀರ ಶಖೀಯರಕರೋಮ | ಮುಕ್ತಾಯಿ
ಸಾರಿದ ಗುರುವು || ಪ || ರುದ್ರಕಲರ್ಕವನ್ನೆಕ್ಕ್ಯು
ಲಗ್ನವ ಮಾಡಿದ್ ಜರುವು || ಪ ||
ನೇಕ್ತಿದೂಳರಿಸಿದ ಗರುವು |
ಆರು ಅರಿಯದಂಡ | ಮೊಗಿನತ್ತುವಿ
ಯೊಳರಿಪಿದ || ಮನ ಮೋಹ ||

* * *

ನೀನೊಳಗೇ ನೀ ಕಳೆದು | ನಿಜಸುಖವನಾವಾಸವ
ಬೆಕ್ಕು ಹೊತ್ತುಕೊಂಡು ಹೋಯಿತಮ್ಮಾ || ಎನ್ನಗುರು ||

## ಗುರು ಬಂದ ಹರ ಬಂದ ಶಿವ ಬಂದ

ಗುರು ಬಂದ ಹರ ಬಂದ ಶಿವ
ಬಂದ ಮನೆಗೆ | ಗುರುವು ರೇವಣ್ಣ
ಸಿದ್ದ ತಾ ಬಂದ || ಪ ||

ಎಂದೂ ಬರದ ಗುರುವು ಇಂದು ತಾ ಬಂದ
ಆನಂದ ಪದವಿಯ ನಿನಗಾಗಲೆಂದ || ಗುರು ||

ಮುಕ್ಕಣ್ಣ ಶಿವ ತಾನೇ ಭಿಕ್ಷಕ್ಕೆ ತಾ ಬಂದ
ಭಿಕ್ಷವ ನೀಡಿದರೆ ನಿಮಗೆಂದ || ಪ ||

ಚೆನ್ನದ ಹಾವಿಗೆ ರನ್ನದ ಮುತ್ತು ಹೊನ್ನಿನ
ಜೋಳಿಗೆ ಧರಿಸುತ್ತ ಬಂದ || ಪ ||

ಕುಂಟ ಕುರುಡರಿಗೆಲ್ಲಾ ಕಣ್ಣು ಕಾಲು ತಂದ
ಇಂಥ ಬರಡು ಗೋವಿನ ಹಾಲು ಕರೆದು
ಹಾಲುಂಡ || ಗುರು ||

ಹಸು ಮಕ್ಕಳನ್ನು ನೋಡಿ ನಸುನಗುತ್ತ
ಬಂದ ಇಂಥ ಅಸನಾಗಿ ಓದಿಸಲು ಶ್ರೀಗುರು
ಬಂದ || ಗುರು ||

ಧರೆಯೊಳ್ ಪೊಲ್ಲಿಯ ದಾಂಟಿ ಪುರದಿಂದ
ಬಂದ ಇಂಥ ಭಕ್ತರ ಪೊರೆಯಲು ರಂಭಾ
ಪುರದೊಳುದಿಂದ || ಗುರು ||

## ಎಲ್ಲಿ ನೋಡಿದರಲ್ಲಿ ಶಿವನ ಸೊಲ್ಲು

ತತ್ವ ಚಿಂತನೆ ಮಾಡೋ ಮನುಜ | ವ್ಯರ್ಥ
ಕಾಲವ ಸುಳಿಯದೇ | ಮೃತ್ಯುಚೆರುವುದು
ಮುಂದೆ ಕೇಳೋ ಮೂರುಬಾರಿಗೊಸಾರಿದೆ || ತತ್ವ ||

ಮನೆಯು ಉರಿಯುವಾಗ ಬಾವಿಯ ತೆಗೆಯುವ
ನರನಂದದೀ ಕೊನೆಗೆ ಯಮನರು ಬಂದು
ಎಳೆವಾಗ | ಕೋರಿದರೆ ಸುಖ ದೊರೆವುದು || ಪ ||

ತಾನು ತನ್ನದು ಎಂಬ ಉದರದಿ ಮಾನ ಹೀನ
ನಾಗಬೇಡವೋ | ನಿನ್ನ ಸ್ವಾನುಭಾವಕೆ ಹಾನಿ
ತಪ್ಪದು | ನೀನು ನಿನ್ನೊಳು ನೋಡಲೊ || ಪ ||

ಎಲ್ಲಿ ನೋಡಿದರಲ್ಲೋ ಶಿವನ ಸೊಲ್ಲು ಸೊಲ್ಲಿಗ
ಸ್ಮರಿಸುತಬಲ ಶರಣರೊಳ್ | ಕೂಡಿ ಸಂಗಮ
ಅಲ್ಲಿ ಕಳೆದುಳಿಮೆ ಮಾಡುತ || ಪ ||

ಈ ಶಣತ್ರಯದಾಸೆಯಿಂದಲ್ಲಿ ಮೋಸ ಹೋಗಲು
ಬೇಡವೋ |
ನಿನ್ನ ರೋಷ ದೋಷಕ್ಕೆ ಕಾರಣಗಳ | ನೆಮಗಳನ್ನು
ಅನುಸರಿಸುತ್ತ || ಪ ||

ಪ್ರೇಮದಿಂದ ಗುರುರಾಮ ವಿಠಲನೆ ನಾಮ
ಸ್ಮರಣೆಯ ಮಾಡಲು | ಈ ಕಾಮ ನೋಟಕ್ಕೆ
ಮನವ ಸೋಲದೆ ನೇಮಗಳನ್ನು ಅನುಸರಿಸುತ್ತಾ || ಪ ||

## ಮಾತು ಮಾತಿಗೆ ಶಂಕರ

ಮಾತು ಮಾತಿಗೆ ಶಂಕರ ಶ್ರೀಗುರುವೆ
ಸರೋತ್ತ ಸಬಾರದೇ | ಜ್ಯೋತಿ ಸಂಘದಿ
ಉರಿದು ಹೋಗುವ ಕರ್ಪೂರದಂತೆ
ಪಾತಕರಾಶಿ ನಿಂತುರಿದು ಹೋಗುವುದು ||

ಸ್ನಾನ ಮಾಡುವಾಗ ನೇಮದಿ ಆತ್ಮಜ್ಞಾನವ
ಮಾಡುವಾಗ ಜಾಣತನದಿ ಅನ್ನ ಉಂಡು
ಗಂಗಾಮೃತ ಪಾನ ಮಾಡುವ ಕಾಲ ಮನವೇ || ಮಾತು ||

ಬಿಸುಜಾಕ್ಷಿ ನೋಡುವಾಗ ಬಸಗೋಳು
ಬರುವ ಹಸುಮಗು ಸುಮುದ್ಧಿಸುವಾಗ
ಹಸನಾದ ವಸ್ತ್ರಂಗಳ ಉಡುವಾಗಲು ಮನವೇ || ಮಾತು ||

ಬೆಟ್ಟವ ನೇರುವಾಗ | ಕಾಲು ಮುರಿದು | ತಟ್ಟನೆ
ಬೀಳುವಾಗ | ಅಷ್ಟಬೋಗದಿರೊ ಪ್ರಾಪ್ತಿ

ಪಡೆವಾಗ | ದಟ್ಟ ದರಿದ್ರವು ಬಂದಾಗಲೇ
ಮನವೇ || ಮಾತು ||

ಸುರಿವ ಕಳ್ಳನು ಬಂದಾಗ ಘೋರಾರಣ್ಯ
ವ್ಯಾಸನು ಮರೆಯುವಾಗ ಚಳಿಜ್ವರ ಕೆಮ್ಮು
ಉಬ್ಬುಸ ರೋಗ ಬಂದಾಗ | ಮಳೆಗಾಳಿ |
ಪಿಡರಿರ್ನಾ ಭಟದಲ್ಲಿಯ ಮನವೇ || ಮಾತು ||

ಗುರುಸೇವೆ ಮಾಡುವಾಗ ಶ್ರೀಗುರು ಕೊಟ್ಟ ಮಂತ್ರ
ಜಪಿಸುವಾಗ | ಗುರುವೇ ಗುರುವೇ
ದೇವರ ಕಟ್ಟಿರುವೆ ಪಾಲಿಸು ಎಂದು
ಶ್ರೀಗುಹ ಮಹಲಿಂಗನ ನಂಬಿ ಮಾನವೇ || ಮಾತು ||

## ನರನೆಂದು ತನ್ನ ಪೇಳುವನೊ ಕುರಿಯಂತೆ ತಾ ಸಾಯುವನೊ

ನರನೆಂದು ತನ್ನ ಪೇಳುವನೊ | ನೋಡೆ ಕುರಿಯಂತೆ
ತಾನು ಸಾಯುವನು | ಅರಿವಿನಾನಂದ ಮರಣವ
ಹರಿಯಿಸದೇ | ನರಜನ್ಮವನು ನರಕಕ್ಕೆ ಗುರಿಯಾಗಿ || ನರನೆಂದು ||

ಧೀರ ನಾನೆಂದು ತಿರುಗುವನು ಬಂದು ಮಾರಿ
ನೋಡೆಸಲು ಕೊರಗು ಏನು ಈರೇಳು ಲೋಕವ
ಮೀರಿ ತಾನಿಲ್ಲದೆ | ಘೋರ ಮೃತ್ಯುವಿಗೆ ಈ
ಸಾರ ದೇಹದ ಕೊಟ್ಟು || ನರನೆಂದು ||

ಜಾಣನೆನ್ನುತ ಕೊಬ್ಬಿ ಮರೆವ ಹೆಣವ ಕಾಣುತ್ತ
ಮಲವನ್ನೆ ಬಿಡುವ | ಜ್ಞಾನದಿಂದ ಹರನಾಗಿ
ಹಾನಿಯಂ ಹರಿಸದೆ | ನಾನ ದುಃಖಗಳಿಂದ
ಪ್ರಾಣವ ಕಳೆಯುತ್ತ || ನರನೆಂದು ||

ಗುರಿ ಮಾಡುತ್ತಿರುರೋ ಮಗಳಾ | ಮತ್ತೊಬ್ಬರಿಗೆ
ಜೋಡಿಸುವ ಹಸ್ತಗಳ | ಗುರು ಮರೆವೆಯಿಂದ್
ನರಿ ನಾಯಿ ಕುರಿಯಾಗಿ ಪುಟ್ಟುತ್ತ || ನರನೆಂದು ||

## ಶರಣು ಎನ್ನುತ ಮಣ್ಣಿಗೆ ಹೋದೆ

ದಾರಿಬಿಟ್ಟು ಹೋಗುತಿಯಲ್ಲೊ ಬರಿ ಮಾತಿನಲ್ಲಿ
ನೂರು ವರುಷ ಕಾಲ ಕಳೆದಲ್ಲೊ |

ನೂರು ವರಷ ಕಾಲ ಕಳೆದೆ ಯಾರು ಬರುವರು
ನಿನ್ನ ಹಿಂದೆ
ಮಾರಹರನ ಮನೆಯ ಮಾಡದೇ
ಹಾರಿ ಹೋಯಿತು ನಿನ್ನ ಜೀವ || ದಾರಿ ||

ಜಾರಿಬಿದ್ದೆ ನಾರಿಮಣಿಗೆ
ಗರುವ ಯಾತಕೆ ಪ್ರಾಯದೊಳಗೆ
ಸರ್ವಸಾಕ್ಷಿ ಮೂರ್ಖನೆಡೆಗೆ
ಶರಣು ಎನ್ನುತ ಮಣ್ಣಿಗೆ ಹೋದೆ

ವೇದಶಾಸ್ತ್ರ ಪುರಾಣಗಳನು
ಕ್ರೋದಾದಿಂದ ಸುಳ್ಳು ಎಂದೆ
ಸಾದು ಸಜ್ಜನ ಶರಣರೊಂದಿಗೆ
ತರ್ಕಮಾಡುತ ಮೂರ್ಖನಾದೆ

ಭಜನೆ ಮಾಡೋ ಭಕ್ತರ ನೋಡಿ
ಅರಸು ಮುನೇಂದ್ರ ನೆನಿದೆ
ಸುಜನ ಸಂಘವ ದೂರ ಮಾಡಿ
ಯಮನ ಹಿಂಸೆಗೆ ಪಾತ್ರನಾದೆ

ಕಳವಿಬಾವಿ ರಂಗಸ್ವಾಮಿ
ಭಕ್ತರೊಂದಿಗೆ ಜಗಳವಾಡಿ
ಸುಳಿದ ಬಾಳೆಯ ಸಿಪ್ಪೆಯು ತೆರದಿ
ಕೊಳತು ನಾರುತ ಮಣ್ಣಿಗೆ ಹೋದೆ

## ತನುವಿನೊಳಗೆ ತನುವಿಟ್ಟಿರಬೇಕು

ಸುಮ್ಮನಿರಬೇಕು ಶಿವನಾದ ಮೇಲೆ
ಸುಮ್ಮನಿರಬೇಕು ಶರಣಾದ ಮೇಲೆ
ಗುರುಕರಣಾ ಮದವಾಗಿರಬೇಕು
ಗುರುವಿನ ಶೀಲ ತಿಳಿದಿರಬೇಕು

ಮನವು ದುಷ್ಟಗುಣಗಳ ದೂರ ಮಾಡಿರಬೇಕು
ಮಣ್ಣಿನ ಆಯುಧವ ಸಾಗಿಸಬೇಕು
ತನವಿನೊಳಗೆ ತನವಿಟ್ಟಿರಬೇಕು
ತನುವಿನ ಬಾಂಡ ತೊಳದಿರಬೇಕು

ಒಳಗೆ ಹೊರಗೆ ಬಲವಿರಬೇಕು
ನಡಸಿದ ಗಂಟನ್ನು ಬಚ್ಚಿಡಬೇಕು

## ಬಂಟ ಹುಡುಗನು ಒಬ್ಬ ಗಂಟುಬಿದ್ದನು

ಬರುಬಾರದೀ ಊರಿಗೆ ಅರಿಯದಲೆ ಬಂದೆ
ಮೊರೆ ಹೇಳಲಿ ಇನ್ಯಾರಿಗೆ || ಬರು ||

ಗುರು ಹಿರಿಯಾರಿವರೆಂದು ಗುರುತಗಳ ಅರಿಯದೆ
ನನರೊಳು ಬೆರತು ನಾ ಬರಲಾರೇನೊ ಶಂಬೊ

ಒಂಬತ್ತು ಬೀದಿಗಳು ಈ ಊರಿಗೆ ಹಿಂಬಾಗಿಲು ಒಂದಿಲ್ಲವೋ
ತುಂಬಿತು ಮೇಲ ಭಾಗ ಇನ್ನಿಲ್ಲ ದುರಾಶೆ

ನಂಬಿ ಬಂದೇನು ಶಂಬೋ ನೀನೆ
ರಕ್ಷಿಸು ತಂದೆ

ಎಂಟು ಮಂದಿ ಕಂಟಾಕರು
ಹತ್ತಾರು ಮಂದಿ ತುಂಟಾರವ್ವ ಇವರು

ತುಂಟಾರು ಇವರೆಂದು ಒಂಟೀಲಿ ನಾನಿದ್ದೆ
ಬಂಟ ಹುಡುಗನು ಒಬ್ಬ ಗಂಟು ಬಿದ್ದನು ಶಂಭೊ

ದೇಶದೊಳಗೆ ನಮ್ಮ ವಾಸುಳ್ಳ ಶಿಶುನಾಳ
ಗುರುವೇ ಕೆಂಚೇಶನೆ ನೀನೆ ರಕ್ಷಿಸೊ ಶಂಭೊ
ಹೆಂಗೇ ಮರಿಯಲವ್ವ ಇವನು
ಶಾಂತಾ ಷರೀಪನು || ಹೆಂಗೆ ||

ಅಂತರಂಗದೊಳಗೆ ಬಂದು
ಚಿಂತೆ ದೂರ ಮಾಡಿದನವ್ವ
ಒಳಗೆ ಹೊರಗೆ ಆದ ಬ್ರಹ್ಮ
ಅಲಕ್ಕನೇ ಹಾರಿದನಮ್ಮ || ಹೆಂಗೆ ||

ಜನನ ಮರಣವನ್ನು ಗೆದ್ದು
ದುರಿತ ಮರಣವನ್ನು ತುಳಿದು
ಒಳಗೆ ಹೊರಗೆ ಆದ ಬ್ರಹ್ಮ
ಅಲಕ್ಕನೇ ಹಾರಿದನಮ್ಮ || ಹೆಂಗೆ ||

## ಸೋಕವು ಗೈವರು ಸತಿಸುತರು

ಯಾರು ಹಿತವರು ನಿನಗೆ ಈ ಮೂವರೊಳಗೆ
ನಾರಿಯೊ ದಾರುಣಿಯೊ ಬಲುಧನದ ಸಿರಿಯೊ
ಅನ್ಯರು ಜನಿಸಿದ ಕನ್ಯೆರನ ತಂದು
ತನ್ನ ಮನೆಯೊಳಗೆ ಯಜಮಾನಿ ಎಂದೆನಿಸಿ
ಭಿನ್ನವಿಲ್ಲದ ಅರ್ಧದೇಹ ಎನಿಸುವ ಸತಿಯು
ಕಣ್ಣಿನಲಿ ನೋಡುವಳೆಮ್ಮನು

ಮುನ್ನ ಶತಕೋಟಿ
ತನ್ನದೆಂದು ಎನಿಸಿ ಶಾಸನವ ಬರೆಸಿ
ಖಿನ್ನಳದ ಮನೆಯ ಕಟ್ಟಿ ಕೋಟೆ ಕೊತ್ತಳವಿಕ್ಕಿ
ಚೆನ್ನಿಗನೆಂದು ಎನಿಸುವ ಪತಿಯು
ಕಣ್ಣಿನಲಿ ನೋಡುವಳೆಮ್ಮನ ಕಾಲವ ಪದಿ
ಉದ್ಯೋಗ ವ್ಯವಹಾರ ನೃಪಸೇವಾ
ಕಳವು ಪರದ್ರೋಹಿದಿಂ ಬುದ್ಧಿಯಿಂದ ಗಳಿಸಿ
ಸೋಕವು ಗೇಯುವರು ಸತಿಸುತರು ಬಾಂಧವರು

## ಶಿವ ತತ್ವವಾಗಿಹುದು

ಬರಿದೆ ನೀ ಹುಡಿಕಾಡ ಬ್ಯಾಡ
ನಿನ್ನ ಒಡಲೊಳಗೆ ಇರುವುದು ತಿಳಿಯೊ ನೀ ಮೂಢ || ಬರಿದೆ ||

ಬುಡ ಮೇಲಣದ ವೃಕ್ಷದೊಳಗೆ ಅಲ್ಲಿ
ಕಡುಸಣ್ಣ ಕೆಲಸದ ನಡಗೂಡಿನೊಳಗೆ

ಇದರ ಬೆಡಗ ನೀ ತಿಳಿಯೊ ಗುರುಪಾದದೊಳಗೆ
ಇಂದ್ರನ ಛಾಪದಂತಿಹುದು ಇದು

ಮಂದಾರ ಕುಸುಮದ ಮಧ್ಯೆದೊಳಿಹುದು
ಕೋಟಿ ಚಂದ್ರ ಸೂರ್ಯನ ಪ್ರಭೆಯು ಜರಿಯುತಲಿಹುದು

ಅಣುವಿಗೆ ಅಣುವಾಗಿಹುದು ತನ್ನ ಬಲವಾದ
ಅಣುಗಳ ಸೆಳೆದುಕೊಂಬಿಹುದು

ಹಿತ್ತಾಲ ಗಿಡವಾಗಿಹುದು ಮತ್ತೆ ನೋಡಲು ಅದು
ಶಿವ ತತ್ತ್ವವಾಗಿಹುದು
ಇದರ ಅರ್ಥವ ರೇವಣಸಿದ್ಧನೋಡಿಹುದು.

## ಕರೆಕರೆ ಸಂಸಾರ ತರವಲ್ಲ

ಸತಿಗೆ ಸ್ವತಂತ್ರವ ಕೊಡದಿರಣ್ಣ ನೀನು
ಮತಿಗೆಟ್ಟು ಬಾಯಿಬಾಯಿ ಬಿಡದಿರೊ
ಪತಿಗೆ ಬಣ್ಣದ ಮಾತ ಹಾಡ್ಯೋಳೊ ಅವಳು
ಮಿತಿ ಇಲ್ಲದ ಕರ್ಚು ಮಾಡ್ಯಾಳೊ

ಅತಿ ಹರುಷದಿಂದ ಕೂಡ್ಯಾಳಣ್ಣಾ ಪರ
ಗತಿಗೆ ಕರೆಕರೆ ಮಾಡ್ಯಾಳಣ್ಣಾ

ಹಡೆದ ತಂದೆ ತಾಯಿ ತ್ವಾರಿಸ್ಯಾಳೊ ತನ್ನ
ಕಡೆಗೆ ಬಾ ಎಂದು ಕರಿಸ್ಯಾಳೊ

ಬಿಡದೆ ಒಂಟಿ ಮಾಡಿ ನಿಲಿಸ್ಯಾಳೋ ಒಂದು
ಪಡಿ ಬತ್ತಕೆ ಬಯಿ ಬಿಡಿಸ್ಯಾಳೊ

ತಂದುದ್ದರೊಳಗೆ ಅರ್ಧ ಕದ್ದಾಳೋ ಅವಳು
ಸಂದು ಸುಳಿವು ನೋಡಿ ಮೆದ್ದಾಳೊ

ಮುಂದಿದ್ದ ಕೂಸನು ಒದ್ದಾಳೋ ಹತ್ತು
ಮಂದಿಯ ಕಾಲಿಗೆ ಬಿದ್ದಾಳೊ

ಉಂಡುಟ್ಟ ಮನೆ ಎಣಿಸ್ಯಾಳೊ ಅವನ
ಬಂಡು ಮಾಡಿ ಮಾನ ಕಳಿಸ್ಯಾಳೊ

ಮಂಡೆ ಕೆದರಿಕೊಂಡು ನಿಂತಾಳೊ
ದೊಡ್ಡ ಕೋರಿ ಮಾಡಿ ಕುಣಿಸ್ಯಾಳೊ

ಕರಕರೆ ಸಂಸಾರ ತರವಲ್ಲ ಇಂಥ
ದುರುಳ ಹೆಣ್ಣಿನ ಸಂಗ ಸರಸಲ್ಲ
ಶ್ರೀ ಪುರಂದರ ವಿಠಲಾ ತಾ ಬಲ್ಲ ||ಸ||

# ಸದ್ಗುರುವರನ ಪ್ರಾರ್ಥನೆ

**| | ಓಂ ||**

**| | ಪರಮಾತ್ಮಶಿವೋಹಂ ||**

ಸದ್ಗುರುಜ್ಞಾನಾನಂದರ ಒಂದನೇತತ್ವ ನಿಜಗುಣರ ಒಂದನೇ ತತ್ವದಂತೆ ಮಟ್ಟು

**ರಾಗ-ನಾದನಾಮಕ್ರಿಯೆ ಅಟ್ಟತಾಳ**

ಶ್ರೀ ಗುರುವಿನ ಕೃಪೆಯಾಗೆ ನರನ ಭವರೋಗನಿವಾರಣಮಾಗುವದು ಇರುಳ್ಹಗಲೆನ್ನದೆ ಧರೆಯ ಭೋಗಂಗಳ | ನೆರೆ ಚಿಂತಿಸುತ್ತೆ ಹರಿಯುವ ಚಿತ್ತವ | ಧರೆಯ ಭೋಗವು ಸ್ವಪ್ನದಂತೆ ತೋರಿಸಿ ನರನ | ಹರಿವ ಚಂಚಲ ಚಿತ್ತವನ್ನೇ ಕಿತ್ತಿಡುವ ಪ || ೧ || ಶ್ರೀಗುರು

ಪರಿ ಪರಿ ರೂಪು ನಾಮಗಳ ಭಾವಿಸಿ ನಾನಾ | ಪರಿ ಪರಿ ದೇವರೆನ್ನುತೆ ಭಿನ್ನಪ | ನರನೆ ಈಶ್ವರನೊಬ್ಬ ಮೆರೆವ ಸರ್ವರೊಳೆಂದು ಬೆರಸುತೆ ಮನವ ಈಶ್ವರನೊಳು ಬೆಳಗಿಪ || ೨ || ಪ || ಶ್ರೀ ||

ಮೂರು ಮೂರ್ತಿಗಳ ರೂಪವೆ ಓಂ. ಆ. ಉ. ಊ. ಐ. ಮ. ಸೇರಿ ಬೆಳಗುವುದು | ಸರ್ವರೊಳೆಂಬುವ | ತೋರಿ ಸೃಷ್ಟಿಸ್ಥಿತಿ ಕರ್ತೃ ಸಂಹಾರದಿ || ತೂರಿ ಅಭಿಮಾನವೆಂಬುದ | ಕೊಂದುಬಿಡುವ || ૩ || ಪ|ಶ್ರೀ|ಇಷ್ಟಲಿಂಗದಿ. ಭಾವ ನೆಟ್ಟಾನೆ ನಿಂದೊಡೆ | ಬಿಟ್ಟೋಡುವವು | ಭವ ಪಾಶಂಗಳು || ಇಷ್ಟಾ ಪ್ರಾಣವು ಭಾವ | ವಟ್ಟು ಗೂಡಲು ಜನ್ಮ ಸುಟ್ಟು ಪೋಪುದು ಎಂದಾ ಗುಟ್ಟು ಬೋಧಿಸುವ || ೪ || ಪ || ಶ್ರೀ || ಕರೆದು ಪಕ್ಕಕೆ ತನ್ನಂ ತೆಸಗಿ | ಅರಿವೆ ಗುರು | ನಿರತ ಕನೆಂಬಾಚಾರ ವರೆ ಶಿ | ಷ್ಯನು ವರ ಮನ ಲಯ ಮಾಡದೆ | ಜ್ಞಾನ | ನಿತ್ಯಾನ್ಯಾಬೆರೆದೇನು | ವೀರ ಪೀಠೇಶನೊಳೆನ್ನೆಂಬಾ || ೫ || ಶ್ರೀಗುರುವಿನ ಕೃಪೆಯಾಗೆ ನರನಭವ | ರೋಗನಿವಾರಣಮಾಗುವದು ||

**(೨ನೇ ತತ್ತ್ವ) ರಾಗ-ಮೋಹನ ಅಟ್ಟತಾಳ**

ಎಲ್ಲರಂತವನಲ್ಲೆ ಎನ್ನ ಗುರುವು ಬಲ್ಲಿದನೆ ಪ್ರಭುವು || ಅ.ಪ || ಎಲ್ಲರಂತವನಲ್ಲ ಕೇಳಮ್ಮ ಎಲ್ಲವನು ಎನ್ನಲ್ಲೆ ತೋರಿ ಎಲ್ಲು ಹೋಗದಂತೆ ಮಾಡಿಟ್ಟಾ ಜನ್ಮವನೆ ಸುಟ್ಟಾ || ೧ || ಎಲ್ಲ | ನೋಡು ಪ್ರಣವ ಸ್ವರೂಪ ನೀನೆಂದ ತಾನೈದು ವಿಧದಿ ಕೂಡಿ ಧರೆಯೊಳು ತುಂಬಿರುವದೆಂದ ಇದ್ದ ನೋಡ ಸೃಷ್ಠಿಯ ನೋಡಿದಂದದಿ ಭಾಸವಹುದೆಂದ ಈ ರೂಪಿನಿಂದ ಕೂಡಿ ಹಂಸನ ಹೂಡಿ ಸೂಸ್ತ್ರವ ನೋಡಿ ಆಪೋಜ್ಯೋತಿ ತೇಜವ ಮಾಡಿದನ ಶ್ರೀಗುರುವು ಎನ್ನೆಂದ ಅದು ನೀನೆ ಎಂದ || ೨ || ಎಲ್ಲ ಆದಿ ಅಂತ್ಯಗಳನ್ನೇ ಭೇದಿಸಿದ ಅತ್ಮಾಕುಷ್ಟಾ ದ್ವಾದಶಾಂಗುಲ ದಂತ್ಯ ತೋರಿಸಿದವರ ಮೋಕ್ಷಮಾರ್ಗದ ಹಾದಿ ಇದು ತತ್ವದವ ನೋಡೆಂದ ಅದು ನೀನೆ ಎಂದ | ಹಾದಿನಾಲ್ಕರ ನಡುವೆ ಶೋಭಿಪ ವೇದಿಕೆಯ ಮೇಲೇರಿ ಶ್ರೀಗುರು ಪಾದದಲ್ಲಿ ನೀ ಬೆರೆದು ಸುಖಿಸೆಂದ ಎರಡಿಲ್ಲವೆಂದ || ૩ || ಎಲ್ಲ | ಆರು ವರ್ಗವ ಹರಿದು ಬಿಸುಡೆಂದ | ಕರ ವಾಕ್ಕು ಕಚ್ಚೆಯ ಮೂರು ಗುಣಗಳ ಬಿಗಿದು ಹಿಡಿ ಎಂದ | ಆರಾರ್ಲೆ ಮೂವತ್ತಾರು ತತ್ವದ ಮೂಲವರಿ ಯೆಂದ | ಬಲು ಸಿಟ್ಟಿನಿಂದ ಮೂರು ಕರಣವು ಶುದ್ಧಿ ಇಲ್ಲದೆ | ನೂರುಕಾಲವು ತಪವ ಗೈದಡು ತೋರದಾತ್ಮಾನಂದ ಸುಖವೆಂದ ಜೋಪಾನವೆಂದ || ೪ || ಎಲ್ಲ | ಕಾರಣದ ಗುರುವರನೆ ಬೇಕೆಂದ | ಆವ ದೇವ ಗುರುವು ಅಪಾರ ಮಹಿಮನು ವಿಹಿತನವನೆಂದ | ಆ ಗುರುವಿನಿಂದ ಘೋರ ಭವ ದುರಿತಗಳು ಹರವೆಂದ ಅರಿದಾತನಿಂದ | ಆರು ಲಿಂಗವ ಮೂರು ಮಾಡಿ ಮೂರು ಲಿಂಗವನೊಂದುಗೂಡಿ | ಸೇರಿ ನೀನಾಸ್ಥಲದಿ ಬೆಳಗೆಂದ ಘನ ಪದವಿದೆಂದ || ೫ || ಎಲ್ಲ | ತನ್ನ ತಾನೇ ತಿಳಿಯಬೇಕೆಂದ | ತಾ ತನ್ನ ತಿಳಿದರೆ ಭಿನ್ನ ಭಾವಗಳಳಿವುದದರಿಂದ | ನೀ ನಿನ್ನ ತಿಳಿವುದೆ | ಎನ್ನ ಮತವಿದು | ಇದೆಯೆ | ಘನವೆಂದ | ತಿಳಿದರಿವಿನಿಂದ | ಭಿನ್ನವಳಿಯುತೆ | ನಿನ್ನ ತಿಳಿದರೆ | ಚನ್ನ ಶ್ರೀಗುರುವಪ್ಪೆ ನೀನೆ | ನಿನ್ನ ಜನ್ಮಕ್ಕಿದೆಯೆ ಕಡೆ ಎಂದ | ನಿಜ ಪದವಿದೆಂದ || ೬ || ಎಂಟು ಪದಗಳ ಸೊಂಟ ಮುರಿ ಎಂದ | ವಣ ಪೊಂಟು ಮಾತಿನ | ಗಂಟುಗಳ್ಳರ ತಂಟೆ ಬೇಡೆಂದ | ನೀನಂಟಿಕೊಂಡರೆ ಗಂಟಕತ್ತರಿಸುವರು ತಿಳಿ ಎಂದ | ಮತಿಯಿರಲಿ ಎಂದ | ತುಂಟರೈವರ ಸೆರೆಯೊಳಿರುಸತೆ | ಎಂಟು ಅಕ್ಷರಗಳನ್ನು ಪಠಿಸುತೆ | ಕಂಟಕೊಬ್ಬನ ಕಳೆದು ನಡೆ ಎಂದ ನಿರ್ಗುಣವಿದೆಂದ || ೬

|| ಎಲ್ಲ | ಮರವೆ ದೋಷವು ಹರಿದುಹೋಯ್ತೆಂದ | ಅದನರಿಯೆ ನಿನ್ನಯ ಅರಿವೆ ಕಾರಣವಾಯ್ತು ತಿಳಿ ಎಂದ | ಆ ಅರಿವೆ ನೀನು ಬರಿದೆ ಭ್ರಮೆಯೊಳು ಭ್ರಮಿಸಬೇಡೆಂದ | ಕಟುವಾಕ್ಯದಿಂದಾ ಅರಿವಿಗಾಶ್ರಯಮಾದ ಶ್ರೀಗುರುವರನೆ ರೇಣುಕನೆನುತ | ತನ್ನೊಳು ಬೆರಸಿ ಮುಕ್ತಾಂಗನೆಯು ನೀನೆಂದ | ಗುರುಜ್ಞಾನಾನಂದಾ || ಪ || ಎಲ್ಲರಂತವನಲ್ಲೆ ಎನ್ನ ಗುರುವು ಬಲ್ಲಿದನೆ ಪ್ರಭುವು ||

**(೩ನೇ ತತ್ತ್ವ) ರಾಗ-ನಾದನಾಮಕ್ರಿಯೆ ಅದಿತಾಳ**

ಆಧಾರವ ಬಿಡಬೇಡಮ್ಮಿ | ಗುರುಪಾದದೊಳಗೆ | ಮನವಿರಲಮ್ಮಿ || ಸಾಧಿಪ ಮೋಹನ | ನಿನ್ನ ಕೆಡಿಸೆ ಅವನ್ಹಾದಿಗೆ | ನೀ ಹೋಗಬೇಡಮ್ಮಿ || ಅ.ಪ || ಆಧಾರ || ಹಿಂದೆ ಮಾಡಿದ ಪುಣ್ಯ ಫಲವಮ್ಮಿ | ಜ್ಞಾನಾನಂದದ ಸುಖವನು ಪಡೆದಮ್ಮಿ | ಮಂದಬುದ್ಧಿ ತರವಲ್ಲ ಕೇಳು | ನೀ ನೊಂದೂ ದುಃಖಿಪೆ ಇದ ತಿಳಿಯಮ್ಮಿ || ೧ || ಮಾರ್ಗತಪ್ಪಿ ನಡೆಬೇಡಮ್ಮಿ | ದುರ್ಮಾರ್ಗ ತನವು | ತರವಲ್ಲಮ್ಮಿ || ದುರ್ಗಿ ಬೆನಕವೆಂದೆರಡಿರೆ ಆ ಅಪವರ್ಗವು ದೊರಕದು ತಿಳಿಯಮ್ಮಿ || ೨ || ಜ್ಞಾನಶಕ್ತಿ ಎನಿಸಿದೆಯಮ್ಮಿ | ಹೀನಜನಕೆ ಬಹು ಕಣ್ಣುರಿಯಮ್ಮಿ | ಜ್ಞಾನಿಯ ಮತ ಮುಕ್ತಾಂಗಿಯ ಪಥವಿದು | ಸ್ವಾನುಭವಕೆ ಸಮ್ಮತವಮ್ಮಿ || ೩ || ಗುರು ಎಲ್ಲೆಲ್ಲಿಯು ತುಂಬಿಹನಮ್ಮಿ | ನಿನ್ನಲ್ಲಿಯುತಾ ನೆಲಸಿಹನಮ್ಮಿ | ನಾ ಬಲ್ಲೆನೆಂಬೊ ಹಮ್ಮುಳಿದರೆ ಯವನಿದ್ದಿಲ್ಲ ದಂತಾಗುವನಮ್ಮಿ || ೪ || ಅರಿವು ಇರ್ದಡೆ ಏನುಫಲವಮ್ಮಿ | ತಕ್ಕ ವಿರತಿಯು ಜೊತೆಯೊಳು ಬೇಕಮ್ಮಿ | ಎರಡೆಂಬುದಿಲ್ಲ ಗುರು ರೇಣುಕನೊಳು | ಅರಿವಿಗೆ ಶಿರವೇ ಫಣವಮ್ಮಿ || ೫ || ಆಧಾರವ ಬಿಡಬೇಡಮ್ಮಿ | ಗುರು ಪಾದದೊಳಗೆ ಮನವಿರಲಮ್ಮಿ ||

**ರಾಗ-ಧನ್ಯಾಸಿ; ತಾಳ-ಅಟ್ಟತಾಳ**

ಮನವೇ ಮರೆಯದಿರು ಗುರುವ | ನಮ್ಮ ಚಿನ್ಮಯನಾದ ರೇವಣಸಿದ್ಧ ಪ್ರಭುವ ||ಅ-ಪ|| ಘನಗುಣಭರಿತನಾಗಿಹನ | ಕ್ರೂರಮನಜನನ್ನ ಧ್ವಂಶವ ಮಾಡಿಟ್ಟವನ | ಮನುಮುನಿಗಳ ಮೀರಿದವನ | ದಿವ್ಯ ಘನತತ್ವ ಮಸಿ ವಾಕ್ಯಾರ್ಥವನೆ ಭೋದಿಪನ || ೧ || ಮನವೇ | ವೇದಗಳಿಗೂ ಅಂತರ್ಗತ ಪರವಾದಿ ಭೀಕರನಾಗಿ ಮೆರೆವ ಸಾಹಸನ | ಸಾಧುಶೇಖರನೆನಿಸಿದನ | ದಿವ್ಯಪಾದವೆಂದೆನಿಸುತ್ತೆ ಮೆರೆವ ಪಾವನನಾ || ೨ || ಮನವೇ | ವರ ರಂಭಾಪುರದಿ ನೆಲಸಿಹನ | ಮುಕ್ತಿ ತರುಣಿಯೊಡನೆ ಕೂಡಿ ನಲಿವ ಚಿದ್ಘನನಾ | ಗುರುವಿನ ಗುರುವೆನಿಸಿದನ ಸಣ್ಣ ತರಳ ಜ್ಞಾನಾನಂದ ಗುರುವ ನರುಹಿದನ || ೩ || ಮನವೇ ಮರೆಯದಿರು ಗುರುವ ||

**ರಾಗ-ಶಂಕರಾಭರಣ ಅಟ್ಟತಾಳ**

ಮರೆಯುವದೆಂದಿಗೋ ಶ್ರೀಗುರು ನಿನ್ನ ಮರೆಯುವದೆಂದಿಗೋ || ಅ-ಪ || ಮರೆವುದೆಂದಿಗೊ ನಿನ್ನ ಅರಿವಿತ್ತ ಪಾವನಚರಿತನಾಗಿಹ | ಶ್ರೀ ಮದ್ಗುರುವೇ ರೇವಣಸಿದ್ಧಾ || ೧ || ಮರೆ || ದುರಿತದೊಳಗೆ ಬಿದ್ದು ನರಳುತಿರ್ದಗೆ | ದಿವ್ಯ ಸ್ಥಿರಸುಖ ಪದವಿತ್ತಾ ಕರುಣಸಾಗರ ನಿನ್ನ || ೨ || ಮರೆ || ಗಣನೆಯಿಲ್ಲದೆನ್ನಾವ ಗುಣಗಳನೆಣಿಸದೇ | ಕ್ಷಣದಿ ಜ್ಞಾನವ ಪೇಳ್ದ ತ್ರಿಣಯ ನಿನ್ನಯ ಪದವ || ೩ || ಮರೆ || ಧರೆಯೊಳಧಿಕ ರಂಭಾಪುರದೊಳು ನೆಲಸುತೆ ತರಳ ಜ್ಞಾನಾನಂದಗರಿವಿತ್ತ ನಿನ್ನನ್ನು | ಮರೆಯುವದೆಂದಿಗೊ ||

**ರಾಗ-ಕಾನಡ ಆದಿತಾಳ**

ಗುರುರಾಯ ಸದ್ಗುರುರಾಯ || ತವ ಚರಣದ ಕರುಣವ ತೋರಯ್ಯಾ || ಅ.ಪ || ಮರೆದು ಬಂದೆನು ನರ ಜನುಮಕ್ಕೇ ಗುರಿಯಾದೆನು | ಜನಿ ಮರಣಕ್ಕೇ ಅರವಿತ್ತು ಪೊರೆವ ಭವತರಿವುದೆಕೆ | ಗುರು ರೇಣುಕ ನಿನ್ನ ಮೊರೆಹೊಕ್ಕೇ || ೧ || ಬಲ್ಲಿದರೆಂಬೊರ ನೋಡಿದೆನು || ಅವರಲ್ಲಿ ವಿಚಾರವ ಮಾಡಿದೆನು | ಸಲ್ಲದವರ ಬಿಟ್ಟರಸಿದೆನು | ಘನನಲ್ಲಾ ನಿನ್ನಯ ಪದ ಸೇರಿದೆನು || ೨ || ಪಿಡಿದಿಹುದೆನ್ನನು ಭವಶರಧೀ | ಕಡೆಯಗಾಲಕ್ಕೆ ಬಂದು ನೀದೊರದಿ || ಬಿಡಿಸುತೆ ಭವವನು ನೀ ದಯದೀ | ಕಡೆಹಾಯಿಸೊ ಕರುಣಾ ಶರಧಿ || ೩ || ತನ್ನನ್ನು ತಾತಿಳಿಯುವ ವಿಧವ ಮನ್ನಿಸಿ ಒರೆಯ್ಯೆ ಗುರುದೇವ | ಚನ್ನಿಗನೆಣಿಸದೆನ್ನವ ಗುಣವ ಸಂಪನ್ನಾ ಪೊರೆಯೊ ಪಿಡಿದೆನು ಪದವ || ೪ ||

ಕ್ಷಿತಿಯೊಳು ರಂಭಾಪುರಿ ವಾಸ | ಅಲ್ಲಿ ಯತಿಗಳ ಕೂಟವೆ ಕೈಲಾಸಪತಿಯೆ | ರೇವಣಸಿದ್ಧ ಕೊಡುವೆಸನಾಮತಿಯೊಳು | ಮಾಡುವ ತವಧ್ಯಾಸ || ೫ || ಗುರುರಾಯ | ಸದ್ಗುರುರಾಯ ತವ ಚರಣದ | ಕರುಣವ | ತೋರಯ್ಯಾ || ೬ ||

**ರಾಗ-ಕಾನಡ ಆದಿತಾಳ**

ನೆನೆ ಮನವೆ ನೀ ನೆನೆ ಮನವೇ | ಘನ ಗುರು ಪಾದವ | ಮರೆತಿರುವೇ ||ಅ-ಪ|| ನೆನೆ ಮನ || ಹುಟ್ಟಿಸಿದವ ತಾ ಹೊಣೆಗಾರ | ಸೃಷ್ಟಿಯ | ಪೊರೆವನು ಘನ ಧೀರಾ || ನಿಷ್ಠೆಯೊಳಿರೆ ನಿನಗಿಷ್ಟದ | ವಸ್ತುವ ಕಟ್ಟಿ ತಂದು | ಕೊಡುವನು | ಗುರು ವೀರ || ೧ || ನೆನೆಮ || ಭವರೋಗಕೆ ಇವ | ಘನವೈದ್ಯಾ | ಭುವನಗಧಿಕ | ರೇಣುಕಾರಾಧ್ಯ | ತವ ಪಾದವೆ ಗತಿ ಎಂದು | ನಂಬಿದವರಿಗೆ | ಭುವಿಯೊಳು | ಮುಕುತಿಯ | ರಾಜ್ಯವೆ ಸಾಧ್ಯಾ || ಪ || ನೆನೆ || ಅರಿವೆಂಬುದೆ ಘನ ಸಿರಿ ನಿನಗೇ | ಮರೆಯೆ ದುಃಖ | ಇಹಪರದೊಳಗೆ || ಗುರು ರೇಣುಕ ನಡಿ ಕೃಪೆ | ನಿನಗೊದಗಲು || ಅರಿಯೆನಿದಕೆ | ಸಮ ಧರೆಯೊಳಗೆ || ೩ || ಪ || ನೆನೆ ಮನವೇ | ನೀ ನೆನೆ ಮನವೇ | ಘನ ಗುರು | ಪಾದವ ಮರೆತಿರುವೇ ||

**ರಾಗ-ನಾದನಾಮಕ್ರಿಯೆ ಅಟ್ಟತಾಳ**

ಶ್ರೀಗುರುವಿನ ಪಾದ | ಪೂಜೆ ಮಾಡುವ ಜ್ಞಾನಾ || ಯೋಗಿಣಿಯರೆ ಬನ್ನಿ ಮುದದಿಂದ

|| ಅ-ಪ || ಶ್ರೀಗುರು || ವರನಿರ್ಮಲೋದಕದಲಿಮಿಂದು | ಭಸಿತಾವ ಧರಿಸುತ್ತೇ | ವಿಧಿಯಿಂದ ಷಡ್ಲಿಂಗಕೇ | ಉರುತರದಿಷ್ಟಾಪ್ರಾಣವು ಭಾವವನು ಕೂಡಿ ತ್ವರಿತದಿಂದಲಿ ಶಿವಪೂಜೆಯ ಮುಗಿಸುತ್ತೆ || ೧ || ಶ್ರೀಗುರು || ಗುರುಪಾದಕಗ್ಗಣಿ ಅರಿಶಿನ ವಿಭೂತಿ | ವರಗಂಧ | ಕುಂಕುಮ ಪತ್ರೇ | ಅಕ್ಷತೆಯಾ ಪರಿಮಳಮಾದ | ದೂಪವ | ಕೊಂಡು | ನಮ್ಮ ಶ್ರೀ ಗುರುಪಾದ ದೆಡೆಗೆ ಸಂತಸದಿಂದಾಗಮಿಸುತ್ತೇ || ೨ || ಧರೆಯೊಳಧಿಕ ರಂಭಾಪುರದೊಳು ನೆಲಸಿಹ ಪರಮಸದ್ಗುರು ರೇಣುಕರ ಪಾದಕ್ಕೆ || ಗುರುಮಂತ್ರದಿಂದಷ್ಟವಿಧ ಅರ್ಚನೆಯ | ಮಾಡಿ | ಸಿರಸಹಿತಲಿ ವಂದನೆಗಳನರ್ಪಿಸುತೆ || ೩ || ಶ್ರೀಗುರುವಿನ ಪಾದಪೂಜೆ ಮಾಡುವ | ಜ್ಞಾನಾ ||

**ರಾಗ-ತಾಳ ಆದಿತಾಳ**

ಜ್ಞಾನೀಯ ಲಕ್ಷಣವಿಂತಿರಬೇಕು | ಅಜ್ಞಾನವ | ಸುಟ್ಟು | ಬೂದಿಯ ಮಾಡಿದ || ಅ-ಪ || ಜ್ಞಾನ || ಮಾತಿನೊಳಗೆ ಮಾತಾಡಲಿ ಬೇಕು | ಖ್ಯಾತಿ ಘಟದಿ ಮಠಮಾಡಿರಬೇಕು | ಜ್ಯೋತಿಯೊಳಗೆ ಜ್ಯೋತಿ ಬೆಳಗಬೇಕು | ಗುರುನಾಥನ ಓದೊಳಗೋದಲಿಬೇಕು || ೧ || ಕಾರಣಜ್ಯೋತಿಯ ನೋಡಬೇಕು | ಮಹಕಾರಣವೆ ತಾನಾಗಿರಬೇಕು | ತೋರುವುದೆಲ್ಲ ತಾನೆಯಾಗಿ ತಾ ಬೇರೆ ಸಾಕ್ಷಿಕನಂತಿರಬೇಕು || ೨ || ಹೊರಗಿನ ಮಾಯೆಯ ಮುರಿಯಬೇಕು | ತನ್ನೊಳಗಿನ ಮಾಯೆಯನರುಹಿರಬೇಕು | ಮರವೆಯ ಮೂಲವ ಮುರಿತು ತನ್ನ ಅಂತರವನು ತಾನೇ ತಿಳಿದಿರಬೇಕು || ೩ || ಅರಿವು ಎಂಬುದನರಿಯಬೇಕು ಆ ಆರಿವೆ ಮೂರುವಿಧವೆಂದರಿಯಬೇಕು | ಅರಿವು ಭ್ರಾಂತಿ ಬರಿಯರಿವು ತನ್ನ ನಿಜದರಿವನ್ನರಿವನೆ ತಾನೆನಬೇಕು || ೪ || ವರರಂಭಾಪುರಿ ಸೇರಲಿಬೇಕು | ಘನಶಿವಾಯ ಎನುತಿರಬೇಕು | ವರಗುರು ರೇವಣಸಿದ್ಧನ ಪಾದದಿ ಬೆರಸಿ ಮನವ ಸ್ಥಿರಗೊಳಿಸಿರಬೇಕು || ೫ ||

**ರಾಗ-ತಾಳ-ಅಟ್ಟತಾಳ**

ಮಾಡುಗುರು ಪದ | ಪೂಜೆ ಮುದದಿಂದ | ಹೇ ಮಂಕು ಮನವೆ ಪ || ೧ || ಕೂಡಿ ಶರಣ ರೊಳಾಡಿ | ಗುರುಪದ | ನೋಡಿ ಸುಕೃತವ ಬೇಡಿ ಪಾವನ ಮಾಡಿ | ಜನ್ಮವ ಸೌಖ್ಯದೊಳು || ಮುಳುಗಾಡಿ ಆನಂದದೊಳು ಮನವೇ || ೨ || ಪ || ಮಾಡು || ದುರಿತಹರಗುರು ವರನ | ಸೇರುತ್ತೇ || ತತ್ವಾರ್ಥವರಿತು ಭರದಿ ಸಾಂಖ್ಯ ವಿಚಾರ ಮುಗಿಸುತ್ತೇ || ಪರಮಗುರು | ಆಚಾರ ಜಂಗಮ ಮೆರೆವ ಶಿವ ಪ್ರಸಾದವಲ್ಲದೆ | ಉರು ಮಹಾಲಿಂಗದಲಿ ಹರತಾ ಬೆರೆದಿರುವ ಪರಿಯರಿತು ಮನವೇ || ೩ || ಪ || ಮಾ || ಕಾಯದಲಿ ಗುರುಸೇವೆ ಮಾಡುತ್ತೆ | ಸಾರ್ಪದವು

ನಿನ್ನಯ | ಜಿಹ್ವೆಯಲಿ | ಗುರುಮಂತ್ರ ಜಪಿಸುತ್ತೇ || ಕಾಯಕರಣ ಸಜ್ಜೆ ಮಾಡಿ ಜೀವಕಾಯವ ಲಿಂಗ ಮಾಡಿ | ಭಾವ ಪುಷ್ಪದಿ ಪೂಜೆ ಮಾಡಿ || ದೇವರೇ ನೀನಾಗಿ | ಮನಮನವೇ || ೪ || ಪ || ಮಾಡು ಧರೆಯೊಳ್ರಂಭಾಪುರವ ಸೇರುತ್ತೇ | ಮತ್ಸರಕೆ ಒಮ್ಮೆ ಪರಮ ಗುರು ಶರಣರೊಳು ನಲಿಯುತ್ತೇ | ಘನ ಶಿವಾಯ ಓಂ ಘನ ಶಿವಾಯ | ಓನ್ನಮೊ ಘನ ಶಿವಾಯ | ಪರಮ ಪಾವನ ರೇಣುಕ ಗುರುವರ್ಯ ಪಾಹಿ ಮಮೆನುತ | ಮನವೇ || ೫ || ಪ || ಮಾಡುಗುರುಪದ || ಪೂಜೆ ಮುದದಿಂದ ||

**(೧೦ನೇ ತತ್ವ) ರಾಗ-ತಾಳ-ಅಟ್ಟತಾಳ**

ನಿನ್ನೊಳಗೆ ನೀ ತಿಳಿವುದೆಲೆ | ಮನವೇ ಮರೆದಿಹುದು ತರವೇ || ಪ || || ಆ || | | ೧ || ನಿನ್ನ ತಿಳಿ ಮರದೀ | ಪ್ರಪಂಚವ ನಿನ್ನ ತಿಳಿದಡೆ ನಿನಗು ದೈವಕು | ಭಿನ್ನವೆಂಬುದಿಲ್ಲ. ವದರಿಂ ದೆನ್ನ ಮಾತಮಾತನು ನಂಬಿ ಧೃಡದಿಂ || ೨ || || ಪ || ನಿನ್ನೊಳಗೆ || ನೂತನದ ಮಾತಲ್ಲ ಪೇಳುವದು | ಈ ಆತ್ಮ ನಗರಕೆ ನೀತಿ ಕೋವಿದರಾಜ ನೀನಹುದು | ಪಾತಕಕೆ ನೀಕ್ಕೈಯ್ಯ | ಹಚ್ಚಲು ಜ್ಞಾತಿಮೋಹನ ನಿನ್ನ | ರಾಜ್ಯವ | ಘಾತ ಕತ್ವದಿ | ಕಸಿದು ಕೊಂಬುವರ್ | ಪ್ರೀತಿಯಿಂದೀ ಮಾತಲಾಲಿಸಿ || ೩ || || ಪ || ನಿನ್ನೊಳ || ಇದ್ದ ಮಾತಿದ್ದಂತೆ ಪೇಳುವೆನು || ಶ್ರೀಗುರುವು ರೇವಣಸಿದ್ಧತಾ ಪೇಳಿಹ | ವಿಚಾರವನು | ಶ್ರದ್ಧೆಯೇ | ಖುತು ಆ ಮಹಾಘನ | ಬದ್ಧ ಮಾದುಪದೇಶ | ವೀರ್ಯವು | ಶುದ್ಧ ಜ್ಞಾನವೆ | ಗರ್ಭ ಪುಟ್ಟಿದ | ಮುದ್ದು ಭಶಿಶು | ಆನಂದವೆಂಬುದ | | ೪ || ಪ || ನಿನ್ನೊ || ಹಂಬಲಿಸಿ. ಸ್ವೇಚ್ಛೆಯಲಿ | ನಡೆಬೇಡ | ಗುರುವರನ | ದಿವ್ಯ ಪದಾಂಬುಜವ | ನೆನೆಯದಲೆ | ಕೆಡಬೇಡ | ನಂಬಿದವರನು | ಪೊರೆವೆ | ನಾನೆಂತೆಂಬ | ಬಿರುದನು | ಧರಿಸಿ-ಮೆರೆಯುವ | ಕುಂಭಿಣಿ ಪತಿಯಾದ | ಶ್ರೀಗುರುವೆಂಬ ಘನ ರಂಭಾಪುರೀಶನ || ೫ || ನಿನ್ನೊಳಗೆ ನೀ ತಿಳಿವುದೆಲೆಮನವೇ ||

**ರಾಗ-ತಾಳ-ಅಟ್ಟತಾಳ**

ಗುರುರಾಯನೊಲಿದ | ಮೇಲಮ್ಮ | ಈ ಧರಣಿಯ | ಭ್ರಮಣೆಗಳಿರ ಬಾರದಮ್ಮ || ಪ || || ೧ || ಗುರುರಾಯ || ಹಿಂದಣ ಸುಕೃತವಿದಮ್ಮ | ಗುರು ಬಂದು | ತನ್ನಂತೆನ್ನ ಗೈದ ಕಾಣಮ್ಮ | ಬಂಧನ ಹರವಾಯಿತಮ್ಮ | ಮುಕ್ತಿಯೊಂದೆ | ಸಾಕಿನ್ನೇನು | ಬೇಡಕಾಣಮ್ಮ || ೨ || ಗುರು || ನುಡಿದಂತೆ | ನಡೆಯಬೇಕಮ್ಮ | ಬಲು ಧೃಡ ಚಿತ್ತ ವಿರಬೇಕು | ಮನದೊಳಗಮ್ಮ | ನುಡಿಯೊಳೊಂಚಿಸ | ಬಾರದಮ್ಮ | ಈ ಒಡಲಿಗೆ ಕಡುಕಷ್ಟ | ಕೊಡರುವದಮ್ಮ || ೩ || || ಗುರು || ರಂಭಾಪುರದೊಳಿಹನಮ್ಮ | ಈ ಕಂಭಿಣಿ ಪೊರೆವ ರೇಣುಕ ನಿವನಮ್ಮ | ನಂಬಿದವರ | ಪ್ರೀಯನಮ್ಮ | ಗುರುವೆಂಬುರೊಳಗಿವ | ನಗ್ರೇಶನಮ್ಮ | ಗುರುರಾಯನೊಲಿದಮೇಲಮ್ಮ ||

**ರಾಗ-ತಾಳ-ಅಟ್ಟತಾಳ**

ಎಂತಹ ಪುರುಷ ದೊರಕಿದನಮ್ಮ | ಎನ್ನ ಚಿಂತೆಗಳೆಲ್ಲ | ಬೈಲಾದವಮ್ಮ || ಪ || ಎಂತಪುರುಷ || ಮುಕ್ತಿಕಾಂತನೆನಿಸಿ ಮೆರೆವಂತೆ ಸದ್ಗುರುವೆನ್ನ ಅಂತರಂಗದಿ ನಿಂತ || ೧ || ವರಹಂಸಕಲ್ಪವ ನೇರಿಸಿದ | ಬ್ರಹ್ಮಪುರದೊಳುಯ್ಯಾಲೆಯ ನಾಡಿಸಿದ ನೆರೆಸೂಕ್ಷ್ಮದ್ವಾರವ ತಾತೆರೆದ ಅಲ್ಲಿ ಪರವಸ್ತು ನೀನಾಗೆಂದನು ತೊರೆದ || ೨ || ಎಂತ || ಎರಡು ಕಣ್ಗಳನೊಂದು ಮಾಡಿದನೆ ಅಲ್ಲಿ ಗುರು ಮಹಲಿಂಗಕ್ಕೇ ಗುರಿಯಿತ್ತನೆ ಅರಿ ನೀನು | ಅದೆ ನಾನೆಂದರಿವಿತ್ತನೆ | ಮುಕ್ತಿತರುಣಿ ನೀನೆಂದು ತನ್ನೊಳ್ಬೆರಸಿದನೆ || ೩ || ಎಂತ || ಕೊಲ್ಲಿಪಾಕಿಯಿಂ | ತಾನೈದಿದ || ರಂಭಾಪುರದೊಳ್ವೀರ | ಪೀಠ ಸ್ಥಾಪಿಸಿದ ಗುರುವರ | ಎನಗಾಗಿ ಚಿತ್ತೈಸಿದ | ತನ್ನ ವರಜ್ಞಾನ | ಮುದ್ರೆಯ ಕರುಣಿಸಿದ || ೪ || ಎಂತ ಪುರುಷ ದೊರಕಿದನಮ್ಮ ||

**ರಾಗ-ತಾಳ-ಅಟ್ಟತಾಳ**

ಗುರುಬಿಟ್ಟನ್ನಿರಲಾರೆನೆ || ಸಂಜೀವಸದ್ಗುರು ಬಿಟ್ಟನ್ನಿರಲಾರೆನೆ || ಪ || ಗುರು ಬಿಟ್ಟಿರಲು ಮುಂದೆ ನರಕಾವು ತಪ್ಪದು | ಪರಮ ಪಾವನನಾದ ವರ ಜ್ಞಾನಾನಂದ ಶ್ರೀ || ೧ || ತನ್ನ ರೂಪವ ನೋಡೆಂದ | ತೋರುತಲೆನ್ನ ಭಿನ್ನ ಭಾವನೆಯ ಕೊಂದ | ಮುನ್ನಿ ಜಗಚ್ಛಾಯವನ್ನೆಲ್ಲ ಬೆಳಗಿಪ ಚಿನ್ಮಯ ಪಾದವ ಹೃದಯದೊಳಿರಿಸೆಂದ || ೨ || ಭೇದವಾದವ ಬಿಡಿಸಿದ | ಸತ್ಯದಿ ಮೋದವಾದ ಬ್ರಹ್ಮವ

ತೋರಿದ | ಆದಿ ಅಂತ್ಯಗಳನ್ನೇ ಶೋಧಿಸಿ ತತ್ವದ ಹಾದಿಯನರುಪಿದ ವೇದಮೂರ್ತಿಯಾದ || ೩ || ನೆನಸಿದಾಗಲೆ ಬರುವ ಸದ್ಭಕ್ತರ ಮನದೊಳು ನೆಲಸಿರುವ | ಕನಸಿನಲ್ಲಿಯು ಬಂದು ಕರುಣ ರಸವ ಬೀರಿ ಘನ ಕೃಪೆ ದೋರುವ | ಚಿನುಮಯಾತ್ಮಕನಾದ || ೪ || ಆರು ಲಿಂಗವ ತೋರಿದ | ಆರನು ಕೂಡಿ ಮೂರು ಲಿಂಗವ ಮಾಡಿದ || ಮೂರು ತಾನೊಂದಾದ ದಾರಿಯ ತೋರಿಸಿ | ವೀರ ಶ್ರೀಗುರು ಪದದಿ ಸೇರಿ ನೀ ಸುಖ ಸೆಂದ || ೫ || ಗುರುರೇವ ನೊರ ಪುತ್ರನ | ಸಂಜೀವ ಸದ್ಗುರುವೆಂದು ಮೆರೆಯುವನ ಕರುಣಾದಿ ಭಕ್ತರ ಕರೆದು | ಜ್ಞಾನವ ಪೇಳಿ ವರಮೋಕ್ಷ ಕೊಡುವಂತ ಪರಮ ದಯಾಳು ಶ್ರೀ || ಪ || ಗುರು ಬಿಟ್ಟನ್ನಿರಲಾರೆನೆ.

**ರಾಗ-ತಾಳ-ಅಟ್ಟತಾಳ**

ಬಿಡದಿರು ಎನ್ನ ಕೈಯ್ಯ ಶ್ರೀಗುರುರಾಯ || ಪ || ಬಿಡದಿರೆನ್ನಯ ಕೈಯ್ಯ || ಬೇಡಿಕೊಂಬೆನು ಜೀಯ ಕೊಡು ಕೊಡು ಕೊಡು ಗುರುವೆ | ಕೊಡು ದಿವ್ಯ ಮತಿಯ || ೧ || ಜನಿಮರಣದ ದುಃಖವ | ತಾಳಲು ಕಷ್ಟ ಜನನಿ ಗರ್ಭ ನಿವಾಸವ || ನೆನಸಿಕೊಂಡೆಡೆ ಎನ್ನ ತನುವು ತಲ್ಲಣಿಪುದು | ಘನ ಮಹಿಮನೆ ಎನ್ನ ಜನನವನ್ಹರಿಸೈಯ್ಯ || ೨ || ಘೋರ ಪಾತಕಸಂಹಾರ | ಹೃದಯೇಶ್ವರ | ವೀರತ್ರೈಜಗದೋದ್ಧಾರ | ಕಾರುಣ್ಯನಿಧಿ ಕಾರ್ಯಕಾರಣ ಮೂರ್ತಿಯೆ | ವೀರ ಗುರುವೆ ನೀ ಮೈದೋರಿ ಪಾಲಿಸೊ ಪ್ರಿಯ || ೩ || ಧರೆಯೊಳ್ರಂಭಾಪುರಿಯಾ | ಸದ್ಗುರುವಾದ | ಗುರು ರೇಣುಕನೆ ನಿನ್ನಯ | ಚರಣವಲ್ಲದೆ ಬೇರೊಂದರಿಯೆ | ನೀನರಿಯೆಯಾ | ಕರುಣಿ ನಿನೊರೆಂತೆಮ್ಮನ್ನ ಪೊರೆವರಾರೆನ್ನಾರ್ಯ|| ಪ || ಬಿಡದಿರು ||

**ರಾಗ-ತಾಳ-ಅಟ್ಟತಾಳ**

ಗುರುಮಾರ್ಗ ಪಿಡಿದ ಮೇಲೆ ಪತಿವ್ರತವೆಂಬ ಬಿರುದ ಸಾಧಿಸಲೇಬೇಕು || ೧ || ಪರಪತಿಯ ಆಜ್ಞೆಯೊಳು ತನ್ನನ್ನರಿತು ಪಾವನವಾದ ಜನ್ಮವೆ ದುರುಳ ವೇದಾಂತಿಗಳ ಮಾರ್ಗಕೆ | ಹರಿಯಗೊಡದೆಲೆ ಹೀನಮನವ || ೨ || ಗುರುಮಾರ್ಗ ಗುರುಪೇಳಿದಂದದಲಿ | ಪತಿಸೇವೆಯ ಮರೆಯದಂದದಿ ನಡೆಸುತೆ ವಿರತಿ ಭಕ್ತಿಯು ಜ್ಞಾನಶಾಂತಿಯು | ಪರಮ ಪ್ರೀತಿಯೊಳೊಂದನಾದರು ತೊರೆಯದಂದದಿ ನಿರತರೆನಿಸುತೆ | ಶರಣಜನರೆಂದೆನಿಸಿಕೊಳುತಲಿ || ೩ || ತರಿಯು ತ್ತಷ್ಟಮದಂಗಳ ಷಡ್ವರ್ಗಗಳ ತರಿದಿಟ್ಟೆ ಅನಿಷ್ಟೆಗಳ | ಕರಣ ಮೂರರ ಶುದ್ಧಿಯಿಂದಲಿ ಉರುವ ಸಿದ್ಧಿಯ ಪಡೆದು ಮರ್ತ್ಯದ | ನರರ ತಾಪವ ಹರಿವ ಶಕ್ತಿಯ ಗುರುವರನ ಚರಣದಲಿ | ಪಡೆಯುತಲಿ ಮನವೇ || ೪ || ಗುರು ಮಾರ್ಗ ಮಾನಾಭಿಮಾನಂಗಳ ಸದ್ಗುರು ನಿನ್ನಧೀನವೆಂದವಗೊಪ್ಪಿಸಿ | ಸ್ನಾನ ಜಪ ತಪ ಮೌನ ನುತಿ ಸಂಧಾನವೆಲ್ಲವು ಪರಮಗುರುವಿನ | ಧ್ಯಾನ ಒಂದನ್ನರಿತು | ಸಮ್ಯಜ್ಞಾನವನು ಪಡೆದಿರ್ಪ ಮನವೇ || ೫ || ಗುರುವರ್ಯ ನುಪದೇಶದಿ ಅರಿಯದೆ ಗೈದ ದುರಿತವೆಲ್ಲವು ಪೋದವು || ಅರಿದರಿದು ತಾ ಗೈದ ಪಾಪವು | ಎರಕವಾಗುತೆ | ನರಕಕೆಳೆವುದು | ಮೆರೆಮೆರೆವ | ಮಹಿಮೆಯು ಮಾಯ ವಪ್ಪುದು | ಕೊರತೆಗಳು ತಾ ತಪ್ಪವದರಿಂ || ೬ || ವರ ಹೃತ್ಕಮಲಮಧ್ಯದಿ ರಂಭಾಪುರೀ ಗುರು ರೇಣುಕರ ಪೂಜಿಸಿ | ಪರಮಜ್ಞಾನವ ನೊರೆದ ಶ್ರೀಗುರುವರನೆ || ನಿನ್ನಯ ಚರಣಕಮಲವ ಮರೆಯದಂದದಿ ಮತಿಯ ಕರುಣಿಸಿ ಪೊರೆಯೆನುತ ಬೇಡುತಲಿ ಮನವೇ || ೭ || ಗುರು ಮಾರ್ಗವಿಡಿದಮೇಲೆ ||

**ರಾಗ-ತಾಳ-ಅಟ್ಟತಾಳ**

ಜ್ಞಾನಶಕ್ತಿಯೆ ಕೇಳ್ದೆಯಾ | ಶ್ರೀಗುರುವರನ ಜ್ಞಾನಾನಂದದ ಬೋಧೆಯ || ಜ್ಞಾನಶಕ್ತಿಯೆ ಕೇಳಿದಿಯಾ | ತಾನೇ ತನ್ನರಿವ ಸುಜ್ಞಾನವೆಂಬುವ ಆ ಮಹಾಘನ ಸ್ವಾನುಭಾವವನೊರೆದಪರಿಯ || ೧ || ವರ ನಿರ್ಮಲೋದಕದಿ ಮಜ್ಜನಗೈದು ತರುಣಿಯೆ ಭಸಿತವಿಡೆ | ಪರಮಗುರು ಆಚಾರ ಜಂಗಮ ಮೆರೆವ ಶಿವಪ್ರಸಾದ ಲಿಂಗಕೆ ಧರಿಸಿ ಗುರು ಮಹಲಿಂಗ ಕರ್ಚಿಪ ಪರಿಯ ಸಾಂಗದೊಳೊರೆದ ಪರಿಯ || ೨ || ಜೀವ ಭ್ರಾಂತಿಯ ಬಿಡಿಸೆ ಈ ಜನ್ಮಕ್ಕೆ ವಿದೇಹಮುಕ್ತಿಯು ಎನ್ನಿಸೆ | ಜೀವ ಪರಮನೊಳೈಕ್ಯ ಮತ್ತಾ ಜೀವಶಿವನೊಳಗೈಕ್ಯವಲ್ಲದೆ | ಜೀವಬ್ರಹ್ಮನೊಳೈಕ್ಯವೆಂಬುವ ಭಾವವನು ತಾನೊರೆದ ಪರಿಯ || ೩ || ಧರೆಯೊಳ್ರಂಭಾಪುರಿಯ ಸದ್ಗುರುವಾದ ಗುರು ರೇಣುಕರ ಕೃಪೆಯ ಅರಿವೆ ಗುರು | ವಾಚಾರ್ಯ ಶಿಷ್ಯನು ವರ ಮನವ ಲಯ ಮಾಡೆ ಜ್ಞಾನವು ನಿರುತ ನಾನಿಹೆನೆಂಬ ಮತಿಯ | ಉರುವ ಮೋಕ್ಷ ವಿಧಾನ ಪರಿಯ || ಜ್ಞಾನಶಕ್ತಿಯೆ ಕೇಳ್ದೆಯಾ ||

**ರಾಗ-ತಾಳ-ಅಟ್ಟತಾಳ**

ಪ್ರೀತಿ ಇದೆ ಜೀವನ ಜ್ಯೋತಿ | ಸದ್ಗುರುವಿನ ಮೇಲಣ ಪ್ರೀತಿ || ಇದೆ ಜೀವನ ಜ್ಯೋತಿ || ಪ || ಪಾತಕರಾಶಿಯ ತರಿದಿಡೆ ಶ್ರೀಗುರುನಾಥನ | ಮನದೊಳು ಮರೆಯದೆ ಪಠಿಸುವ || ೧ || ಪ್ರೀತಿ ಮರೆದು ತನ್ನನೆ ನರನೆನಿಸಿರಲು ವರ ಪುಣ್ಯ ಬಲದಿ ಪರಮಸದ್ಗುರು ವರದರುಶನ ಕೊಡಲು ಚರಣಂ ಗಳಿಗೆರಗಿ | ದುರಿತಾರ್ರೀ ಶ್ರೀಗುರು ಪೊರೆ ಎಂದೆನಲು ಅರುಹಿ | ತ್ರಿವಿಧದಿಂ ತನ್ನಂತೆಸಗುತೆ | ಗುರುಣಾಂ ಗುರುವೆಂದೊರೆದ ಶ್ರೀಗುರುವಿನ || ೨ || ಅದು ನೀನೇ ನೀನೇ ಅದು ಎನ್ನುತಲಿ ಘನತತ್ವಮಸಿಯು ವದರಾಲು | ಆ ಘನ ಸಾಮವೇದದಲಿ ವರ ರಾಜಯೋಗದ ವಿಧಿಯೇ ಇದ ನೀ ನೋಡೆನ್ನುತಲಿ || ಮುದದಿಂ ಗುರುಶ್ರುತಿ ಸ್ವಾನುಭವಕೆ ತಂದು | ಸದಮಲಜ್ಞಾನವ ವಿಧಿಸಿದ ಗುರುವಿನ || ೩ || ಅರಿವೇ ಗುರುವಲ್ಲದೆ ಬೇರೇನಿಹುದು ಈ ಧರೆಯೋಳ್ ಸಚರಾಚರದೊಳ್ ತಾ ತುಂಬಿತುಳುಕುತಿಹುದು | ಆ ಅರುವಿನ ಬಲದಿ ಧರೆಯೋಳ್ | ಈ ಸರ್ವವು | ಬೆಳಗುತಿಹುದು | ಅರಿವ ನರಿವ ನಿಜದರಿವನೆ | ತಾನೆಂದರುಹಿದ | ಶ್ರೀಮದ್ಗುರು ರೇಣುಕನೊಳು | ಪ್ರೀತಿ ಇದೇ ಜೀವನ ಜ್ಯೋತಿ || ೪ ||

**ರಾಗ-ತಾಳ-ಅಟ್ಟತಾಳ**

ಕೆಡುತೀ ನೀ ಕೆಡುತೀ | ಕೆಡುತಿ ಕೆಡುತಿ ನೀ ಕೆಟ್ಟ ಗರತೀ || ಅ-ಪ || ಛಾಯದ ಮಂತ್ರವ ಮಾಯದಿ ಬೀರುತಿ | ಇಹದ ಸುಖಕೆ ನೀ ಕಂಗೆಡುತೀ | ಕಾಯವ ಕೆಡಿಸಿ ನೀ ಬಾಯ್ಬಾಯ್ ಬಿಡುತೀ || ೧ || ಪರಮ ಪ್ರಸಾದವೆ | ಎನಗಾಗಿದೆ ಎನ್ನುತೀ | ತಿರುಪೆಯ ಗುರುವೆಂದುರುತರ ದೂರುತಿ | ಮರಳಿ ಪ್ರಸಾದಕೆ ಕರ | ಜೋಡಿಸುತೀ || ೨ || ಗಣನೆಗೆ ಬಾರದ ಮಣಿ ಮಾತಾಡುತಿ | ಅಣಕಿಸಿ ಶರಣರ ನಡತೆಯ ದೂರುತಿ | ಇನಯ ರೇಣುಕ ನಿನಗೊಲಿವನೆ ಗರತೀ || ೩ || ಕೆಡುತೀ ನೀ ಕೇಡುತೀ ||

**ರಾಗ-ತಾಳ-ಅಟ್ಟತಾಳ**

ಘನ ಪಂಚಾಕ್ಷರಿ ಮಂತ್ರ ಸದ್ಗುರು | ಪುತ್ರರಿಗಿದು ಜಪಸೂತ್ರ || ಪ || ಅರಿತರೆ ಗುರುಮುಖದಿಂದಿದರರ್ಥವ ತಿಳಿದರೆ ಪರತರ ಮುಕ್ತಿ | ಸ್ವತಂತ್ರ || ೧ || ಘನ || ವೇದಗಳಿಗೆ ಇದು ಮೂಲ | ಪರವಾದಿಗಳಿಗೆ ಎದೆ ಶೂಲ || ಸಾಧಿಸಲಿದರರ್ಥಂಗಳ ಸಾಂಗದಿ | ಮೇದಿನಿಯೊಳು ಸುಖಲೋಲಾ || ೨ || ಅಷ್ಟಾಕ್ಷರಿಗೆ ಸಹಾಯ ಘನ ಶ್ರೇಷ್ಠ ಮುಕ್ತಿಗುಪಾಯ || ಅಷ್ಟಾಕ್ಷರಿ ಗುಟ್ಟೈದು ವಿಧಂಗಳ | ನಿಷ್ಠೆಯೊಳರಿದಡೆ ಅವ ಗುರುರಾಯ || ೩ || ಘನ || ಮರವೆಯ ಮೂಲವ ಸುಟ್ಟು | ಸದ್ಗುರು ಪಾದದಿ ಮನವಿಟ್ಟು || ಸ್ಮರಿಸೆಲೊ | ಘರ್ವವ ಬಿಟ್ಟಿದು | ನಮ್ಮಯ || ಗುರು ರೇಣುಕರ | ಗುಟ್ಟು || ಪ || ಘನ ಪಂಚಾಕ್ಷರಿಮಂತ್ರ ಸದ್ಗುರು ಪುತ್ರರಿಗಿದು ಜಪಸೂತ್ರ ||

**ರಾಗ-ತಾಳ-ಅಟ್ಟತಾಳ**

ಕಂಡೆನಮ್ಮ ಕಣ್ಣಿನಲ್ಲಿ ಕಾರಣಾತ್ಮನ | ಭೂಮಂಡಲವ ಬೆಳಗಿಪ ಅಖಂಡ ತೇಜನ ನಾನು

|| ಪ-೧ || ಕಂಡೆನ | ಬಣ್ಣವೇಳ ದಾಂಟಿತೋರ್ಪ ಸಣ್ಣ ದ್ವಾರವನ್ನೇ ಪೊಕ್ಕು | ಕಣ್ಣಿಗೆ ಕಣ್ಣಾದ ಜ್ಞಾನಗಣ್ಣ ತೆರೆಯುತೇ ನಾನು || ೨ || ಕಂಡೆ | ಪರಮ ಜೀವರ ಪರಿಯ | ತಿಳಿದೆ ತುರಿಯ ಬ್ರಹ್ಮಾವೆಂಬುಭಯವರಿದೆ || ಮರವೆ ಎಂಬುದು ಮುರಿದು | ಅರಿವಿನ ಕುರುಹ ಕಂಡೆ ನಾನು || ೩ || ನಂಬಿದವರ ಪೊರೆಯುವೆನೆಂತೆಂಬ ಬಿರುದ ಧರಿಸಿ ಮೆರೆವ | ರಂಭಾಪುರವರನಾ || ೪ || ಕಂಡೆನಮ್ಮ ಕಣ್ಣಿನಲ್ಲಿ ಕಾರಣಾತ್ಮನಾ ||

**ರಾಗ-ತಾಳ-ಆದಿತಾಳ**

ಭಜಿಸೆಲೊ ಘನ ಪಂಚಾಕ್ಷರಿಯ | ನಿಜಗುಣ ಜ್ಞಾನದ ಗುರು ಸಿರಿಯ || ಪ || ಉತ್ತಮ ಮಾರ್ಗವ ತೋರುವದು | ಘನ ತತ್ವ ಮಸಿಯ ಮಹಾ ವಾಕ್ಯವಿದು || ೧ || ಚಿತ್ತಕೆ ಶಾಂತಿಯ ನೀಡುವುದು | ಅದು ನಿತ್ಯದ ಮುಕುತಿಯ ಕರುಣಿಪುದು || ೨ || ದುರಿತಗಳೆಲ್ಲವರ

ತರಿಯುವುದು | ಅದು ಮರವೆಯ ಮೂಲವ ಮುರಿಯುವೆದು || ಕೊರತೆಗಳೆಲ್ಲವ ಹರಿಸುವದು | ಅದು ಪರತರ ಸುಖವನು ಕರುಣಿಪುದು || ೩ || ಬೆರಸುತೆ ಓಂ ತ್ವಂ ಪದಗಳನು ಘನ ಪಂಚಾಕ್ಷರಿ ನುಡಿ ನೀನು | ಗುರುವಿನ ಗುರು ರೇಣುಕ ತಾನು || ಹರುಷದಿ ಮುಕುತಿಯ ಕರುಣಿಪನು || ೪ || ಭಜಿಸೆಲೊ ಘನ ಪಂಚಾಕ್ಷರಿಯ ||

**ರಾಗ-ತಾಳ-ಅಟ್ಟತಾಳ**

ಕಣ್ಣಾಬಿಡು ತನ್ನ ತಿಳಿದು ಜನ್ಮ ಸಾರ್ಥಕವಾಗುವ || ಪ-೧ || ಕಣ್ಣಾಬಿಡು ಹುಟ್ಟಿದ ಮಾನವ ಜನ್ಮದಿ ಮನುಜಾಶ್ರೇಷ್ಠನೆನಿಸೆ | ನೀ ಇಹಪರದೊಳಗೆ || ಇಷ್ಟ ಪ್ರಾಣ ಭಾವವನೊಡಗೂಡುತೆ | ನಿಷ್ಠೆಯಿಂದ ಶಿವ ಪೂಜೆಯ ಮಾಡುವ || ೨ || ಪರಿಪರಿ ರೂಪದಿ ನರ ಜನುಮದಲಿ | ಮರಳಿ ಮರಳಿ ನೀ ಬಂದೀ ಭವದಲಿ || ಉರುತರ ದುಃಖವ ಪಡುವದಕಿಂತಲು | ವರಮ ಶ್ರೀಗುರುವಿನ ಚರಣದಿ ಬೆರೆಯುವ || ೩ || ಧರೆಯೊಳು ಮೆರೆಯುವ ರಂಭಾಪುರಿಯ ಪರಮ ಶ್ರೀಗುರುವರ ರೇಣುಕನಡಿಯ | ಚರಣವ ಭಜಿಸುತೆ ಹರುಷದಿ ಮುಕುತಿಯ ತರುಣಿಯ ಬೆರೆದಾನಂದದಿ ಸುಖಿಸುವ || ೪||

**ರಾಗ-ತಾಳ-ಅಟ್ಟತಾಳ (ಮಂಗಳಾರತಿ)**

**ಮಟ್ಟು-ಭಕ್ತಪೋಶನನ || ಏಕಶಿಲಾಪುರಿವಾಸ ಸೀತಾ ರಾಮಾ | ರಾಮಾ ||**

ಪರಮಮಂಗಳನಾಮ ರೇಣುಕ ಗುರುವೇ ಗುರುವೇ | ನಿನ್ನ ಚರಣಗಳನು ಮರೆಯಹೊಕ್ಕೇ ಗುರುವೇ ಗುರುವೇ || ಪ-೧ || ಕಾಮಿತಾರ್ಥ ಫಲ ಪ್ರಧಾತಾ ಗುರುವೇ ಗುರುವೆ | ಗುರುಸ್ವಾಮಿ ಎನ್ನ ಭವವ ತರಿದ ಗುರುವೇ ಗುರುವೇ || ೨ || ದುರಿತದೂರ ನಿಗಮ ಸಾರ ಗುರುವೇ ಗುರುವೇ | ನಿನ್ನ ಸ್ಮರಿಪ ಭಜಕರಘವಿನಾಶ ಗುರುವೇ ಗುರುವೇ || ೩ || ಧರೆಯೊಳಧಿಕ ರಂಭಾಪುರದ ಗುರುವೇ ಗುರುವೇ | ಎನ್ನ ಮರೆಯದಂತೆ ಹರಸಿ ಪೊರೆಯೋ ಗುರುವೇ ಗುರುವೇ || ೪ ||

**ರಾಗ-ತಾಳ-ಅಟ್ಟತಾಳ**

ಎಚ್ಚರಿಕೆ ಎಚ್ಚರಿಕೆ ಎಲೆ ಹೀನ ಮನವೇ | ತುಚ್ಛ ಲೌಕಿಕವನು ನೆಚ್ಚಿ ನೀ ಕೆಡುವೇ || ಪ-೧ || ಸ್ವಚ್ಛ ಗಂಧವ ಪೂಸಿ ಅದರಮೇಲ್ಬಚ್ಚಲ ರೊಚ್ಚೆಯನು ಹಚ್ಚುವರೇ | ಜ್ಞಾನವಿದ್ದವರು ನಿಚ್ಚಳದ ಜ್ಞಾನವನು ನೀ ಪಡೆದು ಗುರುಮುಖದಿ ಇಚ್ಛಾ ಅನಿಚ್ಛೆಗಳ ಭ್ರಮಿಸಿ ನೀ ಕೆಡುವೇ || ೨ || ಭ್ರಮಿಸುತ್ತ ಪೋದಂತೆ ಭ್ರಮಣೆ ತೀರದು ಕಂಡ್ಯಾ | ಭ್ರಮಣೆ ದೈವೇಚ್ಛೆಯಾಗಿರೆ ಸುಖವು ನೀ ಕಂಡ್ಯಾ || ಭ್ರಮೆ ಸ್ವೇಚ್ಛೆಮಯವಾಗಿ ಬಹುಮಂದಿ ಕೆಟ್ಟಿಹರು | ಯಮನಿಂಗೆ ಕರುಣವಿಲ್ಲವು ಇದನು ನೀ ಕಂಡ್ಯಾ || ೩ || ಪಾಪ ಪುಣ್ಯಗಳೆಂಬ ರೂಪು ದೋರಲ್ಕೆ ಯಮಭೂಪನಂ ಶ್ರೀಗುರುವೇ ಗೈದಿಹನು ಕಂಡ್ಯಾ | ನೀ ಪಾಪಿಯಾಗಿ ಆ ಯಮನ ಸೇರ್ವದಕ್ಕಿಂತ ಆ ಪರಮ ಗುರುವರನ ನೀ ಸೇರು ಕಂಡ್ಯಾ || ೪ || ಕೆರೆಯುತಿರೆ ಗಜಕರ್ಣ ಹರುಷವೇರಿಸುತಿಹುದು | ಉರಿ ಹತ್ತೆ ಹಲ್ಲಹಲ್ಲ ಕಿರಿಸುತ್ತಲಿಹುದು || ಅರಿತು ನೋಡಿದರೆ ಈ ಧರೆಯ ಭೋಗವು ಅದರ ಪರಿಯಂತೆ | ಕೊರತೆಯೊಳು ತೊರೆದಿಪುದು ಕಂಡ್ಯಾ || ೫ || ವಿರತಿ ಭಕ್ತಿಯು ಜ್ಞಾನಪರಿಪೂರ್ಣವಾಗಿರಲಿ ಗುರುಚರಣದಲಿ ಮನವು ಎರಕವಾಗಿರಲಿ | ಗುರುವಿಂಗೆ ಗುರುವು ಶ್ರೀಗುರುವು ರಂಭಾಪುರಿಯಾ ಗುರು ರೇಣುಕನೆ ಆದಿ ಗುರುವು ನೀ ಕಂಡ್ಯಾ || ಪ || ಎಚ್ಚರಿಕೆ ಎಚ್ಚರಿಕೆ ಎಲೆ ಹೀನ ಮನವೇ ||

**ರಾಗ-ತಾಳ-ಅಟ್ಟತಾಳ**

ತಿಳಿಯೊ ಮನವೆ ನಿಜವೆ | ನಿನ್ನೊಳು ಬೆಳಗುವ ಘನ ಗುರುವ || ಪ ||ಒಳಗ್ಹೊರಗೆಲ್ಲಿಯು ಬೆಳಗುವ ಗುರುವನು | ತಿಳಿದಡೆ ಪಡೆಯುವೆ ಘನಸುಖವ || ೧ || ಒಂದನೆರಡು ಮಾಡಿ ಎರಡನೊಂದಾಗಿಯೆ ಕೂಡಿ | ಒಂದರೊಳೈದ್ದಿಪ್ಪತ್ತೈದನು ಮುಂದೆ ಮುವತ್ತಾರೆನಿಸಿದ ಪ್ರಭುವ || ೨ || ತಿಳಿಯೊ ಅರಸುತೆ ಗುರುಗಳನು ಅರಿಯುತೆ ವರಶೃತಿಮಗಳನ ಮರಳಿ ಸಂಶಯವು ಬಾರದೆ ತೆರದೊಳು | ವರೆವ

ಶ್ರೀಗುರುವಿನ ಚರಣವ ಪಿಡಯುತೆ || ೩ || ಧರೆಯೊಳು ತಾ ಮರೆವ ರಂಭಾಪುರದೊಳು ನೆಲಸಿರುವ | ಪರಮ ಶ್ರೀ ಗುರುವಿನ ಚರಣವ ಪಿಡಿದರೆ ಗುರು ಶೃತಿ ಸ್ವಾನುಭವಕೆ ತಂದುಕೊಡುವ || ಪ || ತಿಳಿಯೋ ಮನವೆ ನಿಜವ ನಿನ್ನೊಳು | ಬೆಳಗುವ ಘನ ಗುರುವ ||

**ರಾಗ-ತಾಳ-ಅಟ್ಟತಾಳ**

ಜ್ಞಾನವಿರಬೇಕು ಮನದೊಳು ಧ್ಯಾನಿಸುತ್ತಿರಬೇಕು | ದೀನಪಾಲ ಗುರುವರನು ಮರೆಯದೆ || ಧ್ಯಾನ ಜ್ಞಾನ ಸಮನೆನಿಸಿ ಶೋಭಿಸುವ || ೧ || ಜ್ಞಾನ || ಸೃಷ್ಟಿ-ಸ್ಥಿತಿ-ಲಯವ | ಕ್ರಮದಿಂದರುಪುವ | ಅಷ್ಟಾಕ್ಷರಿ | ಯೊಳಗಡಗಿರುವ ಶ್ರೇಷ್ಠಮಾದ ತ್ರೈಲಿಂಗವ ಕೊಡುತೆ | ನಿಷ್ಠೆಯಿಂದ ಶಿವಪೂಜೆಯ ಮಾಡುವ || ೨ || ಜ್ಞಾನ || ದೃಷ್ಟಿಯ ಕಣ್ಣಿನೊಳಿಟ್ಟು ಅಚಲದ ಗುಟ್ಟಿನ ಮಾರ್ಗದ ಗುರುತರಿದು | ನೆಟ್ಟನೆ ಗಮಿಸುತೆ ಮುಕ್ತಿ ತರುಣಿಯಳ | ಪಟ್ಟದರಸ ನೆಂದೆನಿಸ ಶೋಭಿಸುವ || ೩ || ಜ್ಞಾನ || ಅರಿವನು ಕರುಣಿಸಿ ಜರೆ ಮರಣಂಗಳ ಹರಿಯುತೆ ಮೋಕ್ಷವ | ಕರುಣಿಸಿದ ವರ-ರಂಭಾಪುರೀ ಗುರು | ರೇಣುಕನಡಿ ಚರಣವ | ಬೆರೆದಾನಂದದಿ ಸುಖಿಸುವ || ಪ || ಜ್ಞಾನವೀರಬೇಕು ಮನದೊಳು ಧ್ಯಾನಿಸುತಿರಬೇಕು ||

**ರಾಗ-ತಾಳ-ಅಟ್ಟತಾಳ**

ಕಡೆಯುಗ ಕಲಿಯಿದು ದೃಢದಿಂ | ಗುರುವರನಡಿಪಿಡಿಯುತೇ ಮುಕ್ತಿ ಪಡೆ ಮನವೆ || ಪ || ಕಡೆ || ಪೊಡವಿಯೊಳಿಹ ಗುರು ವಡಲೊಳಗಡಗಿರೆ | ವಡೆಯನ ವರೆದೊಡೆ ನೀ ಕೆಡುವೇ || ೧ || ಕಡೆ || ಪಡೆಯದೆ ಗುರುವನು ಮಡಿಯೆ | ನೀ ಮುಂದಕೆ ಪೊಡವಿಯೊಳಿಹ ಸರ್ವ ವಡಲೊಳಗೆ || ಮಡಿ ಮಡಿದ್ದುಟ್ಟುತೆ ಕಡುತರ ದುಃಖದ | ಕಡಲಿನೊಳಗೆ ಕಾಲಿಡುವೆ ಹೇ ಮನವೇ || ೨ || ಕಡೆ || ಮೂರು ಯುಗದಿ ಸುಖತೋರದ ಮುಕುತಿಗೆ ಸೇರಬಹುದು | ಕಲಿಯುಗದೊಳಗೆ ಪಾರ ಮಹಿಮಗುರು ವರನನ್ನು ಮರೆದರೆ | ಘೋರ ದುಃಖಕೆ ಗುರಿಯಾಗುವೆ ಮನವೇ || ೩ || ಕಡೆ || ಧರೆಯೊಳು ವರರಂಭಾಪುರ ದೊಳು ನೆಲಸಿಹ | ಪರಮ ಸದ್ಗುರು ರೇಣುಕರಡಿಗೆ || ಶಿರವನು ಬಾಗಿ ನಿನ್ನರಿವ ನರಿಯೆ | ಮುಕ್ತಿ ತರುಣಿಯೊಡನೆ ನೀನಿರುವೆ ಮನವೇ || ಪ || ಕಡೆ ಯುಗ ಕಲಿಯಿತು ||

**ರಾಗ-ತಾಳ**

ಶ್ರೀಗುರು ಮಾಂ ಪಾಹಿ | ಕೃಪಾಂ ದೇಹಿ || ಶ್ರೀ || ಶ್ರೀಗುರುವೆ | ಜಯ ಜಯತು | ಜಯ ಭವ ರೋಗ ದೂರನೆ | ಭಕ್ತವತ್ಸಲ ಆಗಮಾಧ್ಯಾಯಕನೆ | ನೀ ಕೃಪೆಯಾಗಿ ತವಪದ | ಮಹಿಮೆದೋರಿ || ೧ || ಶ್ರೀ || ದೇಶವ ಸುತ್ತುತಿರೆ ಭಯ ಮಾಡೋನ | ವಾಸವ ಮಾಡುತಿರೆ ಕಾಶಿಯೊಳಗಿರೆ | ಭೂಸುರನ ಗೃಹ ವಾಸವಾಗಿರೆ ಸ್ವಪಚನ | ಗೃಹ ವಾಸ ವಾಗಿರೆ | ರೇವಣ ಸಿದ್ಧೇಶ ಗುರು ನೀ ಕೈಯ್ಯ ಬಿಡದೆ || ೨ || ಶ್ರೀ || ಆವಕಾರ್ಯದೊಳಿರಲಿ ಸದ್ಗುರು ನಿನ್ನ ಸೇವೆ ಸಲ್ಲಿಸುತಿರಲಿ | ಆವ ಕಾಲದೊಳಾವ ಠಾವಿನೊಳಾವ | ವಿಧದೊಳು ನೋವು ಬಂದರು | ರೇವಣಸಿದ್ದೇಶ ಗುರುಎನ್ನ ಭಾವದಲಿ | ನೀನೆಲಸಿ ಸತತ || ೩ || ಶ್ರೀ ಮುದ್ದು ಪಾದವ ನಂಬಿದ | ಭಕ್ತರ ಭಿಷ್ಠ ಸಿದ್ಧಿ ದಾಯಕನಾಗಿಹ ಸಿದ್ಧ ಸಿದ್ಧರಿಗೆಲ್ಲ | ಘನಮಹ ಸಿದ್ಧನಾಗಿಹ ಗುರುವೆ ರೇವಣಸಿದ್ಧ ಎನ್ನಯ ಮನದ ಬಯಕೆಯ | ಸಿದ್ದಿಸುತೆ ರಂಭಾಪುರೀಶನೆ || ಶ್ರೀ ಗುರು ಮಾಂಪಾಹಿ ಕೃಪಾಂದೇಹಿ ||

**ರಾಗ-ತಾಳ-ಆದಿತಾಳ**

ಜಯ ಜಯ ಶ್ರೀಗುರು ರೇಣುಕ ಪಾಹಿ | ಜಯ ಜಯ ಮಮ ಭೀಷ್ಠಂ ದೇಹಿ ದೇಹಿ || ೧ || || ಪ || ಜಯ | ಭಕ್ತಿಂ ದೇಹಿ | ಶಕ್ತಿಂದೇಹಿ | ರಕ್ತಿ ರಹಿತ ವಿರಕ್ತಿಂದೇಹಿ | ಧ್ಯಾನಂ ದೇಹಿ | ಜ್ಞಾನಂದೇಹಿ | ಸ್ವಾನುಭವಾತ್ಮ ಸುಜ್ಞಾನಾಂದೇಹಿ || ೨ || ಜಯ | ಬುದ್ಧಂದೇಹಿ | ವಿದ್ಯಾಂದೇಹಿ | ಮುದ್ದು ಮಂತ್ರಕೆ | ತವ ಸಿದ್ಧಿಂದೇಹಿ || ೩ || ಜಯ | ಅಘಸಂಹಾರ | ಜಗದಾಧಾರ | ನಿಗಮಗೋಚರಮಾಗಿ | ಪಾಹಿ | ಪಾಹಿ | ಕುಂಭಿಣಿ | ಭಕ್ತಕುಟುಂಬಿಗ ಮದ್ಗುರು | ರಂಭಾಪುರ ನಿಲಯಮಾಂ | ಪಾಹಿ | ಪಾಹಿ || ೪ ||

**ರಾಗ-ತಾಳ**

ಪಾಹಿಮಾಂಗುರು ರೇಣುಕ | ನೀನೇ ಅನೇಕ || ಪ || ಪಾಹಿ || ಪಾಹಿ ಶ್ರೀಗುರುವರನೆ | ಜಯ ಜಯ || ಪಾಹಿ ಭಜಕೋದ್ಧರನೆ | ಜಯ ಜಯ || ಪಾಹಿ ಪಾವನ ಚರಿತ | ಜಯ ಜಯ || ಮಹಿಮದ್ಗುರು | ರೇವಣ ಜಯತು || ೧ || ಪ || ಪಾಹಿ || ಪ್ರಥಮಕಾರಕ | ದ್ವಿತಿಯ ದಂಡವು ತೃತಿಯ | ಕುಂಡಲ ಅರ್ಧ ಚಂದ್ರಾಕೃತಿಯೆ | ಏಕಾಕ್ಷರ ಸ್ವರೂಪದಿ | ಪ್ರತಿತಿಯಾದನೆ ಪರಮಪುರುಷ || ೨ || ಪ || ಪಾಹಿ || ಸೃಷ್ಟಿಸಿದೆ ಹರ ಹರಿ ಆಜಾದ್ಯರ | ಸೃಷ್ಟಿ ಸ್ಥಿತಿ ಲಯಗಳಿಗೆ ಗುರುವೇ | ದ್ರಿಷ್ಟಿತ್ರಯ ನಾನಿನ್ನ ಪಾದವ || ನೆಷ್ಟು ವಿಧದಿಂದೊರ್ಣಿಸಲಿ ಪ್ರಭು || ೩ || ಪ || ಪಾಹಿ || ಗುರುವೆ | ಬ್ರಹ್ಮವು ಗುರುವೆ | ವಿಷ್ಣುವು ಗುರುವೆ ಗೌರೀ | ನಾಥನೆನುತಲಿ | ವರೆವಶೃತಿ ಮತದಂತೆ | ನಿಮ್ಮಯ ಚರಣ | ಕಮಲವ | ನಂಬಿ ಭಜಿಪರ || ೪ || ಪಾಹಿ || ನಗುರೋರ ಧಿಕಂ | ಎನುತ ಮೋದದಿ | ಪೊಗಳುತಿರೆ ಮೂಮೂರ್ತಿಗಳು ಮಿಗೆ | ನಿಗಮಗೋಚರ ನಿನ್ನ | ಪಾದವ ಪೊಗಳಲೆನ್ನಿಂದಳವೆ ಶ್ರೀಗುರು || ೫ || ಪ || ಪಾಹಿ || ಧರೆಯೊಳಗೆ ಮೆರೆಯುತಿಹ | ರಂಭಾಪುರದೊಳಗೆ ನೆಲಸಿರುವ | ಶ್ರೀಗುರು ತರಳ ಜ್ಞಾನಾನಂದಗೊಲಿದನೆ | ಪರಮ ಪರತರ | ಮೋಕ್ಷದಾಯಕ || ಪ || ಪಾಹಿಮಾಂಗುರುರೇಣುಕ || ನೀನೇ ಅನೇಕ.

ಗುರುವೆ ಪೂಜಿಪೆ ನಿಮ್ಮಯ ಚರಣಗಳನ್ನು | ಗುರುವೆ ಭಜಿಪೆ ನಿಮ್ಮಯ ಗುರುವೆ || ಪ || ಶ್ರೀಮದ್ಗುರುವೆ ಕಾರಣ ಗುರುವೆ | ವಿಹಿತದ ಗುರುವೆ ಪಾವನ | ಗುರುವೆ ಜ್ಞಾನವನೊರೆದು | ಮುಕುತಿಯ ಕರುಣಿಸುವ | ವರದೇವ ಗುರುವೇ || ೧ || ಶ್ವಾನುಭವ ಸಿದ್ಧಾಂತವೆಂಬ ಶಿವಾನುಭಾವವ ಪೇಳ್ದ ಶ್ರೀಗುರು ಜ್ಞಾನಮೂರುತಿ | ನಿನ್ನ ಪಾದ ಧ್ಯಾನಕಧಿಕವದುಂಟೆ ಶ್ರೀ ಮದ್ಗುರುವೇ || ೨ || ಪ || ಪೂಜಿಪೆ || ಹಿಂದು ಮುಂದೇನೊಂದು ತೋರದ | ಮಂದ ಭಾಗ್ಯತೆಯಾಗಿ ವೃಷಭಲದಿಂದ | ನಿಮ್ಮನು ಪಿಡಿಯೆ ಬಲುದಯದಿಂದ | ದೀನನ ಪೊರೆದ ಶ್ರೀಮದ್ಗುರುವೇ || ೩ || ಗುರುವೆ ಗುರುವಿನ ಗುರುವೆ ವರಸುರ ತರುವೆ | ಭಜಕರ ಪೊರೆವ ಬಿರುದನು ಧರಿಸಿ ಮೆರೆಯುವ ಪರಮ ಪಾವನ | ದುರಿತವನು ಹರಗೈದ ಶ್ರೀಮದ್ಗುರುವೆ || ೪ || ಪ || ಪೂಜೆ || ಅರಿವೆ ಗುರು ವೆಂದೊರೆದು | ಸೌಖ್ಯವ ಕರುಣಿಸುವ ವರಗುರುವೆ ನಿಮ್ಮಯ್ಯ | ಸ್ಮರಣೆ ಮರೆಯದ ತೆರದಿ ಮತಿಯನು | ಕರುಣಿಪುದು ಭಜಕನಿಗೆ ಶ್ರೀಮದ್ಗುರುವೆ || ೫ || ಪ || ಪೂಜಿ || ಧರೆಯೊಳಗೆ ಅತ್ಯಧಿಕವೆನುತಲಿ | ಮರೆವ ರಂಭಾಪುರದಿ ನೆಲಸುತೆ ಹರುಷದಿಂ | ಧಾರುಣಿಯ ಭಜಕರ ಪೊರೆಯಲೈದಿದ ಪರಮ ಶ್ರೀಮದ್ಗುರುವೆ | ಪೂಜಿಪೆ ನಿಮ್ಮಯ ಚರಣಗಳನ್ನ ಗುರುವೆ ಭಜಿಪೆ ನಿಮ್ಮಯ || ೬ ||

**ರಾಗ-ತಾಳ-ಆದಿತಾಳ**

ಪರಮ ಶ್ರೀಗುರುವಿನ ಚರಣವ ಭಜಿಪರ ಜ್ಞಾನಕೆ ಬೆಲೆಯುಂಟೆ | ಘನಶಿವಾಯ ಎನುತ ಭಜಿಪರಿಗೆ || ಜನನಮರಣಮುಂಟೆ || ಪ-೧ || ಪರಮ ಜ್ಞಾನಕೆ ಕರ್ಮದ ನೆನೆವುಂಟೆ ಸುಜ್ಞಾನಕ್ಕೆ ಹಲವಂಗಗಳುಂಟೆ || ಸ್ವಾನುಭವ ಸಿದ್ಧಾಂತಕೆ ಹೋಲುವ | ನಾನಾ ಶಾಸ್ತ್ರಮುಂಟೆ || ೨ || ಭಾನುವಿಗೆ | ತಮವಿರಲುಂಟೆ | ಸುರಧೇನುವಿಗೆ | ಬರಬರಲುಂಟೆ | ಆನೆಯನೇರಿದ | ಮನುಜಗೆ | ಬೊಗಳುವ || ಸ್ವಾನನ ಭಯ ಮುಂಟೆ || ೩ || ವರರಂಭಾಪುರ ಕಧಿಕುಂಟೆ || ಗುರು ಮಂತ್ರಕ್ಕೆ | ಸರಿಸಮನುಂಟೆ || ವರಗುರು ರೇವಣ ಸಿದ್ಧನ | ಭಜಿಪಗೆ || ಮರಳಿ ಸಂಸ್ಕೃತಿಯ | ಭಯಮುಂಟೆ || ಪರಮ ಶ್ರೀಗುರುವಿನ ಚರಣವ ಸ್ಮರಿಪರ || ೪ ||

**ರಾಗ-ತಾಳ-ಆದಿತಾಳ**

ಪಾದವೆ ಗತಿ ನಮಗೆ | ಸದ್ಗುರುವರನ | ಪಾದವೆ ಗತಿ ನಮಗೆ || ಪ-೧ || ವಾದಿ ಭೀಕರ ಭವ | ಬಾಧೆರಹಿತನಾದ | ವೇದಗೋಚರ ಜಗದಾದಿ ಮೂರ್ತಿಯ ಘನ || ೨ || ಕರಣ ಕಾರ್ಯಗಳಿಂಗೆ | ನಿರುತ ಸಾಕ್ಷಿಕನಾಗಿ | ಧರೆಯೊಳು ಮೆರೆಯುವ || ಓಂ ಶಿವಾಯನಾ || ೩ || ಧರೆಯೊಳ್ಕೊಲ್ಲಿಯ ಪಾಕಿ ಪುರದೊಳುದ್ಭವಿಸೂತೆ | ನೆರೆಜ್ಞಾನಾಧ್ಧಾರಕೆ ವರರಂಭಾಪುರದಿ ನಿಂದಾ ಪಾದವೇ ಗತಿ ನಮಗೆ | ಸದ್ಗುರುವರನ ಪಾದವೆ ಗತಿ ನಮಗೆ ||

**ರಾಗ-ತಾಳ-ಆದಿತಾಳ**

ಇದೆ ದಿವ್ಯ ನಾಮ | ಸುನಾಮ ಇದೆ ದಿವ್ಯ | ಸದಮಲ ಮುಕುತಿಯ ಮುದದಿಂ ಪಡೆಯಲ್ಕಿದೆ || ೧ || ಅಣೋರಣೀಯಾನ್ಮಹತೋಮಹೀಯ | ಅಣು ತೃಣಕಾಷ್ಟದೊಳಿಹ ಗುರು ರಾಯ | ಅಣುಮಹತ್ತಿನೊಳಿಹೆ ನೆಂಬುದಕೆ ತೃಣಯನಾಗಿ ರೇಣುಕನೆನುತ್ಕೈದಿದ || ೨ || ಪಾಮರರನು ಪಾಮರರನು ಪಾವನಮಂಗೈಯ್ಯಲು ತಾ ಮಹವಾಕ್ಯವನುಸರಿಸಿ | ಆ ಮಹ ಘನತತ್ವ ಮಸಿ ಎಂಬುದಕೆ ಈ ಮಹಿಮನೆ ಅಷ್ಟಾಕ್ಷರಿ ಎನಿಸಿದ || ೩ || ಪಿಡಿದ ತನುವಿನವ ಗುಣವ ಕೆಡಿಸಿ ಕೈಯ್ಯ ಪಿಡಿದು ತನ್ನಂತೆಯೆ ಪಾಳ್ವನಿವ | ಪೊಡವಿಗಧಿಕ ರಂಭಾಪುರದಿ ಮೆರೆದು | ಜಗದೊಡೆಯನೆನಿಸಿ ಸುಜ್ಞಾನವನರುಹಿದ ಇದೆ ದಿವ್ಯ ನಾಮ ಸುನಾಮ || ೪ ||

**ರಾಗ-ತಾಳ-ಆದಿತಾಳ (ಮಂಗಳಾರತಿ)**

ಜ್ಞಾನದ ಜ್ಯೋತಿಯ ಬೆಳಗುವೆನು | ಸುಜ್ಞಾನದ ಜ್ಯೋತಿಯ ಬೆಳಗುವೆನು || ಪ || ಸ್ವಾನುಭವದಿ ಕೂಡಿ ತಾನೆ ತಾನೆನಿಸಿದ | ಜ್ಞಾನ ಶ್ರೀ ಗುರುವಿನ ಧ್ಯಾನವ ಮಾಡುತ || ೧ || ಅರಿವನು ಕರುಣಿಸಿ ಮರವೆಯ | ತರಿಯುತೆ ಪರತರ ಮುಕುತಿಯ ಕರುಣಿಸಿದಗೆ || ೨ || ಪರಮಪುರುಷನಿಗೆ ಪಾವನ ಚರಿತಗೆ | ದುರಿತಗಳೆಲ್ಲವ ತರಿದವಗೆ || ೩ || ಧರೆಯೊಳು ವರರಂಭಾಪುರದೊಳು ನೆಲಸಿಹ | ಪರಮಪಾವನ ಶ್ರೀಗುರುರೇಣುಕಗೆ | ದಿವ್ಯಜ್ಞಾನದ ಜ್ಯೋತಿಯ ಬೆಳಗುವೆನು | ಮೋಕ್ಷಜ್ಞಾನದ ಜ್ಯೋತಿಯ ಬೆಳಗುವೆನು ||

**ರಾಗ-ತಾಳ-ಅಟ್ಟತಾಳ**

ಏನು ಭಯವಣ್ಣಾ ಮರ್ತ್ಯದೊಳೆಮಗೆ | ಏನು ತಾನೇ ಶ್ರೀಗುರು ಕೊಟ್ಟ ಜ್ಞಾನವೆಂಬುವ ಕಣ್ಣಾ || ೧ || ಮರೆದಿರ್ದ ತನ್ನ ತಾನರಿಯೆ | ಮುಕ್ತಿಯು ಎಂದು ಅರಿವಿನ ಕುರುಹ | ಶ್ರೀಗುರುರಾಯನಿತ್ತ ಮೇಲೆ || ೨ || ಭವಮಾಲೆ ತೊಲಗಿತು ಭಯವೆಲ್ಲ ಪೋಯಿತು | ಜವನ ಸೆರೆಯು ತಪ್ಪಿ ಅವನಿಯೊಳ್ಚಿಂದಮೇಲೆ || ೩ || ಸುರತರು ಮೊಲಾದ ಸುರವಸ್ತುಗಳಿಗೆಲ್ಲ | ಪೆರತಾದ ಶ್ರೀಗುರುವರನಡಿದೊರೆತಮೇಲೆ || ೪ || ಕರಣಶುದ್ಧಿಗಳಿಂದ ವರಸಿದ್ಧಿ ಪಡೆಯುತೆ | ನರಜನುಮದ ಪಾಪ ಪರಿಹರವಾದಮೇಲೆ || ೫ || ಜರಮೃತಿಯೊಳು ಸಿಲ್ಕಿ ಕೊರಗಿರ್ದ ಮನವದು | ಗುರು ರೇಣುಕರ ದಿವ್ಯ ಚರಣ ದೊಳ್ಬೆರೆದಮೇಲೆ ಏನು ಭಯವಣ್ಣಾ ||

**ರಾಗ-ತಾಳ-ಆದಿತಾಳ**

ಏನೆಂದು ಕರೆಯಲಿ ನಿನ್ನ | ಸಮ್ಯಜ್ಞಾನವ ಪೇಳ್ದೆನ್ನ | ಪರಮ ಪಾವನ || ಪ-೧ || ದೇವನೆನ್ನಲೆ ಮಹದೇವ ನೆನ್ನಲೆ | ನಿಜದೇವನೆನ್ನಲೆ | ಗುರುದೇವ ನೆಂದೆನೆಲೆ || ದೇವರ ದೇವ ಶ್ರೀಕಾಮಾಣಿ ಮದ್ಗುರು ದೇವ ಸಂಜೀವ | ಮಜ್ಜೀವ ಸದ್ಗುರು ರೇವ || ೨ || ಜ್ಞಾನಿಯನ್ನಲೆ | ಸಮ್ಯಜ್ಞಾನಿಯನ್ನಲೆ ದಿವ್ಯ ಜ್ಞಾನಿಯನ್ನಲೆ | ಘನ ಮೌನಿ ಯೆಂದೆನಲೆ || ಜ್ಞಾನಿಗಳರಸ ಪ್ರಾಣೇಶ ಮದ್ಗುರು ಮೂರ್ತಿ | ದೀನಸುಜ್ಞಾನವ ಹರಿದು ಕೈವಿಡಿದನ || ೩ || ಧರೆಯೊಳ್ಕೊಲ್ಲಿಯಪಾಕಿ ಪುರದಿಂದಲೈತಂದು | ಹರಷದಿ ವರರಂಭಾಪುರದಿ ನಿಂದು ಮರೆಹೊಕ್ಕ ಭಕ್ತರ ಕರವ ಪಿಡಿದು ತವ || ಚರಣದೊಳ್ಬೆರಸಿದ ವರಗುರು ಸಂಪನ್ನ || ಏನೆಂದು ಕರೆಯಲಿ ನಿನ್ನ ||

**ರಾಗ-ತಾಳ-ಆದಿತಾಳ**

ಜ್ಞಾನೋಪದೇಶವಾಯಿತಮ್ಮ | ತಾ ತನ್ನ ತಿಳಿವ || ಅ-ಪ || ಜ್ಞಾನೋ || ಏನೊಂದಿಲ್ಲದೆ ತಾನಿಲ್ಲೆನಿಸದೆ ಜ್ಞಾನ ಚಿದಾನಂದ ಧ್ವಯವೆನಿಸಿದ || ೧ || ದುರಿತಕರ್ಮಂಗಳನೆಲ್ಲವಂ ತರಿದು | ಕರ್ಮಂಗಳನೆಸಗಿ ನೆರೆಪುಣ್ಯಗಳಿಸುವೇನೆಂಬುದ ಮರೆದು | ಸುರಲೋಕದೊಳಗಿನ | ವರ ರಂಭಾಪುರಿ ಮೊದಲಾದ | ಭೋಗವ ತೊರೆದು | ಕರಣ ಧರ್ಮದುರ | ವಣೆಗಳ ಖಂಡ್ರಿಸಿ | ನಿರುತವು ಗುರುವಿನ | ಚರಣದೊಳ್ಬೆರೆದಿಪ || ೨ || ಪ || ಜ್ಞಾ || ಯೋಗ ಮಾರ್ಗಂಗಳ ನೆಲ್ಲವನರಿದು | ನಿರ್ಗುಣ ರಾಜ | ಯೋಗವೆಂಬುದರೊಳು | ಚಿತ್ತವು ಬಲಿದು | ಹಿರಿಯೋಕ್ತಿ ಎಂಬ ಆಗಮಂಗಳ | ಅರ್ಥವ ನೀನೆರೆ ತಿಳಿದು | ನೀಗಿ ವಿಷಯ ಸುಖ ಭೋಗಗಳನು | ಶಿವಯೋಗವೆಂಬ | ಸುಖ ಭೋಗದಿನಲಿವ || ೩ || ಪ || ಜ್ಞಾ || ಅರಿವುಳ್ಳ ಶ್ರೀಗುರು ದೊರಕಿದ ನಮ್ಮ | ಆ ಅನಾದಿಯಾದ | ಪರವಸ್ತು ಗುರು

ರೇಣುಕನಿವನಮ್ಮ | ಸೌಂಜ್ಞೆಯೊಳೆನ್ನ | ವರ ಜ್ಞಾನಾಗ್ನಿ | ಯೊಳು ಸುಟ್ಟನಮ್ಮ | ಮರು ಕ್ಷಣದಲಿಯದೆ | ನಾನದೆನೆಂಬುವ | ಉರುತರ ಜ್ಞಾನಾನಂದದಿ | ನಲಿವ ಮೆರೆವ | ಜ್ಞಾನೋಪದೇಶವಾಯಿತಮ್ಮ || ೪ ||

**ರಾಗ-ತಾಳ-ಆದಿತಾಳ**

ಬಾಬಾ ಬಾಬಾ ಬಾ ಗುರುರಾಯ | ಬಾ ಬಾ ತ್ರೈಜಗದಾಚಾರ್ಯ | ಬಾ ಪಾವನ್ನ | ಬಾ ಸಂಪನ್ನ | ಬಾ ಬಾ ಎನ್ನಯ | ಹೃದಯದ ರನ್ನ || ೧ || ಪ || ಬಾ || ಪರಮ ಪುರುಷ ಬಾ | ಪಾವನ ಚರಿತ ಬಾ | ದುರಿತ ಹರನೆ ಬಾ | ದಯಾಕರ ಬಾ | ಸ್ಮರಿಸುವ ಭಜಕರ | ಪೊರೆವ ಬಿರುದುಗಳ | ಧರಿಸಿ ಮೆರೆವ ಶ್ರೀಗುರು ಪರಮಾತ್ಮ || ೨ || ಪ || ಬಾಬಾ || ಕರುಣಾಕರನೆ ಬಾ | ಕಾಮಿತ ಫಲನೆ ಬಾ | ಆ ಮಹಾಘನ | ಮಹಿಮಾಜ್ವಲ ಬಾ | ಕಾಮಿಸಿರುವೆನ್ನೈ | ಸ್ವಾಮಿಯೇ | ನಿನ್ನ ನೋಡೆ ಪ್ರೇಮವ | ನಿರಿಸುತೆ ನೀಮ್ಮೈದೋರಿ || ೩ || ಪ || ಆವದೇಶದೊಳಿರ್ಪೆಯೋ ಗುರುವರ | ಆವರಾಜ್ಯಮಂ ಪಾಲಿಸುವೆ | ದೇವ ನೀನಿಲ್ಲದ | ಠಾವೊಂದಿರ್ಪುದೆ | ದೇವರ ದೇವ ಬಾ | ರಂಭಾಪುರ ನಿಲಯ ||ಪ|| ಬಾಬಾ ಬಾಬಾ | ಬಾ ಗುರುರಾಯಾ ಬಾಬಾ ತ್ರೈಜಗದಾಚಾರ್ಯ ||

**ರಾಗ-ತಾಳ-ಅಟ್ಟತಾಳ (ಮಂಗಳ)**

ಗುರು ವೀರ ರೇವಣಸಿದ್ಧ ಸಮರ್ಥ | ಬೆಳಗುವೆನಾರತಿಯ | ಜಯಾ ಜಯಾ | ಬೆಳಗುವೆನಾರತಿಯ || ೧ || ಪರಮತತ್ತ್ವ ಘನ ರಹಸ್ಯ ಮೂಲವ ತ್ವರಿತದಿ ಬೋಧಿಸಿದೆ | ಗುರುವರ ತ್ವರಿತದಿ ಬೋಧಿಸಿದೆ | ಮರವೆಯ ಮೂಲವ ತರಿಯುತೆ ಮೋಕ್ಷವ | ಹರುಷದಿ | ಕರುಣಿಸಿದೆ | ಗುರುವರ ಹರುಷದಿ | ಕರುಣಿಸಿದೆ || ೨ || ವರಮೋಕ್ಷಕೆ ಶಿವತತ್ತ್ವ ರಹಸ್ಯವ ನೊರೆಯಲು | ನೀ ಪ್ರಭುವು | ಗುರುವರ ಮರೆಯಲು | ನೀ ಪ್ರಭುವು | ಧರಣಿಯೊಳೀಪರಿ | ಪರಮ ರಹಸ್ಯವನೊರೆವರು ದುರ್ಲಭವು | ಗುರುವರವರೆದರು | ದುರ್ಲಭವು || ೩ || ಗುರು ವೀರ ವರ ಜ್ಞಾನವನುದ್ಧರಿಸೆ | ಗುರುವರ ರಂಭಾಪುರದಿ ನಿಂದೆ ಮರೆಯದೆ ನಿನ್ನನು | ಸ್ಮರಿಸುವ ಭಜಕರಿವರ ಮೃತಿಗಳ ಕೊಂದೆ ಗುರುವೀರ ರೇವಣ || ೪ ||

**ರಾಗ-ತಾಳ-ಅಟ್ಟತಾಳ**

ಸದ್ಗುರು ದರುಶನ ನಮಗಾಯಿತು ನೋಡಿರಿ | ಗುರುವಾರದ ಶುಭ ದಿವಸದಲಿ | ದುರಿತ ದೋಷಗಳು ತೊಲಗಿಪೋದವು | ಗುರುರೇಣುಕನಡಿ | ಕಮಲದಲಿ || ೧ || ವರವೇದಂಗಳ ಸನುಮತವೆಲ್ಲವರ | ಕರುಣದಿ ತಾನೊರೆದ | ದುರಿತವು ತೊಲಗಿತು | ಜರಮೃತಿ ಇವೆಂದ್ಧರಸುತ್ತೆಮ್ಮ ಪೊರೆದ || ೨ || ಇಷ್ಟಪ್ರಾಣಭಾವದದೈಕ್ಯತೆಯ | ಗುಟ್ಟನು ಬೋಧಿಸಿದ ಅಷ್ಟಾಕ್ಷರಿ | ಗುಟ್ಟೈವಿಧವರ್ಣಿಸಿ | ಹುಟ್ಟು ಸಾವು ಕೊಡವಿದಾ || ೩ || ಸದ್ಗುರು || ಧರೆಯೊಳ್ಕೊಲ್ಲಿಪಾಕಿಯ ಪುರದಿಂದ್ಧರುಷದೊಳೈತಂದಾ | ಕರುಣದಿ ಭಕ್ತರ ಪೊರೆಯಲು ರಂಭಾಪುರದೊಳು ತಾನಿಂದ | ಸದ್ಗುರುದರುಷನ ನಮಗಾಯಿತು | ನೋಡಿರಿ || ೪ ||

**(೪೩ನೇ ತತ್ತ್ವ) ರಾಗ-ತಾಳ-ಅಟ್ಟತಾಳ**

ಗುರುಬಂದ ಹರ ಬಂದ, ಶಿವ ಬಂದ | ಮನೆಗೆ | ಗುರುವೇ ರೇವಣಸಿದ್ಧ | ತಾಬಂದ ಮನೆಗೆ | ಗುರು || ೧ || ಎಂದು ಬಾರದ ಗುರು | ಇಂದು ತಾ ಬಂದಾ ಆನಂದಪದವಿಯು ನಿಮಗಾಗಲೆಂದು || ೨ || ಮುಕ್ಕಣ್ಣ ಶಿವತಾನು ಭಿಕ್ಷಕೆ ಬಂದಾ ಭಿಕ್ಷಾವ ನೀಡಿರಿ ಮೋಕ್ಷ ನಿಮಗೆಂದಾ || ೩ || ಚೆನ್ನದ ಅವಿಗೆ ರನ್ನಾದ ಬೆತ್ತ ಹೊನ್ನೀನ ಜೋಳಿಗೆ ಧರಿಸಿ ತಾ ಬಂದಾ || ೪ || ಕುಂಟು ಕುರುಡರಿಗೆಲ್ಲ | ಕಣ್ಕಾಲ ತಂದಾ ಇಂಥಾ ಬರಡ ಗೋವಿನ ಹಾಲ ತಾ ಕರೆದುಂಡಾ || ೫ || ಹಸುಮಕ್ಕಳನು ನೋಡಿ ನಸುನಗೆ ಬೀರಿ | ಹಸನಾಗಿ ಮುದ್ದಿಪ ಶ್ರೀಗುರು ಬಂದಾ || ೬ || ಗುರು | ಕರೆದು ಭಕ್ತರಿಗೆಲ್ಲ | ವರಮೋಕ್ಷ ಕೊಡುವ | ಪರಮ ಪಾವನನಾದ ಗುರುಮೂರ್ತಿ ಬಂದಾ || ೭ || ಧರೆಯೊಳ್ಕೊಲ್ಲಿಪಾಕಿಪುರದಿಂದ ಬಂದ | ಹರುಷದಿ ಭಕ್ತರ ಪೊರೆಯಲು ರಂಭಾಪುರದೊಳು | ತಾ ನಿಂದಾ | ಗುರು ಬಂದ ಹರ ಬಂದ ಶಿವ ಬಂದ ಮನೆಗೆ || ೮ ||

**ರಾಗ-ತಾಳ-ಆದಿತಾಳ**

ಬಾರಮ್ಮ ಗುರುಸೇವೆ ಮಾಡುವ | ನಿತ್ಯ ಭೂರಿ ಬ್ರಹ್ಮಾನಂದ ಪೊಂದುವ || ಪ-೧ || ಎಂದಿಗಾದರು ಸಾವು ತಪ್ಪದು | ಗುರು ಹೊಂದದೆ ನಿಜಮುಕ್ತಿ ದಕ್ಕದು || ಸುಂದರ ತನುವಿದು ನಿಲ್ಲದು | ಮೋಹ ಬಂಧನದಿಂ ಸುಖವಿಲ್ಲದು || ೧ || ಗಂಗಾಯಮುನೆ ಸ್ನಾನ ಗೈಯುವ | ಅಲ್ಲಿ ಭಂಗಾರ ಮಹಲಿನೊಳಾಡುವ || ಹಿಂಗದೆ ಕಳೆ ಬಿಂದು ನೋಡುವ | ನಿತ್ಯ ಮಂಗಳ ವಾದ್ಯವ ಕೇಳುವ || ೩ || ವರ ಹಂಸಕಲ್ಪವನೇರುವ ಬ್ರಹ್ಮಪುರದೊಳುಯ್ಯಾಲೆಯ ನಾಡುವ | ನೆರೆ ಸೂಕ್ಷ್ಮದ್ವಾರವ ತೆರೆಯುವ || ಅಲ್ಲಿ ಪರಮಾತ್ಮನೊಳು | ಕೂಡಿ ಸುಖಿಸುವ || ೪ || ಜೀವಭಾವನೆ ಭ್ರಾಂತಿ ಅಳಿವುದು | ಆತ್ಮ ಭಾವನೆ ಸ್ಥಿರವಾಗಿ ನಿಲ್ಲುವುದು | ಸಾವು ಹುಟ್ಟೆಂಬುವುದಳಿಯುವುದು || ನಿತ್ಯಾ ಕೈವಲ್ಯಾನಂದವೆ | ನಿಲ್ಲುವುದು || ೫ || ನಿತ್ಯ ಗುರು ಸಂಜೀವನ ಸೇರುವ ಚಿತ್ತ ವೃತ್ತಿಗಳೆಲ್ಲವನಳಿಯುವ |

ಸತ್ತು ಚಿತ್ತಾನಂದ ವಸ್ತುವ ಸೇರಿ ಮುಕ್ತಿರಾಜ್ಯದಿ ಮನೆ ಮಾಡುವ || ಪ || ಬಾರಮ್ಮ ಗುರು ಸೇವೆ ಮಾಡುವ ||

**ರಾಗ-ತಾಳ-ಅಟ್ಟತಾಳ**

ಹಿಡಿ ಹಿಡಿ ಹಿಡಿ ಗುರು ಪಾದವ್ವಾ || ತಂಗಿ ಹುಡುಗುತನದ ಬುದ್ಧಿ ಸಾಕವ್ವಾ || ಬಿಡದೆ ಪಾಪಕಂಜಿ ನಡಿಯವ್ವಾ | ಮುಕ್ತಿ ಪಡೆದು ಪಾವನಳಾಗಬೇಕವ್ವಾ || ವ-೧ || ಏನು ಕಿಂಚಿತ ಪುಣ್ಯ ನಿಂದವ್ವಾ | ಇಂತಾ ಮಾನವ ಜನ್ಮಕ್ಕೆ ಬಂದೆವ್ವಾ || ಹೀನವಶದಲಿರೆ ಕುಂದವ್ವಾ | ಮುಕ್ತಿ ರಾಜ್ಯದೊಳಗೆ ಇರೆ ಚಂದವ್ವಾ || ೧ || ಕೆಟ್ಟ ಮಾತಿನಲೇನು ಫಲವವ್ವಾ | ನಿಜ ನಿಷ್ಠೆವಂತರ ಸಂಗ ವಳಿತವ್ವಾ || ಅಷ್ಟಪಾಶಗಳೆಲ್ಲ ಕಳಿಯವ್ವಾ | ನಿಜನಿಷ್ಠೆ ಹಿಡಿದು ಭವ ಗೆಲಿಯವ್ವಾ || ೩ || ಆಡಿಕೊಂಡದು ಎಲ್ಲ ಬರದವ್ವಾ | ನೀ ತಿಳಿದುಕೊಂಬುದು ನಿನ್ನಲಿಹುದವ್ವಾ || ಬಿಡದೆ ಭಜಿಸು ಗುರು ರೇಣುಕ ನವ್ವಾ | ಮುಕ್ತಿ ಪಡೆದು ಧನ್ಯಳು ನೀನಾಗವ್ವಾ || ಪ || ಹಿಡಿ ಹಿಡಿ ಹಿಡಿ ||

ಬಾರಕ್ಕ ನಾವಿಬ್ಬರ್ಹೋಗೋಣ ಬಾ | ವರ ವೀರ ಸದ್ಗುರು ಸೇವೆ | ಮಾಡೋಣ ಬಾ ಬಾ || ಪ || ಕಾರಣ ಪುರುಷ ಕರುಣ ಸಾಗರನೀತ ಸಾರಿ ಕೈಪಿಡಿದೆಮ್ಮ ಪೊರೆವನು ಬಾಬಾ || ೧ || ಕಾಮಿತ ಫಲಗಳ ಕೊಡುವನು ಬಾ ಬಹು | ಪ್ರೇಮದಿಂದೆಮ್ಮನ್ನು ಪೊರೆವನು ಬಾ | ಆ ಮಹಘನ ತತ್ತ್ವಮಸಿ ವಾಕ್ಯವನೆ ಪೇಳಿ ಸಾಮವೇದವ | ಪೂರ್ತಿಗೊಳಿಪನು ಬಾ ಬಾ || ೨ || ಪ || ಹಿಂದಣ ಪಾಪವ | ಸುಡುವನು ಬಾ | ನಮಗಿಂದು ಸು ಸೌಖ್ಯವ | ಕೊಡುವನು ಬಾ | ಒಂದು ನಿಮಿಷ ಮಾತ್ರಹೊಂದಿ | ಅಗಲದಿರೆ ಚಂದದ ಮುಕುತಿಯ | ಕರುಣಿಪ ಬಾ ಬಾ || ೩ || ಪ || ದೇಹವ ಗುಡಿಯಾಗಿ ಮಾಳ್ಪನು ಬಾ | ನಮ್ಮ ಭಾವ ಗದ್ದುಗೆಯಾಗಿ ಹೂಡ್ವನು ಬಾ | ಸೋಹಂ ಎನಿಪ ದೇವನಲ್ಲಿ ತೋರುವ ಗುರುದೇವ | ನಂಘ್ರಿಯ ನಾವು ಪೂಜಿಸೋಣ ಬಾ ಬಾ || ೪ || ಪ || ಬಯಲ ಬಂಗಲವಾಗಿ ಮಾಳ್ಪನು | ಬಾ ನಮ್ಮ ತವರೂರು ಕಡೆ ಎಂದು ಪೇಳ್ವನು ಬಾ ಬಯಲನ್ನು ಬೆಳಗುವ ಬ್ರಹ್ಮಾವ | ನೊಡಗೂಡಿ ಬಯಲು ಬಂಗಲದಲ್ಲಿ | ಸುಖಿಸೋಣ ಬಾ ಬಾ || ೫ || ಪ || ವರ ರಂಭಾಪುರಿಯನ್ನೇ ಸೇರೋಣ ಬಾ | ಅಲ್ಲಿ ಗುರುರೇಣುಕರ ಪಾದ ನೋಡೋಣ ಬಾ | ಗುರು ಮಂತ್ರದಿಂದಷ್ಟ | ವಿಧದರ್ಚನೆಯ ಮಾಡಿ ಪರತರ | ಮುಕುತಿಯ ಪಡೆಯೋಣ ಬಾ ಬಾ || ಪ || ೬ ||

**ರಾಗ-ಮೋಹನ, ತಾಳ-ಆದಿತಾಳ**

ಶ್ರೀಗುರುವೇ ರೇಣುಕಾಚಾರ್ಯ | ನೀ ಎನ್ನ ಪಾಹಿ ಗುರುವರ್ಯ || ೧ || ಪ || ಶ್ರೀಗುರುವೆ | ದೇವನೆಂದೆನಿಸಿ ಮೆರೆದೆ ಗುರು | ದೇವನೆಂದೆನಿಸಿ | ಈ ಜಗದ ಜೀವಿಗಳ ಪೊರೆದೆ | ನೀದಯದಿ ಸುಜ್ಞಾನದುಪದೇಶಿಶಿ || ೧ || ಪ || ಶ್ರೀಗುರುವೆ || ವೇದ ಸನು ಮತವಾ ಮೇದಿನಿಗೆ | ಭೋದಿಸಿದೆ ದೇವಾ ಹೇ ದೇವಾ | ಆದಿ ಮಂಧ್ಯಾಂತ್ಯಕ್ಕನಾದೀಯಾದ ಗುರುದೇವಾ || ೩ || ಪ || ಶ್ರೀ ಗುರುವೇ ಎಲ್ಲು ತುಂಬಿರುವೇ ರಂಭಾಪುರದಲ್ಲಿ ನೆಲಸಿರುವೇ | ಶ್ರೀಗುರುವೇ ಬಲ್ಲಿದನೆ ಪ್ರಭುವೆ ರೇಣುಕ ಎನ್ನನಲ್ಲ ಸುರತರುವೇ || ಪ || ಶ್ರೀಗುರುವೇ ರೇಣುಕಾಚಾರ್ಯ ನೀ ಎನ್ನ ಪಾಹಿ ಗುರುವರ್ಯಾ ||

**ರಾಗ-ತಾಳ-ಅಟ್ಟತಾಳ**

ಏನ ಗಳಿಸಿನ್ನೇನ ತಿಳಿದಿನ್ನೇನು ಫಲವಣ್ಣಾ – ಗುರುವಿನ ಧ್ಯಾನವಿಲ್ಲದ ನರನ ಜನ್ಮವು ವ್ಯರ್ಥ ಕಾಣಣ್ಣಾ || ಪ-೧ || ಏನು ಇಲ್ಲದ ಬಯಲಿನೊಳು ತಾನೇನು ಕಾರಣ ಮಾದುದೀ ಜಗ | ಏನು ಇದರ ಸ್ವರೂಪವೆಂಬುದ ಮೊದಲು ತಿಳಿಯಣ್ಣಾ || ಜ್ಞಾನ ಗುರುವಿನ ಪದವ ಪಿಡಿದು ಸ್ವಾನುಭವ ಸಿದ್ಧಾಂತವೆಂಬುವ | ಶಿವಾನುಭವವ ತಿಳಿಯೆ ಸಾರ್ಥಕ ಜನ್ಮಕಹುದಣ್ಣ || ೨ || ಹುಟ್ಟು ಸಾವಿನ ಬೀಜವ್ಯಾವುದು ಮೊಟ್ಟ ಮೊದಲದನರಿದು | ಅದನು ಸುಟ್ಟು ಜ್ಞಾನಾಗ್ನಿಯೊಳು ನೀನೇ ಬೆಳಗಬೇಕಣ್ಣಾ || ಇಷ್ಟಪ್ರಾಣವು ಭಾವವೆಂಬುವ ಗುಟ್ಟನರಿಯುತೆ | ಗುರು ಪದಾಬ್ಜದಿ ನಿಷ್ಠೆಯಿಂದಿರೆ ಶ್ರೇಷ್ಟನೆನಿಸುವ ಮುಕ್ತ ನೀನಣ್ಣಾ || ೩ || ಹಿಂದೆ ಮಾಡಿದ ಸುಕೃತ ಪುಣ್ಯದಿ ಬಂದೆ ಶ್ರೇಷ್ಠಾಂಗದಲಿ | ಮಾನವ ಮುಂದೆ ಜನಿಸದ ತೆರದಿ ಜ್ಞಾನವ ಪಡೆಯಬೇಕಣ್ಣಾ || ಬಂಧಮೋಕ್ಷಗಳೆಂಬೊ ಎರಡರ ಸಂದು ತಿಳಿಯಲು ಗುರು ಕಟಾಕ್ಷದಿ ಬಂಧವನು | ಕಳೆದುಳಿದು ಮೋಕ್ಷವ ಪಡೆವೆ ಕೇಳಣ್ಣಾ || ೪ || ಅರಿಯದಿರಲೀ ತತ್ವದರ್ಥವ ನರಕ ಯಾತನೆ ಕೊನೆಗು ತಪ್ಪದು | ತರಿಯೆ ಸಂಚಿತವನ್ನ ಅಷ್ಟಾಕ್ಷರಿಯನರಿಯಣ್ಣಾ || ಪರಮ ಗುರುವಿನ ಪದವ ಪಿಡಿದು ಅರಿಯೆ ನಿನ್ನನು ನೀನು | ಗುರುಣಾಂ ಗುರುವೆನಿಸಿ ಇಹಪರದಿ ಸೌಖ್ಯವ ಪಡೆವೆ ಕೇಳಣ್ಣಾ || ೫ || ಅರಿಯಲೀ ತತ್ವಾರ್ಥನು ನೀ ಧರೆಗನಾದಿಯ ಮೂರ್ತಿ ಎನಿಸುವ | ಪರಮ ಸದ್ಗುರುವರನ ಕುರುಹನು ಪೇಳ್ವೆ ಕೇಳಣ್ಣಾ || ಧರಣಿಯೊಳು ಮೆರೆಯುತಿಹ ರಂಭಾಪುರದಿ | ಶ್ರೀಗುರುರೇಣುಕಾರ್ಯನ ಚರಣ ಕಮಲವ ಪಿಡಿಯೆ ಸತ್ಯದಿ ಮುಕ್ತಿಯಹುದಣ್ಣಾ || ಪ || ಏನ ಗಳಿಸಿನ್ನೇನ ತಿಳಿದಿನ್ನೇನು ಫಲವಣ್ಣಾ ||

**ರಾಗ-ತಾಳ-ಆದಿತಾಳ**

ದಯಮಾಡು ಎನ್ನ ಶ್ರೀಗುರುವೇ ನಿನ್ನ ದಯವ ಬೇಡುವೆನಯ್ಯ | ರೇಣುಕಾ ಪ್ರಭುವೇ | ದಯವಮಾಡೈ | ಭಜಕರಕ್ಷಕ ದಯವ ಮಾಡೈ | ಕುಜನ ಶಿಕ್ಷಕ ದಯಮಾಡೆನಗೊಲಿದು ಪಾಲಿಸು | ಭಯನಿವಾರಣ ಭಕ್ತವತ್ಸಲ || ೧ || ಹಿಂದೆ ಭಕ್ತರನೇಕರುಗಳ ಮುದದಿಂದ ಪಾಲಿಸಿದಂತೆ | ನೀನೇ ದಯಾಳು ಹಿಂದಣ ತವ ಚರಿತೆಗಳ | ಮುದದಿಂದ ಕೇಳಲ್ಕೆ ಆಚರಿತೆಯು ಬಹಳಾ | ತಂದೆ ನಿನ್ನಯ ಮಹಿಮೆಗಳ ಒಂದೊಂದು ಬಣ್ಣಿಸಲೆನಗೆ ಅಳವೇ ಒಂದನು ನಾನರಿಯೆ ನೀ ಕೃಪೆಯಿಂದ ದಯಮಾಡೆನಗೊಲಿದು ಬೇಗ || ೨ || ಯುಗಯುಗದೊಳಗು ನೀನೆಯಂತೇ ಸರ್ವಯುಗಕೆಲ್ಲಾ ಮೊದಲು ನಿಷ್ಕಳ ನೀನೆಯಂತೇ | ಅಗಣಿತವಹ ಭಕ್ತರಂತೇ | ಈ ಜಗಕೆಲ್ಲಾ ಘನಮಹಾ ವಾಕ್ಯವಾ | ಪೇಳ್ದೆಯಂತೇ ನಿಗಮಗೋಚರ ನಿನ್ನ ಘನಪದವಿಗಳವನು | ಏನೆಂದು ಪೊಗಳಲಿ ಬಗೆಯದೆನ್ನೊಳು ಪಕ್ಷಪಾತವ ಮೈದೋರೊ ಬೇಗಾ || ೩ || ವೀರಪೀಠೇಶ ನೀನಂತೇ ಮೆರೆವ ವೀರಪೀಠದಿ ಪೂಜೆ ಕೈಗೊಳ್ವೆಯಂತೆ | ಕಾರಣ ಗುರುವು ನೀನಂತೇ ಮುಕ್ತಿ ಸೇರಲು ತವಪದ ಒಂದೇ ಸಾಕಂತೇ || ೪ || ಧಾರುಣಿಯ ಭಜಕರನು ಪಾಲಿಸೆ ಸಾರಿ ರಂಭಾಪುರದಿ ನೆಲಸಿಹ ವೀರಪೀಠೇಶ್ವರನೆ ನಿನ್ನಯ ಕೋರಿ ಭಜಿಪನ | ಪೊರೆಯೊಬೇಗಾ || ೫ || ದಯಮಾಡೊ ||

**ರಾಗ-ತಾಳ-ಅಟ್ಟತಾಳ**

ಪರಿಣಯವಾದೆ ನಮ್ಮ ಸದ್ಗುರುರಾಯನ | ಪರಿಣಯವಾದೆನೆ ಗುರು ರೇಣುಕಾರ್ಯನಾ | ಮರಣವಿಲ್ಲದ ವರ ದೊರಕಿತು ಸುಕೃತಾದಿ || ೧ || ದುರಿತಾವ ತರಿದಾವನ | ಈ ಜನ್ಮವ | ಪರಮಪಾವನ ಗೈದವನಾ | ಅರಿಯೆ ನಿನ್ನನು ನೀನು ಜರಮೃತಿ ಇಲ್ಲೆಂಬಾ ಕುರುಹುಗಳೆಲ್ಲಾವ | ಕರುಣಾದಿ ವರೆದಾನಾ || ೨ || ನಯನಾದಿ ನಯನಂಗಳ | ತೋರುತಾಪಾಲ ನಯನದ | ಕುರುಹುಗಳ ದಯದಿ ತೋರಿಸಿ ಸರ್ವಮಯನು ನೀ | ನಿನಗೆಮ್ಮ ಭಯವಿಲ್ಲವೆನುತಲಿ | ಜಯಘೋಷವ ನೊರೆದನ || ೩ || ವರರಂಭಾಪುರ | ವರನ ಸದ್ಗುರುವೆಂದು ಧರೆಯೊಳು ಮೆರೆಯುವನ | ವರ ಜ್ಞಾನಭಂಡಾರದರಸುತನವ ನಿತ್ತು ಮರಳಿ ಜನ್ಮಿಸದಂತೆ ಪೊರೆದ ಶ್ರೀಗುರುವರನಾ || ೪ || ಪರಿಣಯ ||

**ರಾಗ-ತಾಳ-ಅಟ್ಟತಾಳ**

ನೋಡಿದ್ಯಾ ಸಖಿ ನೋಡಿದ್ಯಾ | ನೋಡುವ ನೋಟದಿ | ನೋಡಿದ್ಯಾ ಸಖಿ ನೋಡಿದ್ಯಾ || ೧ || ನೋಡಿ || ಅರಿವೆ ಸ್ವಯಂಜ್ಯೋತಿ ಅರಿತು ನಿನ್ನನು ನೀನು ವರ ಜ್ಞಾನಾಕಾಂತೆಯಾಗಿರು | ಎಂದ ಮಾರ್ಗವಾ || ೨ || ನೋಡಿ || ಕೋಟಿ ಸೂರ್ಯರು ಮೂಡಿದಂತೆ ತೋರುವ ನಿನ್ನ

ನೀಟಾದ ನೋಟದ ಕೂಟದ ಅಚಲವ || ೩ || ನೊಡಿ || ಧರೆಯೊಳಧಿಕ | ರಂಭಾ ಪುರದೊಳು ನೆಲಸಿಹ ಗುರು ರೇಣುಕರು ಕೊಟ್ಟ | ಅರಿವಿನ ಮಾರ್ಗವ || ಪ || ನೋಡಿ ದ್ಯಾಸಖಿ ನೋಡಿದ್ಯಾ ||

**ರಾಗ-ತಾಳ-ಅಟ್ಟತಾಳ**

ಶ್ರೀಗುರುವೇ ದಯಮಾಡು | ದಯಮಾಡು | ಕನಿಕರದಿ ನೋಡು ಪ || ಅ || ಶ್ರೀಗುರುವೆ ದಯಮಾಡು ಭವ ಭಯರೋಗವನು ನೀಗಾಡು | ನೀಕೃಪೆಯಾಗಿ ಸೌಖ್ಯವ ನೀಡು | ನಾಸಿರ ಬಾಗಿಹೆನು | ದರುಷನವ ಕೊಡು ಕೊಡು || ೧ || ಪ || ಶ್ರೀ ಸಂಗದಲಿ ದುಸ್ಸಂಘವೆಂದೆನಿಪ | ಸಂಗವನು ಕೊಡದೆ ನಿಸ್ಸಂಗಿ ಎನ್ನಿಸು ಎನ್ನ ಗುರು ದೇವ | ಸಂಗವಿದ್ದರು ಸತ್ಯವಂತರ | ಸಂಗದೊಳಗೆನ್ನಿರಿಸಿ | ಪೊರೆಯಯ್ಯಾ ಮಂಗಳಾಂಗನೆ ನಿನ್ನ | ಘನ ಪಾಂದಗಳಿಗೆ | ವಂದಿಪೆನು ರೇಣುಕಾ || ೨ || ಪ || ಶ್ರೀ ಪಾಶವೆಂಟನು ಕಡಿದು | ಗುರುಪಿಡಿದು ಅಷ್ಟಾಕ್ಷರಂಗಳ ಧ್ಯಾನದಲಿ | ಚಿತ್ತವನು ವಳ ಶಳದು ಈಶ ತ್ರೈಜಗದೀಶ ಗುರುರೇವೇಶ | ಪೊರೆಯಂದಾಮಹಾ ನಿಧಿ ಧ್ಯಾಸದಲಿ ಬೆಳಗುತಿಹಸತ್ಸಹವಾಸವನು | ಸಾರ್ವದವು ಕೊಡು ಕೊಡು || ೩ || ಪ || ಶ್ರೀ ಕೆಡುವದೀತನು ವೆಂದು | ಯೋಚಿಸದೆ | ನುಡಿ ಬದ್ಧವಿಲ್ಲದೆ ನಡೆನುಡಿಗಳೊಂದಾಗಿ ಸಮನಿಸದೆ | ಕೆಡಿಸಿತನುವನು ವಿರತಿ ಬಲಿಸದೆ ನಡೆಯೊಳಗೆ ವಂಚಿಸುತ | ಕೆಡುತಿಹ ಕಡು ದುರಾತ್ಮಕರೊಡನೆ ಬೆರೆವುದ | ಕೊಡದಿರೈ ರಂಭಾಪುರೀಶನೆ || ಪ || ಶ್ರೀಗುರುವೆ ದಯ ||

**ರಾಗ-ಬೇಹಾಗ್, ತಾಳ-ಆದಿತಾಳ**

ಜಯ ಜಯ ಶ್ರೀಗುರು ರೇವ ಸಂಜೀವ || ೧ || ಪ || ಜಯ ಜಯ ಶರಣರ ಹೃದಯಾದಿ ದೇವ || ೨ || ಪ || ಜಯ ಆಗಮಧ್ಯಾಯನೇ ಯೋಗಿಜನ | ವಂದಿತನೆ ಬಾಗಿ ಶಿರವ ತವ ಚರಣ | ದೊಳೆರಗುವ ತರಳನ | ಪೊರೆವುದು ಭರವಸೆ ಯನಗೆ || ೩ || ಪ || ಜಯ ವಂದೆರಡಾರೆಂಟು ವರ್ಣದ ಮನುಗಳ ಚಂದವ ನರುಹಿದೆ | ಸುಂದರ ಮೂರುತಿ ಗುರುಸಂಜೀವ || ಪ || ಜಯ ಜಯ ಶ್ರೀಗುರು ರೇವ ಸಂಜೀವ ||

**ರಾಗ-ತಾಳ-ಆದಿತಾಳ**

ಕಾಂತಾಮಣಿ ಕರೆದು ಕರೆದು ತಾರೆನ್ನಾತ್ಮ | ಜ್ಞಾನಾನಂದನ || ೧ || ಪ || ಕಾಂತಾ || ಉದಯಕಾಲದೊಳೆದ್ದು ಅವರನು ಮುದದಿ | ಧ್ಯಾನವ ಮಾಳ್ಪನು ಚದುರೆ ಎನಗೆ ಮೋಕ್ಷವುಂಟು ಕನಸು ಎಂಬ ಕತ್ತಲೆಯ | ಪಾರುಮಾಡಿದ ಧೀರ ಸಂಜೀವನ | ಎನ್ನಾತ್ಮ ಜ್ಞಾನಾನಂದನಾ || ೨ || ಬಾಲ್ಯತನದಲಿ ಗುರು ತಾಯಿಯಂದದಿ ಹಾಲನೆರೆದು | ಜೀವಭ್ರಾಂತಿಯ ಬಿಡಿಸಿದ ಪರಮಾತ್ಮನ || ೩ || ಅರ್ಧ ರಾತ್ರೆ ಸಮಯದಲ್ಲಿ ನಿದ್ರೆಗೈಯ್ಯುತಲಿರ್ಥನೆ | ಮುದ್ದು ಜಂಗಮ ರೂಪ ತಾಲಿ || ಗುರು ತಂದೆಯಂದದಿ ಆತ್ಮಭಾವನೆ ತೋರಿ | ಇದ್ದು ಮಾಯವಾದನೆ || ಪ || ಕಾಂತಾಮಣಿ ಕರೆದು ತಾರೆನ್ನಾತ್ಮ ಜ್ಞಾನಾನಂದನ ||

**ರಾಗ-ತಾಳ-ಅಟ್ಟತಾಳ**

**(ಶ್ರೀಗುರುಸ್ತೋತ್ರ ಷಟ್ಪದಿ)**

ಮನವ ಜೈಸಲಿಬೇಕು ಎಂದಡೆ | ತನಗೆ ತಮ್ಮಪ್ಪನಿಗೆ ಅಳವೇ | ಮನವು ವಿಶ್ವಾಕಾರಮಾಗಿದೆ ಮಾಯೆ ಯೆನು ಕೂಡಿ || ಮನವ ಜ್ಞಾನಾಗ್ನಿಯಲಿ ಸುಟ್ಟಡೆ | ತನಯ ಮೊಳೆಯದೆನುತ್ತು || ವರ ಜ್ಞಾನವ ನರುಹಿದ ಗುರುವೆ | ರೇವಣಸಿದ್ಧ ಶರಣಾರ್ತಿ || ೧ || ವಿದ್ಯೆ ಗಡಿ ಮಿತಿಯುಂಟು ಬುದ್ಧಿಗಡಿ ಮಿತಿ ಇಲ್ಲ | ಬುದ್ಧಿವಂತರಿದ ತಿದ್ದಿಕೊಂಬುದು | ಗುರುಮುಖದಿ ನೋಡಿ || ಗುರುವಿಗಿಮ್ಮಿಗಿಲಿಲ್ಲ | ಆ ಸದ್ಗುರುವಲ್ಲದಿನ್ನು ಬೇರಿಲ್ಲ | ಗುರುವೆ ಸರ್ವಾಧಾರವೇ ಮನಕೆ || ೨ ||

**(೫೯ನೇ ತತ್ತ್ವ) ರಾಗ-ತಾಳ-ಅಟ್ಟತಾಳ**

ಮನವ ನಿಲ್ಲು ಔಷಧವ ಕೊಡು ಗುರುವೇ | ರೇಣುಕನೇ ಪ್ರಭುವೆ || ಅ-ಪ || ಮನವ ನಿಲಿಸಲು ಭವಗಳೆಲ್ಲವು ತನಗೆ ತಾನೇ | ಪಾರಿಪೋಪವು ಎನುತ ಕೋರುತ್ತಿರುವೆ ನದರಿಂ || ಚಿನುಮಯನೆ ನೀ ಬೇಗ | ಕರುಣಿಸಿ || ೧ || ಹೀನಜನರೊಳು ಕೂಡಿ ನಲಿದಾಡಿ ಭಕ್ತಿಯನು ತೊರೆದು | ಜ್ಞಾನಹೀನರ ಕೂಡಿ ಒಡನಾಡಿ ಭಾನುಕೋಟಿ ಪ್ರಕಾಶ ತವಪದ ಧ್ಯಾನ ಪಾರಾಯಣವ ಮರೆದು | ಕೋಣನಂದದಿ ತಿರುಗಿ ತಿರುಗಿ ನಾನಾ ವಿಧ ದುಃಖದಲಿ ಮುಳುಗುವ || ೨ || ಹಿಂದೆಬಹ ದುಃಖಗಳ ಕಾಣದಲೆ ಈ ವಿಷಯ ಸುಖದಲಿ ನೊಂದು ಹೋಗುವೆನೆಂದು ಅರಿಯದಲೆ | ಚಂದದಿಂದಿಹುದೆಂದು ಜಗದಾನಂದದೊಳು ಹೊರಳಾಡಿ ನಿಮ್ಮಯ | ಸುದರಂಘ್ರಿಯ ಮರೆದು ಕೋಡಗನಂದದಲಿ ಥಕಥಕನೆ ಕುಣಿಯುವ || ೩ || ದುರಿತ ಹರನಾದೆನ್ನ ಗುರುರಾಯ ಘನ ಶಿವಾಯ | ಕರುಣಾಕರ ಜಯ ರೇಣುಕಾಚಾರ್ಯ ಪರಮಪುರುಷನೆ ಧರೆಯೊಳಿರುತಿಹ || ಕೊರತೆ ಎಲ್ಲವ ತರಿದು ಜಾಗ್ರತೆ ನಿರುತ ಸಂಜಿವನನು ನಿನ್ನಯ ಚರಣಕೆರಕವಮಾಡಿ ದಯದಿಂ || ಪ || ಮನವ ನಿಲು ಔಷಧವ ಕೊಡು ಗುರುವೇ ||

**ರಾಗ-ತಾಳ-ಅಟ್ಟತಾಳ**

ಮನವ ನಿಲಿಸುವ ಮದ್ದ ಕರುಣಿಸಿದ | ಗುರುರಾಯನೊಲಿದು || ಪ || ಮನವ ನಿಲಿಸುವ ಮದ್ದು ಭಕ್ತರ ಸವಿನುಡಿಗೆ ಘನ ಮದ್ದು | ಸುಖವನು ಭವಿಪನಿಗೆ ಶರಹದ್ದು || ಇಲ್ಲಿಗೆ ಜನನ | ಮರಣವೇ ರದ್ದು ಎಂಬೀ ಮನ || ೧ || ಮರದು ಬಂದೀ ಮರ್ತ್ಯಲೋಕದಲಿ ನರನಾಗಿ ಜನಿಸಿ | ದುರಿತ ಕರ್ಮಗಳೆ ಸಗಿ ಬಹುವಿಧದಿ ಮರ ಮರಳಿ ಜನಿಸುತ್ತೆ || ಬಡತನವೆರಸಿ ಬಹು ವಿಧ ಕೊರಗಿ ದುಃಖಿಪ ಉರುದರಿದ್ರದ ವ್ಯಥೆಯನಿದು | ಪರಿಹರಿಸುವದು ಎಂದೆನುತ ಮೋದದಿ || ೨ || ಅವನಿಯೊಳಗತಿ ಪಾಪವನು ಗೈದು | ದುಃಖದಲಿ ಕೊರಗಿ ಭವದಿ ಮುಳುಗಿಹ ಹೀನ ಮಾನವಗೆ || ಜವನ ಸೆರೆಯನು ಬಿಡಿಸಿ ಜಾಗ್ರತೆ ಜವದಿ ಕಾಯಲು ಶ್ರೇಷ್ಠಮಾದುದು ಭುವನದೊಳು ಘನತತ್ವ ಮಸಿಯೆ ಪ್ರವಿಮಲಾನಂದಾತ್ಮವೆನುತಲಿ || ೩ || ಆದಿಮಧ್ಯಾಂತಗಳ ಮೂಲವಿದು ಘನ ಮಹಾವಾಯವು | ಮೋದದಿಂ ಸರ್ವರೊಳು ತುಂಬಿಹುದು || ಮೇಧಿನಿಯೊಳಾರಾ ದೊಡೆಯು ಇದ ಸಾಧಿಸಲ್ಕಿಹ ಪರದ ಸೌಖ್ಯವ ಆದರದಿ | ತಾ ಕೊಡುವದೆನುತ ಅನಾದಿ ಗುರು ರೇಣುಕನು ಕೃಪೆಯಿಂ || ಪ || ಮನವ ನಿಲಿಸುವ ಮದ್ದ ಕರುಣಿಸಿದ ||

**ರಾಗ-ತಾಳ-ಆದಿತಾಳ**

ಪೋಗುವೆಯಾ ಮಗಳೆ | ಗಂಡನ ಮನೆಗೆ ಪೋಗುವೆಯಾ ನೀನು || ಪ-೧ || ಹುಟ್ಟಿದ ಮನೆಗೆ ಕೀರ್ತಿಯ ತರಲು | ಮೆಟ್ಟಿದ ಮನೆಯೊಳು ಸುಗುಣೆಯು ಎನಿಸಿ | ಸೃಷ್ಟಿಯೊಳಾದರ್ಶಸತಿಯು ಎಂದೆನಿಸುತಾ ಶ್ರೇಷ್ಠಮಾದ ಕೀರ್ತಿಯ ತರಲು || ೨ || ಅತ್ತೆ ಮಾವರಿಗೆ ಅತಿ ಪ್ರೀತಿಯಲಿ ಅತ್ತಿಗೆ ನಾದಿನಿಯರ ಸಖತನದಲ್ಲಿ | ಮತ್ತೆ ಪತಿಗೆ ಮಾರುತ್ತರ ವೀಯದೆ ಉತ್ತಮ ಸತಿ ಎನಿಸುತ್ತೆ ಮೆರೆಯಲು || ೩ || ಕಾಮನಪಾಶ ಕಡಿಕಡಿದಿಡುತೆ ಶ್ರೀಮತಿ ಇವಳೆಂದೆನಿಸಿಕೊಳುತೆ | ಸ್ವಾಮಿ ಶ್ರೀಗುರು ರೇಣುಕರನು ಧ್ಯಾನಿಸಿ ಆ ಮಹಾ ಮೋಕ್ಷವ ಪಡೆದಾನಂದಿಸಿ ಸುಖಿಸಲು || ಪ || ಪೋಗುವೆಯಾ ಮಗಳೇ ಗಂಡನ ಮನೆಗೆ ಪೋಗುವೆಯಾ ನೀನು ||

**ರಾಗ-ತಾಳ-ಅಟ್ಟತಾಳ**

ಬೋಧಿಸೆನ್ನಯ ಗುರುವೇ ನಿನ್ನಯ್ಯ ಘನಪಾದವ ನಂಬಿರುವೆ || ಪ || ವೇದಂಗಳಿಗೆ ಮೋದಲಾದೀಯ | ಮೂರ್ತಿಯೆ | ನೀ ದಯಮಾಡಿ ಅನಾದೀಯ ಗುರುವರ್ಯ | ಮೂರ್ತಿಯೆ ನೀ ದಯಮಾಡಿ ಅನಾದೀಯ ಗುರುವರ್ಯ || ೧ || ಸೃಷ್ಟಿಗೆ | ಮೊದಲಾವುದು | ಇರ್ದುದು ಮತ್ತೀ | ಸೃಷ್ಟಿತಾನೆಂತಾದುದು | ಸೃಷ್ಟಿಯು | ಆವಸ್ವರೂಪದಿಂದಾದುದು | ದ್ರಿಷ್ಟಿತ್ರಯನೆ | ದಯವಿಟ್ಟು ನೀನಿದನೆಲ್ಲ || ೨ || ಆದಿಯೊಳ್ವೇದಂಗಳ | ಸೃಷ್ಟಿಯಗೈದ | ವೇದದಂತರ್ಗತಗಳ | ವೇದಂಗಳಿಮ್ಮೈದ | ಸೃಷ್ಟಿ ಸ್ಥಿತಿ ಲಯಂಗಳ | ವೇದಂಗಳೆನ್ನೋಳಿರುತಿರ್ಪ | ಭಾಗಂಗಳ || ೩ || ನಿರ್ಮಲೋದಕವೆಂಬುವ | ತೀರ್ಥದಿ ಮಿಂದು ಕರ್ಮವ | ಕಳೆದುಳಿವ | ಮರ್ಮವ ತಿಳುಹಿಸಿ ಕರ್ಮರಹಿತಮಾದ | ನಿರ್ಮಲ ಮನಸಿನ ನೀಲದನುಭವವನ್ನ || ೪ || ಧರೆಯೊಳಗೇಳುಕೋಟಿ | ಮಹಮಂತ್ರಗಳ್ಮೆರೆವ ವೆನ್ನುತ ಕೇಳಿಹೆ ಮರಳಿ ಜನ್ಮಕೆ ತರುವ | ತಿರುಮಂತ್ರವರುಹದೆ | ವರಮೋಕ್ಷ ಕೊಡುವಂತ ಗುರು ಮಂತ್ರವನು ದಯದಿ || ೫ || ವರನಿಷ್ಕಳವ ಸೇರಲು | ಸೋಪಾನಂಗಳ್ಮೆರೆವವು ಪದಿಮೂರೆಂದು ವರೆಯುವ ಶ್ರುತಿನಂಬಿ ನೆರೆಭ್ರಾಂತನಾದೆನ್ನ ಶಿರದಮೇಲ್ಕರವಿಟ್ಟು

ಹರಸಿ ಆ ವಿವರವ || ೬ || ಇಷ್ಟ ಪ್ರಾಣವು ಭಾವ ಗುಟ್ಟನು | ಪೇಳಿ ಮುಟ್ಟಲಾಗದ ಲಿಂಗವ | ನಿಷ್ಠೆಯಿಂ | ಪೂಜಿಪ ಗುಟ್ಟನ್ನು | ತಿಳುಹಿಸಿ ಸೃಷ್ಟಿಯೊಳೆನ್ನು ಶ್ರೇಷ್ಠನೆಂದೆನಿಸಲು || ೭ || ಮರಳಿ ಜನ್ಮಿಸದಂದದಿ ಈ ಜನ್ಮವ ಪರಮಪಾವನ ಗೈಯಲು | ಗುರು ರೇಣುಕನೆ ನಿನ್ನ ಚರಣದೊಳ್ಬೆರೆಯುವ | ಅರಿವಿತ್ತೀ ತರಳನ ಪೊರೆ ರಂಭಾಪುರನಿಲಯ | ಬೋಧಿಸೆನ್ನಯ ಗುರುವೆ | ನಿನ್ನಯ ಘನಪಾದವ ನಂಬಿರುವೆ || ೮ ||

**ರಾಗ-ತಾಳ-ಅಟ್ಟತಾಳ (ಮಂಗಳಾರತಿ)**

ಮಂಗಳಂ | ಗುರು | ರೇಣುಕಾಚಾರ್ಯರಿಗೆ | ಜಯ ಮಂಗಳಂ | ಮುಕ್ತಾಂಗಿಯರಸನಿಗೆ ಮಂಗಳಂ || ೧ || ವರಯೋಗನಿಷ್ಠೆಯೊಳ್ನಿರತನೆಂದೆನಿಸಿರ್ದ ನೆರೆಪುಣ್ಯಪುರುಷ | ಅಗಸ್ತ್ಯನಿಗೆ | ಕರುಣಿಸಿ | ಶಿವತತ್ತ್ವದುಪದೇಶವನು ಗೈದ | ವರಜಗದ್ಗುರು ರೇಣುಕಾರಾಧ್ಯರಿಗೆ || ೨ || ಹಿರಿಯನಾಗ್ನೆಯ | ಪೂರ್ತಿಗೊಳಿಸೆ ವಿಭೀಷಣ | ಗುರುವೆ ಎನ್ನಿಷ್ಟಾವ | ಸಲಿಸೆನಲು | ಶರಣನ ಮನಪೂರ್ತಿ ಮುಕ್ಕೋಟಿ ಲಿಂಗವ ಕರುಣಿಸಿ ಕರಕಿತ್ತ ಗುರುವರ್ಯಗೆ || ೩ || ಮೂರು | ಕೋಟಿ ಲಿಂಗಕೆ | ಒಂದೆಸಾರಿ | ಪೂಜೆಯಗೈಯ್ಯಬೇಕೆನ್ನಲು | ತೋರಿ ಒಂಭತ್ತುಕ್ಕೋಟಿ | ಗುರುರೂಪವನು | ಒಂದೇಸಾರಿ ಪೂಜೆಯಗೈದ ಗುರುವೀರಗೆ || ೪ || ಮಂಗಳ | ಪರಮಪಾವನ | ಜಗದ್ಗುರು ಶಂಕರಾರ್ಯಗೆ | ಚಂದ್ರವರಮೌಳೇಶ್ವರ ಲಿಂಗವ | ಹರಸಿ ತಾ ಕರಕಿತ್ತು | ದ್ವಾದಶ ಸಾಹಸ್ರ ಚರಲಿಂಗ ಮಾಧ್ಯಕ್ಷನಾದವಗೆ || ೫ || ಮಂಗಳ || ಗೋರಕ್ಷನ ಗರ್ವವ ಮುರಿದು ಯಕ್ಷಮಿಥುನರ ಘೋರ ರಾಕ್ಷಸರೂಪಗಳನು ಸುಟ್ಟು | ಸಾರಿ ಕಂಚಿಗೆ ಅಳ್ಳಾಡ್ನಾಥನ ಗುರುರ್ವಿಷ್ಣು ಗುರುರೇವ ಮಹೇಶ | ಗುರುಸಾಕ್ಷಾತ್ಪರಬ್ರಹ್ಮ ಗುರುವರ್ಯಗೆ ನರರಿಂಗೆ ಜ್ಞಾನವನೊರೆದು ಪಾವನಗೈವ ಗುರುಕುಲದೊಳಗ್ರ ಗಣ್ಯನಿಗೆ || ೭ || ವರಜ್ಞಾನೋದ್ಧಾರಕ್ಕೋಸುಗ ಕೊಲ್ಲಿಪಾಕಿಯೋಳ್ಮೆರೆವ | ಸೋಮನಾಥೇಶ್ವರಲಿಂಗದಿ ಗುರು ರೇಣುಕಾಚಾರ್ಯನೆಂಬೊ ನಾಮದೊಳವ ತರಿಸಿ ಜ್ಞಾನಾನಂದಗರಿವಿತ್ತಗೆ || ೮ || ಮಂಗಳಂ ಗುರು ರೇಣುಕಾಚಾರ್ಯರಿಗೆ ಜಯಮಂಗಳಂ ಮುಕ್ತಾಂಗಿಯರಸನಿಗೆ || ಮಂಗಳಂ ||

## ವಿಚಾರ ಮಾಡೆ ತಂಗ್ಯಮ್ಮ

ಗುರುಮುಟ್ಟಿ ಗುರುವಾಗಿ ಅರುವಿನೊಳ್ ಅರುವಾಗಿ
ಬೆರೆತು ನಾದಬಿಂದು ಸಂಮೇತ ಭರಿತಳಾಗೆ ತಂಗ್ಯಮ್ಮ || ಪ ||

ಬಸವಾದಿ ಪ್ರಮಥರು ಉಸುರೀದ ವಾಕ್ಯವು
ಕೆಸರಿಲ್ಲ ಅದರೋಳು ಅನಿತು ವಿಚಾರ ಮಾಡೆ ತಂಗ್ಯಮ್ಮ || ೧ ||

ಆದಾರ ಚಕ್ರಕ್ಕೆ ನಾಲ್ಕು ಅಕ್ಷರ ದಳಕಮಲ ಆಚಾರಲಿಂಗ
ವಿಚಾರ ಮಾಡೆ ತಂಗಮ್ಮ || ೨ ||

ಸ್ವಚಿಷ್ಠನ ಚಕ್ರಕ್ಕೆ ಆರು ಅಕ್ಷರು ದಳಕಮಲ
ಗುಹೇಶ್ವರಲಿಂಗ ಬೆರೆತು ನೀನು ಮುಕ್ತಳಾಗೆ ತಂಗಮ್ಮ || ೩ ||

ಮಣಿಪೂರಕ ಚಕ್ರದಲಿ ಹತ್ತು ಅಕ್ಷರ ದಳಕಮಲ
ಶಿಕಾರಪ್ರಣವ ಶಿವಲಿಂಗ ನಿಷ್ಠೆಯಿಂದ ಪೂಜೆ ಮಾಡೆ ತಂಗ್ಯಮ್ಮ || ೪ ||

ಅನಾಥ ಚಕ್ರದಲಿ ಹನ್ನೆರಡು ಅಕ್ಷರ ದಳಕಮಲ
ವಕಾರ ಪ್ರಣವ ಜ್ಯೋತಿರ್ಮಯ ಲಿಂಗ ಪ್ರಕಾಶ
ಮಾಡೆ ತಂಗಮ್ಮ || ೫ ||

ವಿಶುದ್ಧಿಯ ಚಕ್ರದಲಿ ಹದಿನಾರಕ್ಷರ ದಳಕಮಲ
ಯಕಾರ ಪ್ರಣವ ಸದಾಶಿವಲಿಂಗ ಪ್ರಸಾದನರ್ಪಿಸಿ
ತೃಪ್ತಳಾಗೆ ತಂಗ್ಯಮ್ಮ || ೬ ||

ಅಗ್ನೇಯ ಚಕ್ರದಲಿ ಎರಡು ಅಕ್ಷರದಳ ಕಮಲ
ಓಂಕಾರ ಪ್ರಣವ ಶಿರಾ ಚಕ್ರದನೆಲೆಯನು
ನೋಡೆ ತಂಗ್ಯಮ್ಮ || ೭ ||

ಶಿವಾ ಚಕ್ರದಲಿ ಸಹಸ್ರಾರು ಅಕ್ಷರ ದಳಕಮಲ
ಅಕಾರ ಪ್ರಣವ ಕೋಟಿಸೂರ್ಯ ಪ್ರಭೆಯನು
ನೋಡೆ ತಂಗ್ಯಮ್ಮ || ೮ ||

ಪಶ್ಚಿಮ ಚಕ್ರದಲಿ ಆರು ಅಕ್ಷರ ದಳಕಮಲ
ಉಕಾರ ಪ್ರಣವ ಚಂದ್ರ ಮಂಡಲ
ನವಕಲೆಗಳ ನೋಡೆ ತಂಗಮ್ಮ || ೯ ||

ಘತಾ ಚಕ್ರದಲಿ ಐದು ಅಕ್ಷರ ದಳಕಮಲ
ಮಕಾರ ಪ್ರಣವ ಜಂಗಮಲಿಂಗ
ಸುರಿಯುತ್ತಿರುವ ಸುರೆಯನು ಕುಡಿದು
ಜನನ ಮರಣದೊಳಾಗೆ ತಂಗ್ಯಮ್ಮ || ೧೦ ||

ತೇಜೋ ಚಕ್ರದಲಿ ಮೂರು ಅಕ್ಷರ ದಳಕಮಲ
ನಿಷ್ಕಳಂಕ ನಿಸೂನ್ಯಲಿಂಗ ನಿಗಮಾತೀತನೆ
ಅವಿತಳ ಪರಂಜ್ಯೋತಿ ಸ್ವರೂಪದಿ
ಲೋಹಳಾಗೆ ತಂಗ್ಯಮ್ಮ || ೧೧ ||

ಮಾಯಾ ಚಕ್ರದಲಿ ಎರಡು ಅಕ್ಷರ ದಳಕಮಲ
ಪ್ರಭುಲಿಂಗ ಪರಮ ಪ್ರಭುವಿನೊಳ್ ಬೆರೆತು
ನೀನು ಮುಕ್ತಳಾಗೆ ತಂಗಮ್ಮ || ೧೨ ||

ಗುರುಪಾದ ಸೇವೆ ತಾದೊರೆ ಕೊಂಡಿತಾದರೆ
ಪರಿದಪ್ಪ ಪಾಪ ಪರಿಮದು ಕರ್ಪೂರದ
ಗಿರಿಯು ಬೆಂದಂತೆ ಸರ್ವಜ್ಞ

ಸಣ್ಣನೆಯ ಮಳಲೊಳಗೆ ಸುಣ್ಣನೆಯ ಶಿಲೆಯೊಳಗೆ
ಬಣ್ಣಿಸಿ ಬರೆದ ಪಟದೊಳಗೆ ಇರುವಾಗ
ತನ್ನೊಳಗೆ ಇರದೆ ಸರ್ವಜ್ಞ

ಚಿತ್ತವಿಲ್ಲದೆ ಗುಡಿಯ ಸುತ್ತಿದಡೆ ಫಲವೇನು
ಎತ್ತು ಗಾಣವನು ಹೊತ್ತು ತಾ ನಿತ್ಯದಿ
ಸುತ್ತಿ ಬಂದಂತೆ ಸರ್ವಜ್ಞ

ಮನದಲ್ಲಿ ನೆನೆವಂಗೆ ಮನೆ ಏನು ಮಠ ಏನು
ಮನದಲ್ಲಿ ನೆನೆಯದಿರುವವನು ದೇಗುಲದ
ಕೊನೆಯಲ್ಲಿದ್ದೇನು ಸರ್ವಜ್ಞ

ಬಲ್ಲನೆಂಬುವ ಮಾತು ಎಲ್ಲವೂ ಹುಸಿಕಾಣೊ
ಬಲ್ಲಿರೇ ಬಲ್ಲನೆನೆ ಬೇಡ ಸುಮ್ಮನಿರ
ಬಲ್ಲವನೇ ಬಲ್ಲ ಸರ್ವಜ್ಞ

ಕೋತಿಗೆ ಗುಣವಿಲ್ಲ ಮಾತಿಗೆ ಕೊನೆಯಿಲ್ಲ
ಸೋತು ಹೋದವನಿಗೆ ಸುಖವಿಲ್ಲ ಅರಿದವಗೆ
ಜಾತಿಯೇ ಇಲ್ಲ ಸರ್ವಜ್ಞ

ಆನೆ ನೀರಾಟದಲಿ ಮೀನ ಕಂಡಂಜವುದೇ
ಹೀನ ಮಾನವರ ಬಿರುನುಡಿಗೆ ತತ್ವದ
ಜ್ಞಾನಿ ಅಂಜುವನೇ ಸರ್ವಜ್ಞ

ಸತ್ಯದಾನುಡಿ ತೀರ್ಥ ನಿತ್ಯರಾನಡೆ ತೀರ್ಥ
ಉತ್ತಮರ ಸಂಗವದು ತೀರ್ಥ ಹರಿವನೀ
ಕಿತ್ತಣದು ತೀರ್ಥ ಸರ್ವಜ್ಞ

ನೀಚರಾ ನೆರೆಯಿಂದ ಈಚಲ ಮರಲೇಸು
ಈಚಲೊಂದೆಡೆಗೆ ಉಪಕಾರಿ ನೀಚನು
ಈಚಲಿಂ ಕಷ್ಟ ಸರ್ವಜ್ಞ

ಕೊಟ್ಟದ್ದು ತನಗೆ ಬಚ್ಚಿಟ್ಟಿದ್ದು ಪರರಿಗೆ
ಕೊಟ್ಟದ್ದು ಕೆಟ್ಟತನ ಬೇಡ ಸ್ವರ್ಗದಲಿ
ಕೆಟ್ಟಿಹುದು ಬುತ್ತಿ ಸರ್ವಜ್ಞ

ಮಾತು ಬಲ್ಲಾಂತೆಗೆ ಯಾತವು ಸುರಿದಂತೆ
ಮಾತಾಡಲರಿಯದಾತಂಗೆ ಬರಿಯಾತ
ನೇತಾಡಿದಂತೆ ಸರ್ವಜ್ಞ

ಗುರುಗಳಿಗೆ ಹಿರಿಯರಿಗೆ ಶಿರಬಾಗಿ ಎರಗಿದರೆ
ನರಸುರರೊಲಿದು ಸಿರಿಸುರಿದು ಕೈಲಾಸ
ಕರತಲಾಮಲಕ ಸರ್ವಜ್ಞ

## ನೀವು ಕಾಣಿರಮ್ಮ ಪಾದಪೂಜೆ

ಪಾದಪೂಜೆಯ ಮಾಡಬೇಕಮ್ಮ | ಗುರುರಾಯನ
ಪಾದಪೂಜೆ ಮಾಡಬೇಕಮ್ಮ ||
ಪಾದಪೂಜೆ ಮಾಡಬೇಕು | ವೇದಗಳನೆ
ತಿಳಿಯಬೇಕು | ವಾದಿಸದೆ ತತ್ವ ಜ್ಞಾನದ ಹಾದಿಯನ್ನೆ
ತಿಳಿಯರಮ್ಮ || ಪ ||

ತನುವಿನಾಶೆಯ ಬಲ್ಲವರೆ ಕೇಳಿ ನಿಮಗೆ
ನೀವೇ ತಿಳಿಯಬೇಕಮ್ಮ ಜನನ ಮರಣ ಹರಣ
ಗಳನು ತನಗೆ ತಾನೆ ದೂರ ಮಾಡಿ
ವಿನಯದಿಂದ ಕೂಡಿರಮ್ಮ || ಪ ||

ರತ್ನ ಮಂಟಪ ನಿಲಿಸಬೇಕಮ್ಮ
ಅಜ್ಞಾನದಲ್ಲಿ ಸತ್ಯವಸ್ತು ಕಾಣದಲ್ಲಮ್ಮ
ಮುಕ್ತಿ ಪಾವನ ಮಾರ್ಗದಲ್ಲಿ ವಿರಕ್ತಿಯಮ್ಮ
ಚಲನೆಗಳನೆ ಕೃತ ಬಸವಲಿಂಗ ದೇವನ ಗೊತ್ತು
ನೀವು ಕಾಣಿರಮ್ಮ || ಪಾದಪೂಜೆ ||

ಇಂಥ ಜನ್ಮವ ಕಳೆದುಕೊಂಡರಿನ್ನೆಂಥ ಜನ್ಮವು
ಬರುವುದೋ ಅಂತರಂಗದಿ ಚಿಂತಿಸಿ ನೋಡಿನ್ನೆಂಥ
ಜನ್ಮವು ಬರವುದೋ ಎಂತೋ ಬಂತೋ ಕಾಕಕಾಳ
ನ್ಯಾಯದಂತೀ ಜನ್ಮವು ಇಂಥ ವೇಳೆಯ ಬಿಟ್ಟರೆ
ಇನ್ನೆಂಥ ಜನ್ಮವು ಬರುವುದೋ ನೀನು ಜ್ಞಾನಿಯಾದರೆ
ಎಷ್ಟೋ ಸಾರ್ಥಕವಾದುದು ನೀನೀ ಜನ್ಮ ಅಜ್ಞಾನಿಯಾದರೆ
ನಷ್ಟ ವ್ಯರ್ಥವಾದುದು ಭಕ್ತಿಯೇ ಕಾರಣ
ವಿರಕ್ತಿಗೆ ಯುಕ್ತಿಯೇ ಕರ್ಮವು ಭುಕ್ತಿ ವಿಷಯಾನಂದವು
ನಾರಿಮಕ್ಕಳ ಕಟ್ಟಿಕೊಂಡು ಬಾರಿಮನೆ ಕಟ್ಟಿದರು
ಪಾರಚಾಕಿಕಾರರಿಂದ ಮಂಚವೇರಿ ಇದ್ದರು

ತೀರಿದರೆ ಋಣ ತೀರಿ ಬೀರಿ ಪಾಶ್ಲಾಮನಾಳುಗಳು
ಬಂದೆಳೆವರೊ ನಾರಿ ಮಕ್ಕಳು ಸೇರಿಕೊಂಡು
ತೊರುಗಂಟೆಂದು ಕೆಳ್ವರು ಸೇರಿದಾತನು ಬಾರದೋದುದು

ನಾರಿಮಕ್ಕಳು ಯಾರಿಗಾರ್
ಸೇರಿದೇಹದಿ ಮೃತ್ಯವಲೀಯುವ ಧೀರಸ್ಯಾರವ
ತೋರು ತೋರ್ ಇಂಥ ಸಂಸಾರ ನಂಬಿಕೊಂಡು
ಅನಂತ ಜನ್ಮಗಳೆತ್ತಿದೆ ಶಾಂತಸದ್ಗುರು
ವರದ ಶ್ರೀಕಂಠನಂತನೋಳು ಬೆರೆಯದೇ || ಪ ||

## ಈಶನ ನೆನೆಯಂದನೊ

ಎಂತಾಥ ಗುರುನಾಥನೊ ನಮ್ಮ ಗುರು
ಬಹಳಂತಾ ಕರುಣುಳ್ಳಾತನೋ ಕಾಂತೆ ನೀ ಬಾರೆಂದು
ಏಕಾಂತ ಕರೆದೊಯ್ದು ಎಂಥಾಮಾತೇಳೋದನೋ
ಆರುಗುಣವ ಅಳಿಯನೆಂದನೊ ನಮ್ಮಗುರು ಮೂರು
ಗುಣವ ತಿಳಿಯೊಂದನೊ ಅಷ್ಟವೇದಗಳಿಂದ
ಕುಟ್ಟುಟ್ಟಿ ದೊಳ್ಳಾಡಿ ಗಾಳಿಗೆ ತೂರೆಂದನೋ
ಶರಣವ ಮಾಡೆಂದನೊ ಎನ್ನ ಶಿರದಲಿಕರವಿಟ್ಟು
ಕರಣ ಮೂರಲ್ ಕೂಡಿ ಕಳಸವ ತುಂಬಿಟ್ಟು
ಶರಣರಿಗೆ ಬೆಳಗೆಂದನೊ
ಸಾಧುವರ ನೆನೆಯೆಂದನೊ ಅವರ ಪಾದಕ್ಕೆ ಎರೆಗೆಂದನೊ
ಸಾಧು ಸತ್ಪುರುಷರ ಭೋದವ ತಿಳಿದರೆ ಭಾದೆ
ನಿಮಗಿಲ್ಲೆಂದನೊ ಆಸೆಯ ಬಿಡೆಂದನೊ
ನಿರಾಶೆಯೊಳ ಕೂಡೆಂದನೊ ಆಶಾಪಾಶಗಳೆಲ್ಲಾ
ನಾಶಮಾಡುವಂಥ ಈಶನ ನೆನೆಯೆಂದನೊ
ಆರ್ಗುಣವ ಅಳಿಯೆಂದನೊ ಇವು ಮೂರ್ಗುಣುವ
ಬಿಡೆಂದನೊ ಆರು ಮೂರು ಇವುಕಳಸವ ತುಂಬಿಟ್ಟು
ಶರಣರಿಗೆ ಬೆಳಗೆಂದನೊ ಸಂಶಯ ಬಿಡೆಂದನೊ
ನಿಸ್ಸಂಶಯದೊಳ್ ಕೂಡೆಂದನೊ
ಸಂಶಯ ಸಂಕಲ್ಪಗಳೆಲ್ಲ ಧ್ವಂಸವ ಮಾಡುವಂತ
ಶಿವಶರಣರಿವರೆಂದನೊ ||

ಪರಿ ಪರಿ ಬೋದವನು ಕರುಣದೊಳ್
ಭೋದಿಸಿ ಪೇಳಿದನು
ಅಂತಾರೆ ಗುರುಮಂತ್ರ ಮರೆತಾರೆ ಜನ್ಮ ಮರಣ

ವ್ಯರ್ಥವೇ ನೋಡೆಂದನೊ ಬೈಲಿಗೆ ಬೈಲೆಂದನೊ
ನಿರ್ಬೈಲೊಳ್ ಕಾದೆಂದನೊ ಬೈಲೊಳ್ ನೀರಲ್‌ಕೇರಿ
ಮೇಲಯ್ಯ ಗುರುಪಾದ ಆಲನೀರಲ್ಕೆರಿಯೊಳ್
ಆಡೆಂದನೊ || ಎಂತಾಥ ಗುರುನಾಥನೊ ||

## ಬೆರಳೊಳು ಜಪಮಣಿ ಎಣಿಸಿದರಿಲ್ಲ

ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕ್ತಿ
ಎಲೆಮೂಢ ಮನುಜ ದೊರೆಯದಣ್ಣ ಮುಕ್ತಿ || ಪ ||

ಆರು ಶಾಸ್ತ್ರಂಗಳ ಓದಿದರಿಲ್ಲ ಹದಿನೆಂಟು ಪುರಾಣ
ಕೇಳಿದರಿಲ್ಲ | ಮುರನ್ನೈಯನ ಕಂಡೆ ತಿಳಿದರು ಇಲ್ಲ
ದೀರನಾಗಿ ತಾ ತಿರುಸಿದರಿಲ್ಲ || ಪ ||

ಕೊರಳೊಳು ಮಾಲೆಯ ಧರಿಸಿದರಿಲ್ಲ
ಬೆರಳೊಳು ಜಪಮಣಿ ಎಣಿಸಿದರಿಲ್ಲ
ಮರುಳನಾಗಿ ತನ್ನ ಶರೀರಕ್ಕೆ ಬೂದಿಯ
ಮೂಷಿಕೊಂಡು ತಾತಿರುಗಿದರಿಲ್ಲ || ಪ ||

ನಾರಿಯ ಭೋಗವ ಧರಿಸಿದರಿಲ್ಲ | ತೀರ್ಥ
ಕ್ಷೇತ್ರಂಗಳ ತಿರುಗಿದರಿಲ್ಲ | ನಾರದ ವರದ
ಶ್ರೀಪುರಂದರ ವಿಠಲನ ಸೇರಿಕೊಂಡು ತಾ
ಪಡೆಯುವ ತನಕ || ಗುರುವಿನ ಗುಲಾಮನಾಗುವತನಕ
ದೊರೆಯದಣ್ಣ ಮುಕ್ತಿ ||

## ಹಮ್ಮಿನ ತನುಗುಣನೆಲ್ಲವ ಬಿಡಿಸಿದ ಚಿನ್ಮಯರೂಪನು

ಬ್ರಹ್ಮೋಪದೇಶವಾಯಿತಮ್ಮ | ನಿರ್ಗುಣ ಪರ
ಬ್ರಹ್ಮೋಪದೇಶವಾಯಿತಮ್ಮ |
ಕರ್ಮದ ಕತ್ತಲೆ ಮೂಲವಕೆಡಿಸಿ ನಿರ್ಮಲ ಜ್ಞಾನದ ಜೋತಿಯ
ನಿಲಿಸಿ | ಹಮ್ಮಿನ ತನುಗುಣನೆಲ್ಲವ ಬಿಡಿಸಿದ
ಚಿನ್ಮಯ ರೂಪನು ಗುರುಮುಖದಿಂದ || ಬ್ರಹ್ಮೋ ||

ಗುರುವೇ ಬ್ರಹ್ಮನು ಶ್ರೀವಿಷ್ಣು ಮಹೇಶ್ವರ
ನಿಜಗುರು ದೈವ ವೆಂದಯುತಾ | ಹರುಷದೊಳು ಅಷ್ಟಾಂಗದಿ
ಚತುರ್ವಿದ ಗುರುವಿನ ಸೇವೆಯಗೈಯುತಲಿರಲು

ಪರಿಪರಿ ಸಂಶಯನೆಲ್ಲವ ಬಿಡಿಸಿದ ಚಿನ್ಮಯ
ರೂಪನು ಗುರುಮುಖದಿಂದ || ಬ್ರಹ್ಮೋ ||

ಪುತ್ರಾಕ ಮೇಶ್ರೀ ವೃತದಿಂದ ಉತ್ತಮನಾದನು
ಪಂಚಾಮುದ್ರೆಯಿಡಿಸಿದ ರಹಸ್ಯವಾಗಿ ಷಡಾಕ್ಷರಿ
ಮಂತ್ರವ ಭೋದಿಸಿದ ಪಂಚಾಬ್ರಹ್ಮವ ಕರದೊಳು
ಪೂಜಿಸಿದ ಪಂಚಾಮೃತ ನೈವೇದ್ಯವ ಮೂಡಿಸಿದ
ಪಂಚಸೂತಕವನೆಲ್ಲ ಬಿಡಿಸಿದ
ಸಂಚಿತ ಕರ್ಮವ ನಳಿಸಿದ ಗುರುವು | ಹತ್ತು
ವಿಷಯಾಡಿ ಕೂಡಿರುವ ಈ ಮನಕೆ | ಸತ್ತು
ಚಿತ್ತಾದಂದದೊಳು ಬೆರಸಿ ನಿತ್ಯ ಸುಖಿಯೆಂದು
ಭೋದಿಸಿದ ಸತ್ತು ಹುಟ್ಟುವ ಸಂಕಟಕೆಡಿಸಿ || ಬ್ರಹ್ಮೋ ||

ಮಂತ್ರನ ಪಡೆದರ್ತಿಯಿಂದ | ಉತ್ತಮ ಸ್ವರ್ಗಕೆ
ಪೋಗಲು ಪುನರಪಿ | ಮರ್ತ್ಯಕೆ ಬೀಳುವೆ ಅದರಿಂ
ಸಂಚಿಯೇ | ಸ್ವಾರ್ಥಜ್ಞಾನದ ಸುಪುತ್ರನ ಪಡೆದರೆ
ಮುಕ್ತಿಯು ಲಭಿಸುವುದೆಂದನು ಗುರುವು || ಬ್ರಹ್ಮೋ ||

ಮೃತ್ಯು ಭಯವ ಪರಿಹರಿಸಿದ ಗುರುವು | ಸ್ವಾಮೀ
ರೂಪಿಗೆ ಮೋಹಿಸಿದೆ ಮನದೊಳಗಾತ್ಮರಾಮನು ತಾನೆಂದರಿಯುತ
ತಾಮಸ ಗುಣದೊಳು | ತಾಮಸ ಗುಣದೊಳು ಚರೆಯದಿರೆಂದಿಗು
ಪಾಮರ ಸಂಗವ ಮಾಡದೆ ಸಂತತಿ | ನೇಮದಿ
ಬ್ರಹ್ಮಾನಂದದೊಳ್ ಸುಚಿಸೆಂದು | ಸ್ವಾಮಿ ಶ್ರೀಗುರು
ಮಹಲಿಂಗನರುಪಿದ || ಬ್ರಹ್ಮೋ ||

## ಮಾತಾಡ್ ಮಾತಾಡ್ ಲಿಂಗವೇ

ಮಾತಾಡು ಮಾತಾಡು ಲಿಂಗವೇ | ಮಾತಾಡು ಕಾಶಿಯ ಲಿಂಗವೇ
ಮಾತಾಡದಿದ್ದರೆ ನಾ ತಾಳಲಾರೆನು ಲಿಂಗವೆ
ಗೋಕರ್ಣದಿಂದ ಯಾತ್ರೆಗೆ ನಾ ಬಂದೆ
ಮಾತಾಡು ಕಾಶಿಲಿಂಗವೇ || ಪ ||

ಮನವು ಮಜ್ಜನವೆಂಬೊ ಬಾವಿಗೆ ಮತ್ತೆ
ತನುವೆಂಬೊ ಕೈಲಾಸ ಲಿಂಗವೇ | ವನದೊಳಗಿರುವೊ
ಗೊನೆ ಹೊಂಬಾಳೆಯು ನಿನಗೆ ತಂದರ್ಪಿಸುವೆ ಲಿಂಗವೇ || ೧ ||

ಅಂಗೈಯೊಳಾರತಿ ಲಿಂಗವೆ | ಮತ್ತೆ ಮುಂಗೈಯೊಳ್
ಶಿವಗಂಟೆ ಲಿಂಗವೆ | ಕಣ್ಣುಗಳೆರಡು ಕಂಭೂಂ ಪುಷ್ಪವು
